ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 12 ಮಂಗಳವಾರ 2022

ಸಂಪುಟ: 43 | ಸಂಚಿಕೆ: 352 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚನೆ ಪ್ರಕ್ರಿಯೆಗೆ ಚಾಲನೆ

● ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಸಭೆ ● ಜನಪ್ರತಿನಿಧಿಗಳ ವ್ಯಾಪಕ ಬೆಂಬಲ: ಸ್ಥಳೀಯ ಸಂಸ್ಥೆಗಳ ನಿರ್ಣಯದೊಂದಿಗೆ ಸಮಗ್ರ ಮಾಹಿತಿ ಸಲ್ಲಿಕೆಗೆ ಜಿಲ್ಲಾಧಿಕಾರಿಗೆ ಹೊಣೆಗಾರಿಕೆ ● 10 ವರ್ಷಗಳ ಉದ್ದೇಶಿತ ಮಹಾಯೋಜನೆಗೆ ಅಂತಿಮ ರೂಪ ನೀಡುವ ಕಾಲ ಸನ್ನಿಹಿತ



ಬೃಹತ್ ಮೈಸೂರು ಮಹಾನಗರ ಪಾಲಿಕೆ ರಚನೆ ಸಂಬಂಧ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಧ್ಯಕ್ಷತೆಯಲ್ಲಿ ಸೋಮವಾರ ಸಭೆ ನಡೆಸಲಾಯಿತು.

ಮೈಸೂರು,ಏ.11(ಎಸ್‌ಬಿಡಿ)–'ಬೃಹತ್ ಮೈಸೂರು ಮಹಾನಗರ ಪಾಲಿಕೆ' ರಚನೆಗೆ ಪ್ರಾಥಮಿಕ ಪ್ರಕ್ರಿಯೆ ಆರಂಭಿಸಲು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಜನಪ್ರತಿನಿಧಿಗಳ ಸಭೆಯಲ್ಲಿ ಒಪ್ಪಿಗೆ ದೊರೆತಿದೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಸಭೆಯಲ್ಲಿ ನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಪ್ರಸ್ತಾವನೆ ಬಳಿಕ ಜನಪ್ರತಿನಿಧಿಗಳು ತಮ್ಮ ಅಭಿಪ್ರಾಯ ಮಂಡಿಸುವುದರ ಜೊತೆಗೆ 'ಬೃಹತ್ ಮೈಸೂರು ಮಹಾನಗರ ಪಾಲಿಕೆ' ರಚನೆಗೆ ಸಹಮತ ವ್ಯಕ್ತಪಡಿಸಿದರು. ಜಿಲ್ಲಾ ಉಸ್ತುವಾರಿ ಸಚಿವರ ಸೂಚನೆ ಮೇರೆಗೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ನಗರಸಭೆ, ಪಟ್ಟಣ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳಿಂದ ಈ ಸಂಬಂಧ ನಿರ್ಣಯ ಕೈಗೊಂಡು, ಮಾಹಿತಿ ಸಲ್ಲಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಆಯುಕ್ತರ ಪ್ರಸ್ತಾವನೆ: ಮೈಸೂರು ನಗರ ಬೆಳೆಯುತ್ತಿದ್ದರೂ ನಗರ ಪಾಲಿಕೆ ವ್ಯಾಪ್ತಿ ವಿಸ್ತಾರವಾಗಿಲ್ಲ. ಕಳೆದ 25 ವರ್ಷಗಳಲ್ಲಿ ಪಾಲಿಕೆ ವ್ಯಾಪ್ತಿಗೆ ಹೊಂದಿಕೊಂಡಂತಿರುವ ಹಾಗೂ ಹೊರ ಭಾಗದ ಕೆಲವು ಗ್ರಾಮಗಳು ಕ್ಷಿಪ್ರಗತಿಯಲ್ಲಿ ಪ್ರಗತಿ ಹೊಂದುತ್ತಿವೆ. ಆದರೆ ನಿಯಂತ್ರಣ ವೈಫಲ್ಯದಿಂದ ಯೋಜನಾ ಬದ್ಧ ಬೆಳವಣಿಗೆ ಇಲ್ಲದೆ ಕನಿಷ್ಠ ಮೂಲಭೂತ ಸೌಕರ್ಯಗಳಿಗೂ ಕೊರತೆಯಾಗಿದೆ. ಪರಿಣಾಮ ಮೈಸೂರು ನಗರದ ಯೋಜನಾ ಬದ್ಧವಾದ ಬೆಳವಣಿಗೆ ಮೇಲೂ ದುಷ್ಪರಿಣಾಮವಾಗುತ್ತಿದೆ. ಆದ್ದರಿಂದ ನಗರದ ಅಭಿವೃದ್ಧಿ ದೃಷ್ಟಿಯಿಂದ ಪಾಲಿಕೆ ವ್ಯಾಪ್ತಿಗೆ ಹೊಂದಿಕೊಂಡಂತಿರುವ ಹೂಟಗಳ್ಳಿ ನಗರಸಭೆ, ಬೋಗಾದಿ, ಶ್ರೀರಾಂಪುರ ಹಾಗೂ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಚಾಮುಂಡಿ ಬೆಟ್ಟ, ಆಲನಹಳ್ಳಿ, ಸಿದ್ದಲಿಂಗಪುರ ಹಾಗೂ ಇಲವಾಲ ಗ್ರಾಮ ಪಂಚಾಯಿತಿ ಮತ್ತು ಮಂಡಕಳ್ಳಿ ಹಾಗೂ ಬಂಡಿಪಾಳ್ಯ ಪ್ರದೇಶವನ್ನೊಳಗೊಂಡ ಕಡಕೊಳ ಪಟ್ಟಣ ಪಂಚಾಯಿತಿ ಮೈಸೂರು ನಗರಪಾಲಿಕೆ ವ್ಯಾಪ್ತಿಗೆ ಸೇರಿಸಿದರೆ ಆದಾಯ ಕ್ರೋಢೀಕರಣ ಹೆಚ್ಚುವ ಜೊತೆಗೆ ಸಮಗ್ರ ಹಾಗೂ ಯೋಜನಾಬದ್ಧ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ಸಭೆಗೆ ಪ್ರಸ್ತಾವನೆ ಸಲ್ಲಿಸಿದರು.

ಸದ್ಯದಲ್ಲೇ ನಗರಸಭೆ, ಪಟ್ಟಣ ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗೆ ಒಳಪಡುವ ಎಲ್ಲಾ ಗ್ರಾಮಗಳ ಮಾಹಿತಿಯನ್ನು ಸಂಗ್ರಹಿಸುತ್ತಿದ್ದು, ಸದ್ಯ ನಕ್ಷೆ ಪ್ರಕ್ರಿಯೆ ಹಂತದಲ್ಲಿದೆ. ಚಾಮುಂಡಿ ಬೆಟ್ಟ ಹಾಗೂ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ಹೊರತುಪಡಿಸಿ ಉಳಿದೆಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಆಡಳಿತ ಮಂಡಳಿಯಿಲ್ಲ. ಈ ಸಂಬಂಧ ಕಾನೂನಾತ್ಮಕ ಹಾಗೂ ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಅನುಸರಿಸಬೇಕಿದೆ. ● 9ನೇ ಪುಟಕ್ಕೆ

ಮೈಸೂರು ಮಹಾನಗರ ಪಾಲಿಕೆಗೆ 1 ನಗರಸಭೆ, ಮೂರು ಪಟ್ಟಣ ಪಂಚಾಯಿತಿ, ಗ್ರಾಪಂಗಳನ್ನು ಸೇರ್ಪಡೆ ಮಾಡಿಕೊಳ್ಳುವ ಪ್ರಕ್ರಿಯೆ ಸಂಬಂಧ ಸಾಧಕ–ಬಾಧಕಗಳ ಕುರಿತು ಇಂದಿನ ಸಭೆಯಲ್ಲಿ ಚರ್ಚಿಸಲಾಯಿತು. ಎಲ್ಲಾ ಜನಪ್ರತಿನಿಧಿಗಳು ಇದಕ್ಕೆ ಸಮ್ಮತಿ ಸೂಚಿಸಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರ ಜೊತೆಯೂ ಮಾತನಾಡಿದ್ದು, ಸಭೆಯ ನಿರ್ಣಯಕ್ಕೆ ಸಮ್ಮತಿಸುವುದಾಗಿ ತಿಳಿಸಿದ್ದಾರೆ. ನಗರ ಪಾಲಿಕೆಗೆ ಸೇರ್ಪಡೆ ಮಾಡುವ ಕುರಿತಂತೆ ಆಡಳಿತಾಧಿಕಾರಿಗಳು ನಿರ್ಣಯ ಹೊರಡಿಸಲಿದ್ದಾರೆ.

–ಎಸ್.ಟಿ.ಸೋಮಶೇಖರ್,
ಜಿಲ್ಲಾ ಉಸ್ತುವಾರಿ ಸಚಿವ

ದಶಕದ ಕನಸಿಗೆ ಮರುಜೀವ; ರಾಮದಾಸ್ ಧನ್ಯವಾದ

ಮೈಸೂರು: ದಶಕದ ಕನಸು ಮತ್ತೆ ಚರ್ಚೆಗೆ ಬಂದಿದೆ. ಇದಕ್ಕೆ ಕಾರಣರಾದ ಸಂಸದ ಪ್ರತಾಪ್ ಸಿಂಹ ಅವರಿಗೆ ಧನ್ಯವಾದ ತಿಳಿಸುತ್ತೇನೆ ಎಂದು ಶಾಸಕ ಎಸ್.ಎ.ರಾಮದಾಸ್ ಸಭೆಯಲ್ಲಿ ಹೇಳಿದರು.

10 ವರ್ಷಗಳ ಹಿಂದೆ ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗ 'ಬೃಹತ್ ಮೈಸೂರು' ರಚನೆಗೆ ಪ್ರಯತ್ನ ನಡೆದಿತ್ತು. ಸತತ 2 ವರ್ಷ ಪ್ರಯತ್ನದಿಂದ ಸಿಡಿಪಿಯಲ್ಲೂ ಪ್ರಸ್ತಾಪವಾಗಿತ್ತು. ನಗರದ ಸುತ್ತಮುತ್ತಲ ಪಂಚಾಯಿತಿಗಳ ಚುನಾವಣೆ ನಡೆಯದಿರುವ ಸಂದರ್ಭದಲ್ಲೇ ಈ ಯೋಜನೆಗೆ ಮುಂದಾಗಿದ್ದೆವು. ಸಮಿತಿ ರಚಿಸಿ, ಸವಿಸ್ತಾರವಾಗಿ ಚರ್ಚಿಸಿ, ವರದಿ ಸಲ್ಲಿಸಲಾಗಿತ್ತು. ಈ ಬಗ್ಗೆ ಅಂದಿನ ನಗರಾಭಿವೃದ್ಧಿ ಸಚಿವರು ಹಾಗೂ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗಿತ್ತು. ಆದರೆ ದುರ್ದೈವ ಇದರಲ್ಲಿ ರಾಮದಾಸ್ ಅವರ ಸ್ವಹಿತಾಸಕ್ತಿ ಇದೆ ಎಂದು ನಮ್ಮವರೇ ಗ್ರಾಮ ಪಂಚಾಯಿತಿಗಳಲ್ಲಿ ಸಭೆ ನಡೆಸಿದರು. ಪರಿಣಾಮ 18 ಗ್ರಾಪಂಗಳು ವಿರೋಧ ● 9ನೇ ಪುಟಕ್ಕೆ

ಶೆಹಬಾಜ್ ಷರೀಫ್ ಪಾಕಿಸ್ತಾನದ ನೂತನ ಪ್ರಧಾನಿ



ಇಸ್ಲಾಮಾಬಾದ್: ಪಾಕಿಸ್ತಾನದ ಪ್ರಧಾನ ಮಂತ್ರಿಯಾಗಿ ಶಹಬಾಜ್ ಷರೀಫ್ ಆಯ್ಕೆಯಾಗಿದ್ದಾರೆ. ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಸಹೋದರ ಮತ್ತು ವಿರೋಧ ಪಕ್ಷದ ಪಿಎಂಎಲ್–ಎನ್ ನಾಯಕ ಶೆಹಬಾಜ್ ಷರೀಫ್ ಅವರು ಪಾಕಿಸ್ತಾನದ ಮುಂದಿನ ಪ್ರಧಾನಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶನಿವಾರ ಅವಿಶ್ವಾಸ ಮತದಿಂದ ಪ್ರಧಾನಿ ಸ್ಥಾನದಿಂದ ಕೆಳಗಿಳಿದಿದ್ದ ಇಮ್ರಾನ್ ಖಾನ್ ಅವರ ಉತ್ತರಾಧಿಕಾರಿಯಾಗಿದ್ದಾರೆ. ಪಾಕಿಸ್ತಾನದ 23ನೇ ಪ್ರಧಾನಿಯಾಗಿ ಶಹಬಾಜ್ ಷರೀಫ್ ಗದ್ದುಗೆ ಏರಿದ್ದಾರೆ. ಶಹಬಾಜ್ ಷರೀಫ್ ಪಂಜಾಬ್ ಪ್ರಾಂತ್ಯಕ್ಕೆ 3 ಬಾರಿ ಮುಖ್ಯಮಂತ್ರಿಯಾಗಿದ್ದರು. ಹೊಸ ಪ್ರಧಾನಿ ಆಯ್ಕೆಗೆ ಮುನ್ನ ಇಮ್ರಾನ್ ಖಾನ್ ಅವರು ರಾಷ್ಟ್ರೀಯ ಅಸೆಂಬ್ಲಿಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಇಮ್ರಾನ್ ಖಾನ್ ನೇತೃತ್ವದ ಪಿಟಿಐ ಪಕ್ಷ ತನ್ನ ಪ್ರಧಾನಿ ಅಭ್ಯರ್ಥಿಯಾಗಿ ಶಾ ಮಹಮೂದ್ ಖುರೇಷಿ ಅವರನ್ನು ಕಣಕ್ಕಿಳಿಸಿತ್ತು. ಆದರೆ ● 9ನೇ ಪುಟಕ್ಕೆ


ಮೇ 2ನೇ ವಾರ ಎಸ್‌ಎಸ್‌ಎಲ್‌ಸಿ ಫಲಿತಾಂಶ




ಬೆಂಗಳೂರು: ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಕ್ತಾಯಗೊಂಡಿದೆ. ಮಂಗಳವಾರದಿಂದ ಕೀ ಉತ್ತರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ. ಮೇ 2ನೇ ವಾರ ಫಲಿತಾಂಶ ಪ್ರಕಟವಾಗಲಿದೆ. ಸೋಮವಾರ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಈ ಕುರಿತು ಟ್ವೀಟ್ ಮಾಡಿದ್ದಾರೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸುಸೂತ್ರವಾಗಿ ಮುಕ್ತಾಯಗೊಂಡಿದೆ. ನಾಳೆಯಿಂದ ಕೀ ಉತ್ತರಗಳನ್ನು ಎಸ್‌ಎಸ್‌ಎಲ್‌ಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ ಎಂದು ಹೇಳಿದ್ದಾರೆ. ಮೇ 2ನೇ ವಾರದಲ್ಲಿ ಫಲಿತಾಂಶ ಪ್ರಕಟಿಸುವ ಗುರಿ ಹೊಂದಲಾಗಿದೆ. ಜೂನ್ ಕೊನೆ ವಾರದಲ್ಲಿ ಪೂರಕ ಪರೀಕ್ಷೆಗಳನ್ನು ನಡೆಸಲಾಗುತ್ತದೆ ಎಂದು ಸಚಿವರು ಟ್ವೀಟ್‌ನಲ್ಲಿ ಮಾಹಿತಿ ನೀಡಿದ್ದಾರೆ. ಮಾರ್ಚ್ 28ರಿಂದ ಏ.11ರ ತನಕ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆದಿತ್ತು. ಕಳೆದ 2 ವರ್ಷಗಳ ಕಾಲ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಕೋವಿಡ್ ಇನ್ನಿಲ್ಲದಂತೆ ಕಾಡಿತ್ತು. ಈ ವರ್ಷ ಪರೀಕ್ಷೆ ಅವಧಿಯಲ್ಲಿ ಯಾವುದೇ ವಿದ್ಯಾರ್ಥಿಗೆ ಸೋಂಕು ಕಂಡು ಬಂದಿಲ್ಲ. ಉಡುಪಿಯಲ್ಲಿ ಆರಂಭವಾಗಿ ರಾಷ್ಟ್ರಮಟ್ಟದಲ್ಲಿ ಸುದ್ದಿಯಾದ ಹಿಜಾಬ್ ವಿವಾದ ಸಹ ಪರೀಕ್ಷೆಗೆ ಯಾವುದೇ ರೀತಿಯ ಅಡ್ಡಿ ಉಂಟು ಮಾಡಿಲ್ಲ ಎಂದು ತಿಳಿಸಿದ್ದಾರೆ.

ಏ.16ರಂದು ಆರಂಭವಾಗುವ ಜನತಾ ಜಲಧಾರೆ ಯಶಸ್ಸಿಗೆ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಚಾಮುಂಡೇಶ್ವರಿ ಮೊರೆ: ಇಂದು ವಿಶೇಷ ಪೂಜೆ



ಮೈಸೂರು,ಏ.11–ಜೆಡಿಎಸ್‌ನ ಮಹಾತ್ವಾಕಾಂಕ್ಷೆಯ ಕಾರ್ಯಕ್ರಮವಾದ 'ಜನತಾ ಜಲಧಾರೆ ಗಂಗಾ ಯಾತ್ರೆ' ಏ.16ರಂದು ಆರಂಭವಾಗಲಿದ್ದು, ಈ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ನಾಳೆ (ಮಂಗಳವಾರ) ಬೆಳಗ್ಗೆ 7.30ಕ್ಕೆ ಚಾಮುಂಡಿಬೆಟ್ಟಕ್ಕೆ ಆಗಮಿಸಿ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಪೂಜೆಯ ನಂತರ ಕುಮಾರಸ್ವಾಮಿ ಅವರ ಪ್ರಸಾದದೊಂದಿಗೆ ರಾಮನಗರಕ್ಕೆ ತೆರಳಲಿದ್ದು,




ಜೆಡಿಎಸ್ ವರಿಷ್ಠರೂ ಆದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ರಾಮನಗರದ ಶ್ರೀಚಾಮುಂಡೇಶ್ವರಿ ದೇವಾಲಯದಲ್ಲಿ ಜನತಾ ಜಲಧಾರೆಯ 15 ರಥಗಳಿಗೆ ಪೂಜೆ ಸಲ್ಲಿಸಿ ಹಸಿರು ನಿಶಾನೆ ತೋರಲಿದ್ದಾರೆ. ಅಲ್ಲಿಂದ ಈ ರಥಗಳು ಆಯಾ ಜಿಲ್ಲೆಗೆ ತೆರಳಲಿವೆ.

ನಾಳೆ (ಏ.12) ಕುಮಾರಸ್ವಾಮಿ ಅವರು ಜನತಾ ಜಲಧಾರೆ ಗಂಗಾ ಯಾತ್ರೆ ಯಶಸ್ವಿಗಾಗಿ ಚಾಮುಂಡಿಬೆಟ್ಟದಲ್ಲಿ ಪೂಜಾ ಸಲ್ಲಿಸಲಿರುವುದರಿಂದ ಸೋಮವಾರ ಸಂಜೆ ಶಾಸಕ ಸಾ.ರಾ.ಮಹೇಶ್ ಅವರ ಮೈಸೂರು ಕಚೇರಿಯಲ್ಲಿ ಜೆಡಿಎಸ್ ಮುಖಂಡರ ಸಭೆ ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಶಾಸಕ ಅಶ್ವಿನ್‌ಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ● 9ನೇ ಪುಟಕ್ಕೆ

ಹಾಡಹಗಲೇ ಕಾರಿನ ಮೇಲೆ ಮುಸುಕುಧಾರಿಗಳ ದಾಳಿ

ಕಡಕೊಳ ಸಮೀಪ ನಂಜನಗೂಡು ಹೆದ್ದಾರಿಯಲ್ಲಿ ಸಿನಿಮೀಯ ಶೈಲಿ ಕೃತ್ಯ, ವಿಡಿಯೋ ವೈರಲ್, ಪ್ರಕರಣ ಭೇದಿಸಲು ಪೊಲೀಸರ ಪ್ರಯತ್ನ



ಮೈಸೂರು,ಏ.11(ಆರ್‌ಕೆ)–ಹಾಡಹಗಲೇ ಮುಸುಕುಧಾರಿಗಳ ಗುಂಪೊಂದು ಚಲಿಸುತ್ತಿದ್ದ ಕಾರು ತಡೆದು ಅದರಲ್ಲಿದ್ದವರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆಗೆತ್ನಿಸಿ, ಕೊನೆಗೆ ಅದೇ ಕಾರಲ್ಲಿ ಪರಾರಿಯಾದರೆನ್ನಲಾದ ಘಟನೆ ಮೈಸೂರು–ನಂಜನಗೂಡು ಹೆದ್ದಾರಿಯಲ್ಲಿ ನಡೆದಿರುವ ಬಗ್ಗೆ ವಿಡಿಯೋ ವೈರಲ್ ಆಗಿದೆ.

ನಂಜನಗೂಡು ಕಡೆಯಿಂದ ಮೈಸೂರಿನತ್ತ ಬರುತ್ತಿದ್ದ ಕಾರನ್ನು ಮತ್ತೊಂದು ಕಾರಿನಲ್ಲಿ ಹಿಂಬಾಲಿಸಿ ಬಂದ ಮುಸುಕುಧಾರಿ ಯುವಕರು, ಕಡಕೊಳ ಸಮೀಪ ಕಾರು ತಡೆದು ದೊಣ್ಣೆ, ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ. ಆ ವೇಳೆ ಕಾರಿನಿಂದಿಳಿದು ಪರಾರಿ ಯಾಗಲೆತ್ನಿಸಿದ ಚಾಲಕನನ್ನು ಹಿಡಿದು ಮತ್ತೆ ಕಾರಿಗೆ ದೂಡಿದ ದೃಶ್ಯ ವೈರಲ್ ಆಗಿದೆ. ಈ ವೇಳೆ ಆ ಮಾರ್ಗವಾಗಿ ಬಂದ ಬಸ್‌ನ ಪ್ರಯಾಣಿಕರು ಈ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದು ವೈರಲ್ ಮಾಡಿದ್ದಾರೆ.

ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದಂತೆಯೇ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಪೊಲೀಸರು ಘಟನೆ ನಡೆದಿದೆ ಎನ್ನಲಾದ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರಲ್ಲದೆ, ಆ ಮಾರ್ಗದ ಅಂಗಡಿ–ಮುಂಗಟ್ಟುಗಳವರನ್ನು ವಿಚಾರಿಸಿದ್ದರಾದರೂ, ಘಟನೆ ಬಗ್ಗೆ ನಿಖರ ಮಾಹಿತಿ ಲಭ್ಯವಾಗಿಲ್ಲ. ಆ ವಿಡಿಯೋ ದೃಶ್ಯಾವಳಿ ಪ್ರಕಾರ, ನಂಜನಗೂಡು ರಸ್ತೆಯ ● 10ನೇ ಪುಟಕ್ಕೆ

ದಂಧೆಕೋರರ ಅಟ್ಟಹಾಸ...

ಕೇರಳ ಮೂಲದವರು ಹವಾಲಾ ಹಣ ಸಾಗಿಸುತ್ತಿರುವುದು ಸೇರಿದಂತೆ ಅಕ್ರಮ ಚಟುವಟಿಕೆಗಳನ್ನು ಎಸಗುತ್ತಿರುವುದೇ ಇಂತಹ ದಾಳಿಗಳಿಗೆ ಕಾರಣ ಎನ್ನಲಾಗಿದ್ದು, ಇದೀಗ ಹಾಡಹಗಲೇ ಕಾರನ್ನು ಅಡ್ಡಗಟ್ಟಿ ಕಾರಿನಲ್ಲಿದ್ದವರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿರುವ ವೀಡಿಯೋ ವೈರಲ್ ಆಗಿದ್ದರೂ, ಈ ಸಂಬಂಧ ಯಾವುದೇ ರೀತಿಯ ದೂರು ಪೊಲೀಸ್ ಠಾಣೆಯಲ್ಲಿ ದಾಖಲಾಗದೇ ಇರುವುದು ಸದರಿ ವಾಹನದ ಮೂಲಕ ಹವಾಲಾ ಹಣ ರವಾನೆ ಅಥವಾ ಕಾನೂನು ಬಾಹಿರ ಚಟುವಟಿಕೆಗೆ ಸಂಬಂಧಿಸಿದಂತೆ ಏನೋ ದಂಧೆ ಇದರ ಹಿಂದೆ ಇರಬಹುದು ಎಂಬ ಸಂಶಯ ಮೂಡಿದೆ. ಮೈಸೂರಿನಿಂದ ಕೇರಳಾಗೆ ತೆರಳುವ ಮಾರ್ಗಮಧ್ಯೆ ● 10ನೇ ಪುಟಕ್ಕೆ

ಮೈಸೂರು ಮಿತ್ರ ಮಂಗಳವಾರ 12 ಏಪ್ರಿಲ್ 2022

ಸಾಹಿತ್ಯದಲ್ಲೂ ಪುರುಷ-ಮಹಿಳೆ ಎಂಬ ತಾರತಮ್ಯ

ಕವಯತ್ರಿ ಪ್ರತಿಭಾ ನಂದಕುಮಾರ್ ವಿಷಾದ



ಮೈಸೂರು,ಏ.11(ಎಂಟಿವೈ)- ಮಾಹಿತಿ ಹಾಗೂ ಮನರಂಜನಾ ಕ್ರಾಂತಿಯ ಸ್ಫೋಟವಾಗುತ್ತಿರುವ ವರ್ತಮಾನದಲ್ಲಿ ಕಾವ್ಯ ಎನ್ನುವುದು ಸೀಮಿತ ವರ್ಗಕ್ಕೆ ಮೀಸಲಾಗುತ್ತಿದ್ದು, ಮಹಿಳೆಯರು ಹಾಗೂ ಪುರುಷರು ಬರೆದ ಸಾಹಿತ್ಯಕ್ಕೆ ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ ಎಂದು ಕವಯತ್ರಿ ಪ್ರತಿಭಾ ನಂದಕುಮಾರ್ ವಿಷಾಧಿಸಿದ್ದಾರೆ.

ಮೈಸೂರಿನ ಕುವೆಂಪುನಗರದಲ್ಲಿ ಸುರುಚಿ ರಂಗಮನೆ ಸಭಾಂಗಣದಲ್ಲಿ ರಕ್ಷಾ ಫೌಂಡೇಷನ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಚ್.ಎಸ್.ಮಧುರಾಣಿ ಅವರ 'ನೀಲಿ ಚುಕ್ಕಿಯ ನೆರಳು' ಪುಸ್ತಕ ಬಿಡುಗಡೆ ಹಾಗೂ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗದ್ಯ, ಪದ್ಯ ಸೇರಿದಂತೆ ಯಾವುದೇ ಪ್ರಕಾರಗಳ ಸಾಹಿತ್ಯವಾಗಿದ್ದರೂ, ಅದು ವರ್ತಮಾನಕ್ಕೆ ಸ್ಪಂದಿಸದೇ, ಇತಿಹಾಸಕ್ಕೆ ಅಂಟಿಕೊಂಡಿರಬಾರದು. ಕಾವ್ಯದ ವ್ಯಾಖ್ಯಾನ ಕಾಲದಿಂದ ಕಾಲಕ್ಕೆ ಬದಲಾಗುತ್ತಿದೆ. ಅದಕ್ಕೆ ಇತಿಹಾಸದ ಲೇಪ ಹಚ್ಚುವುದು ಸರಿಯಲ್ಲ. ಕವಿತೆಗಳು ಒಂದಕ್ಕೊಂದು ಸಂವಾದಿಸುವ ಸಂದರ್ಭದಲ್ಲಿ ಏಕತಾನತೆ ಬರಲು ಸಾಧ್ಯವಿಲ್ಲ. ಕಾವ್ಯದ ಓದಿಗೂ ಒಂದು ಮನೋಭೂಮಿಕೆ ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಪ್ರಸ್ತುತ ಕಾಲಘಟ್ಟದಲ್ಲಿ ಸಾಹಿತ್ಯವನ್ನು ಸೀಮಿತ ವರ್ಗಕ್ಕೆ ಮೀಸಲಿರಿಸುವ ಪ್ರಯತ್ನ ವ್ಯಾಪಕವಾಗಿ ನಡೆಯುತ್ತಿದೆ. ಪುರುಷರು ಬರೆದ ಸಾಹಿತ್ಯ ಹಾಗೂ ಮಹಿಳಾ ಸಾಹಿತ್ಯದ ನಡುವೆ ತಾರತಮ್ಯ ಮಾಡಲಾಗುತ್ತಿದೆ ಎಂದರು.

ಪ್ರಸ್ತುತ ಸಂದರ್ಭದಲ್ಲಿ ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರನ್ನು ಹತ್ತಿಕ್ಕುವ ಕೆಲಸ ನಡೆಯುತ್ತಿದೆ. ಹಿಂದು, ಮುಸ್ಲಿಂ ಮತ್ತು ಕ್ರೈಸ್ತ ಧರ್ಮದಲ್ಲೂ ಮಹಿಳೆಯರನ್ನು ಗೌಣವಾಗಿಸುವ ಕೆಲಸ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಮಹಿಳೆಯರಿಗೆ ಅವಕಾಶ ಇನ್ನಷ್ಟು ದೊರೆಯಬೇಕು. ಸಾಹಿತ್ಯ ಕ್ಷೇತ್ರದಲ್ಲೂ ಮಹಿಳೆಯರು ಈಗಾಗಲೇ ಗಮನಾರ್ಹ ಕೊಡುಗೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಕೊಡುಗೆ ನೀಡುವಂತಾಗಬೇಕು ಎಂದು ಆಶಿಸಿದರು.

ನಟ ಕೊಳ್ಳೇಗಾಲ ಮಂಜುನಾಥ್ ಮಾತನಾಡಿ, ಕಾವ್ಯ ಮಾಧ್ಯಮವನ್ನು ಪರಿಚಯಿಸಿದವರಲ್ಲಿ ವಚನಕಾರ್ತಿಯರೇ ಮೊದಲಿಗರಲ್ಲ ಅದಕ್ಕೂ ಹಿಂದೆಯೇ ಹಲವು ಮಂದಿ ಕವಯತ್ರಿಯರು ಕಾವ್ಯ ರಚಿಸಿದ್ದಾರೆ. ಜಾನಪದ ಸಾಹಿತ್ಯದಲ್ಲಿಯೂ ಮಹಿಳೆಯರು ಪ್ರಮುಖ ಪಾತ್ರ ವಹಿಸಿದ್ದಾರೆ. ನೀಲಿ ಚುಕ್ಕಿಯ ನೆರಳು ಕವನಸಂಕಲನದಲ್ಲಿ ಕವಯತ್ರಿ, ಒಂದೇ ವಿಷಯ ವಸ್ತುವನ್ನು ಬಳಸಿ ವಿಭಿನ್ನ ಅಭಿವ್ಯಕ್ತಿಯ ಕವಿತೆಗಳನ್ನು ರಚಿಸಿದ್ದಾರೆ. ಕವನಗಳನ್ನು ವೈಯಕ್ತಿಕ ನೆಲೆಯಲ್ಲಿ ರಚಿಸಲಾಗಿದೆಯಾದರೂ ಭಾವ ತೀವ್ರತೆಯಿಂದ ಕಾಡುತ್ತವೆ ಎಂದರು.

ರಂಗಕರ್ಮಿ ಕೆ.ವೆಂಕಟರಾಜು ಮಾತನಾಡಿ, ಇಂದಿನ ಬಹುತೇಕ ಓದುಗರಲ್ಲಿ ಅಧ್ಯಯನದ ಕೊರತೆ ಎದ್ದು ಕಾಣುತ್ತಿದೆ. ಬದುಕಿಗೂ ಬರಹಕ್ಕೂ ಪರಸ್ಪರ ಸಂಬಂಧವಿಲ್ಲದ ಯಾವುದೇ ಕೃತಿ ಯಶಸ್ವಿಯಾಗಲಾರದು' ಎಂದರು. ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಪ್ರಾಂಶುಪಾಲ ರಘುನಂದನ್, ನಟ ಸತೀಶ್ ಕೃಷ್ಣಸ್ವಾಮಿ, ಕವಯತ್ರಿ ಎಚ್.ಎಸ್.ಮಧುರಾಣಿ ಪಾಲ್ಗೊಂಡಿದ್ದರು. ರಕ್ಷಾ ಫೌಂಡೇಷನ್‌ಗೆ ಚಾಲನೆ ನೀಡಲಾಯಿತು. ಫೌಂಡೇಷನ್‌ನಿಂದ ಅನಾಥ ಮಕ್ಕಳನ್ನು ಪೋಷಿಸುತ್ತಿರುವ ಯಶೋದಾ ಅವರ ಸಂಸ್ಥೆಗೆ ಆರ್ಥಿಕ ನೆರವು ನೀಡಲಾಯಿತು.



ಆದಿಕರ್ನಾಟಕ ಮಹಾಸಂಸ್ಥೆ ಹಾಗೂ ಅಶೋಕಪುರಂ ವಿವಿಧ ಸಂಘಟನೆಗಳ ಒಕ್ಕೂಟದ ಆಶ್ರಯದಲ್ಲಿ ಏ.5ರಿಂದ 10ರವರೆಗೆ ನಡೆದ 'ನಮ್ಮೂರ/ಸಮುದಾಯದ ಪ್ರಗತಿಯಲ್ಲಿ ನಮ್ಮ ಪಾತ್ರಗಳು' ಕುರಿತ ಐದು ದಿನಗಳ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವುದು. ಈ ಸಂದರ್ಭದಲ್ಲಿ ಮುಖಂಡರಾದ ಮ.ವೆಂಕಟರಾಮು, ಹೆಚ್.ವಾಸು, ಮಾಜಿ ಮೇಯರ್ ಪುರುಷೋತ್ತಮ್ ಚಿತ್ರದಲ್ಲಿದ್ದಾರೆ.



ಬಹುರೂಪಿಯಲ್ಲಿ ಪ್ರದರ್ಶನಗೊಂಡ ಕದಂಬ ರಂಗವೇದಿಕೆ ತಂಡ ಅಭಿನಯಿಸಿದ 'ಆಟ ದೊಳಗಾಟ' ನಾಟಕದ ಕಲಾವಿದರಿಗೆ ರಂಗಾಯಣದಿಂದ ಅರ್ಹತಾಪತ್ರ ಹಾಗೂ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ತಂಡದ ಅಧ್ಯಕ್ಷ ರಾಜಶೇಖರ ಕದಂಬ,ಕಲಾವಿದರಾದ ಯು.ಎಸ್.ರಾಮಣ್ಣ, ನಾಗಭೂಷಣ್, ಶಶಾಂಕ ರಾಣಿಚೇತನ, ಪವಿತ್ರ, ಉಮಾದೇವಿ, ಕಾವ್ಯ, ಅಮೋಘ, ಶಶಾಂಕ, ಸುನಿಲ್‌ಕುಮಾರ್, ಅಶ್ವಥ್ ಕದಂಬ ಇದ್ದಾರೆ.

ಮುಕ್ತ ವಿವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಿಂದ ಐಎಎಸ್, ಕೆಎಎಸ್ ತರಬೇತಿಗೆ ಚಾಲನೆ

ಮೈಸೂರು,ಏ.11-ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರವು ಐಎಎಸ್/ಕೆಎಎಸ್ ಹಾಗೂ ಇತರೆ ಪ್ರಮುಖ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ಆಯೋಜಿಸಿದ್ದು 2019ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ವರ್ಣಿತ್ ನೇಗಿ ಚಾಲನೆ ನೀಡುವರು. 2022ರ ಏಪ್ರಿಲ್ 13ರ ಬುಧವಾರ ಬೆಳಗ್ಗೆ 10ಕ್ಕೆ ತರಬೇತಿ ಉದ್ಘಾಟಿಸಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಕುರಿತು ಹುಣಸೂರು ಉಪ ವಿಭಾಗಾಧಿಕಾರಿ ಯಾಗಿರುವ ವರ್ಣಿತ್ ನೇಗಿ ಮಾತನಾಡುವರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಅಧ್ಯಕ್ಷತೆ ವಹಿಸಿ ಸ್ಪರ್ಧಾರ್ಥಿಗಳಿಗೆ ಶುಭಕಾಮನೆ ಕೋರುವರು. ಕುಲಸಚಿವ ಪ್ರೊ.ಆರ್. ರಾಜಣ್ಣ ಉಪಸ್ಥಿತರಿರುವರು, ಉದ್ಘಾಟನೆ ನಂತರ 50 ದಿನ ತರಬೇತಿ ಶಿಬಿರ ನಡೆಯಲಿದ್ದು ಅಧಿಕಾರಿಗಳು, ವಿಷಯ ತಜ್ಞರು ತರಬೇತಿ ನೀಡುವರು. ರಾಜ್ಯದ ನಾನಾ ಭಾಗಗಳ 150ಕ್ಕೂ ಹೆಚ್ಚು ಅಭ್ಯರ್ಥಿಗಳು ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ತರಬೇತಿ ಸೇರ ಬಯಸುವವರಿಗೆ ನೋಂದಾಯಿಸಿಕೊಳ್ಳಲು ಅವಕಾಶವಿದೆ ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821-2515944 ಅನ್ನು ಸಂಪರ್ಕಿಸಿ ಎಂದು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.



ವರ್ಣಿತ್ ನೇಗಿ

ತಪಾಸಣಾ ಶಿಬಿರ

ಮೈಸೂರು,ಏ.11-ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಏ.14ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ. 0821-4259259 ಸಂಪರ್ಕಿಸಬಹುದು.

ವಿಶ್ವ ಪರಂಪರೆ ದಿನ: ಪಾರಂಪರಿಕ ನಡಿಗೆ

ಮೈಸೂರು, ಏ.11- ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಏ.18ರ ಬೆಳಗ್ಗೆ 7 ಗಂಟೆಗೆ ವಿಶ್ವ ಪರಂಪರೆ ದಿನಾಚರಣೆಯ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ವಿದ್ಯಾರ್ಥಿಗಳು ಹಾಗೂ ಸಂಶೋಧಕರುಗಳಿಗೆ ಪಾರಂಪರಿಕ ನಡಿಗೆಯನ್ನು ಮೈಸೂರಿನ ಪುರಭವನದಿಂದ ಆಯೋಜಿಸಲಾಗಿದೆ.

ನಡಿಗೆಯ ಮಾರ್ಗ: ಪುರಭವನದಿಂದ ಪ್ರಾರಂಭವಾಗಿ ಸಿಲ್ವರ್ ಜೂಬ್ಲಿ ಕ್ಲಾಕ್ ಟವರ್, ಫ್ರೀಮೇಸನ್ಸ್ ಕ್ಲಬ್, ಹತ್ತನೇ ಚಾಮರಾಜ ಒಡೆಯರ ವೃತ್ತ, ಅರಮನೆ, ನಾಲ್ಕನೇ ಕೃಷ್ಣರಾಜ ಒಡೆಯರ ವೃತ್ತ, ಲ್ಯಾನ್ಸ್ಡೌನ್ ಕಟ್ಟಡ, ಬನುಮಯ್ಯ ಕಾಲೇಜು, ಮೈಸೂರು ನಗರ ಪಾಲಿಕೆ, ಜಗನ್ ಮೋಹನ ಅರಮನೆ, ಸಂಸ್ಕೃತ ಪಾಠ ಶಾಲಾ, ಕಾಡಾ ಕಚೇರಿ, ಗನ್‌ಹೌಸ್ ಮೂಲಕ ಬಂದು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆವರಣದಲ್ಲಿ ಕೊನೆಗೊಳ್ಳುವುದು ಎಂದು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಯಥಾರ್ಥ' ಅಭಿನಂದನಾ ಗ್ರಂಥ ಬಿಡುಗಡೆ

ಮೈಸೂರು, ಏ. 11- ಪ್ರೊ. ಡಿ.ಕೆ. ರಾಜೇಂದ್ರ ಅಭಿನಂದನಾ ಸಮಿತಿ ವತಿಯಿಂದ ಪ್ರೊ. ಡಿ.ಕೆ. ರಾಜೇಂದ್ರ ಅವರಿಗೆ 80 ವರ್ಷದ ತುಂಬಿದ ಸಂದರ್ಭದಲ್ಲಿ ಅವರನ್ನು ಕುರಿತ 'ಯಥಾರ್ಥ' ಅಭಿನಂದನಾ ಗ್ರಂಥ ಬಿಡುಗಡೆ ಮತ್ತು ಅಭಿನಂದನಾ ಸಮಾರಂಭವನ್ನು ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ವಹಿಸಲಿದ್ದು, ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಉಪಸ್ಥಿತರಿರುವರು. ನಾಡೋಜ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅಧ್ಯಕ್ಷತೆ ವಹಿಸಲಿದ್ದು, ಡಾ.ಅರವಿಂದ ಮಾಲಗತ್ತಿ ಗ್ರಂಥ ಬಿಡುಗಡೆ ಮಾಡಿ ಅಭಿನಂದನಾ ಭಾಷಣ ಮಾಡುವರು. ಪ್ರೊ. ನೀಲಗಿರಿ ತಳವಾರ ಕೃತಿ ಕುರಿತು ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪ್ರೊ. ಜೆ. ಶಶಿಧರ ಪ್ರಸಾದ್, ಸಾಹಿತಿ ಪ್ರೊ. ಸಿ.ಪಿ.ಕೃಷ್ಣಕುಮಾರ್, ಪ್ರೊ. ಎಂ.ಜಿ.ಮಂಜುನಾಥ್ ಭಾಗವಹಿಸುವರು.

ವೀರಶೈವ ಲಿಂಗಾಯತ ವಧು-ವರರ ಸಮಾವೇಶ

ಮೈಸೂರು,ಏ.11-ಮೈಸೂರಿನ ನಮನ ಕಲಾ ಮಂಟಪದಲ್ಲಿ ಮೇ 8ರಂದು ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ವೀರಶೈವ ಲಿಂಗಾಯತ ವಧು-ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಮೇ 7ರೊಳಗೆ ನೋಂದಣಿ ಮಾಡಿಕೊಳ್ಳಲು ಕೋರಲಾಗಿದೆ. ಮಾಹಿತಿಗೆ ಮೊ. 9972703737, 9686205346 ಸಂಪರ್ಕಿಸಬಹುದು.

ವೃದ್ಧೆ ನಾಪತ್ತೆ



ಮೈಸೂರು,ಏ.11-ಮೈಸೂರಿನ ಮಹದೇಶ್ವರ ಬಡಾವಣೆ 4ನೇ ಕ್ರಾಸ್ ನಿವಾಸಿ ಚಿನ್ನಮ್ಮ (66) ಎಂಬುವರು ಏ.6ರಿಂದ ಕಾಣೆಯಾಗಿದ್ದಾರೆ. ಅವರ ಸುಳಿವು ಪತ್ತೆಯಾದಲ್ಲಿ ವಿಜಯನಗರ ಠಾಣೆ (0821-2418317) ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ (0821-2418339)ಗೆ ಮಾಹಿತಿ ನೀಡುವಂತೆ ಕೋರಲಾಗಿದೆ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬಿಸಿಯೂಟ ನೌಕರರ ಪ್ರತಿಭಟನೆ

ನಿವೃತ್ತಿ ವೇತನ ಅಥವಾ ಇಡುಗಂಟು ನೀಡದೇ ಕರ್ತವ್ಯದಿಂದ ಬಿಡುಗಡೆಗೆ ವಿರೋಧ



ಮೈಸೂರು,ಏ.11(ಪಿಎಂ)- ನಿವೃತ್ತಿ ವೇತನ ಅಥವಾ ಇಡುಗಂಟು ನೀಡುವವರೆಗೆ ಅಕ್ಷರ ದಾಸೋಹ ಬಿಸಿಯೂಟ ನೌಕರರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಬಾರದು ಎಂಬುದೂ ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ (ಸಿಐಟಿಯು) ಮೈಸೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಬಿಸಿಯೂಟ ನೌಕರರು ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಗನ್‌ಹೌಸ್ ವೃತ್ತದಲ್ಲಿ ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ ನೌಕರರು, ಜಿಲ್ಲಾ ಪಂಚಾಯಿತಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತದಲ್ಲಿ ಸಾಗಿದ ಪ್ರತಿಭಟನಾ ಮೆರವಣಿಗೆ ಕೃಷ್ಣರಾಜ-ಬುಲೇವಾರ್ಡ್ ರಸ್ತೆಯಲ್ಲಿರುವ ಜಿಪಂ ಕಚೇರಿ ತಲುಪಿತು. ಬಳಿಕ ಜಿಪಂ ಕಚೇರಿ ಎದುರು ಮಧ್ಯಾಹ್ನವರೆಗೆ ಪ್ರತಿಭಟನೆ ನಡೆಸಲಾಯಿತು.

2001-02ರಲ್ಲಿ ಅಡುಗೆ ಕೆಲಸಕ್ಕೆ ತೆಗೆದುಕೊಳ್ಳುವ ಸಂದರ್ಭದಲ್ಲಿ ಸರ್ಕಾರದ ಕೈಪಿಡಿಯಲ್ಲಿ ವಿದ್ಯಾಭ್ಯಾಸ ಮತ್ತು ವಯಸ್ಸಿನ ಅರ್ಹತೆ ಮಾತ್ರ ನಿಗದಿ ಮಾಡಲಾಗಿತ್ತು. ಅದರಲ್ಲಿ ನಿವೃತ್ತಿ ವಯಸ್ಸು ನಿಗದಿಯಾಗಿರಲಿಲ್ಲ. ಅಲ್ಲದೆ, ಈವರೆಗೆ 60 ವರ್ಷ ವಯೋಮಿತಿ ದಾಟಿದವರು ಕರ್ತವ್ಯ ನಿರ್ವಹಿಸುತ್ತಿದ್ದರು. ಆದರೆ ಇದೀಗ 60 ವರ್ಷ ವಯೋಮಾನದ ನೆಪವೊಡ್ಡಿ ನಿವೃತ್ತಿ ಹೆಸರಿನಲ್ಲಿ ಕರ್ತವ್ಯದಿಂದ ಬಿಡುಗಡೆ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಕ್ಷರ ದಾಸೋಹ ನೌಕರರ ಸಂಘ (ಸಿಐಟಿಯು) 2016ರಿಂದಲೂ ವಯಸ್ಸಿನ ಆಧಾರದಲ್ಲಿ ನಿವೃತ್ತಿ ಸೌಲಭ್ಯ ಕೊಡಬೇಕೆಂದು ಹಲವು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಈ ಹಿನ್ನೆಲೆಯಲ್ಲಿ ಬಿಸಿಯೂಟ ನೌಕರರ ವೇತನದಲ್ಲಿ 100 ರೂ. ಮತ್ತು ಸರ್ಕಾರ 100 ರೂ. ಭರಿಸಿ, ಎಲ್‌ಐಸಿ ಮೂಲಕ ವಿಶೇಷ ಪಿಂಚಣಿ ಯೋಜನೆ ರೂಪಿಸಲು ಒಪ್ಪಿಗೆ ಸೂಚಿಸಲಾಗಿತ್ತು. ಈ ಎಲ್ಲಾ ಕ್ರಮಗಳು ಜಾರಿಯಾಗುವ ಮೊದಲೇ ಸರ್ಕಾರ ಏಕಾಏಕಿ ಬಿಸಿಯೂಟ ನೌಕರರನ್ನು ನಿವೃತ್ತಿ ಮಾಡುತ್ತಿರುವುದು ಅಮಾನವೀಯ ಎಂದು ಖಂಡಿಸಿದರು.

ಯಾವುದೇ ನಿವೃತ್ತಿ ಸೌಲಭ್ಯವಿಲ್ಲದೆ ರಾಜ್ಯದಲ್ಲಿ ಸುಮಾರು 12 ಸಾವಿರ ನೌಕರರನ್ನು ಸರ್ಕಾರ ಕರ್ತವ್ಯದಿಂದ ಬಿಡುಗಡೆ ಮಾಡಿದೆ. ಸರ್ಕಾರ ಕೂಡಲೇ ಈ ಸಂಬಂಧ ಹೊರಡಿಸಿರುವ ಸುತ್ತೋಲೆಯನ್ನು ಹಿಂದಕ್ಕೆ ಪಡೆಯಬೇಕು. ಮಾರ್ಚ್ ತಿಂಗಳ ಬಜೆಟ್‌ನಲ್ಲಿ ಬಿಸಿಯೂಟ ನೌಕರರಿಗೆ ಹೆಚ್ಚಳ ಮಾಡಿದ 1 ಸಾವಿರ ವೇತನವನ್ನು 2022ರ ಜನವರಿಯಿಂದ ಅನ್ವಯಿಸಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು. ಬಿಸಿಯೂಟ ನೌಕರರನ್ನು ಖಾಯಂ ಮಾಡಬೇಕು. ಅಲ್ಲಿಯವರೆಗೆ 45 ಮತ್ತು 46ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನಂತೆ ಇವರನ್ನು ಕಾರ್ಮಿಕರೆಂದು ಪರಿಗಣಿಸಬೇಕು. ಬೇಸಿಗೆ ಮತ್ತು ದಸರಾ ರಜೆಯ ವೇತನ ಪಾವತಿಸಬೇಕು. ಎಲ್ಲರಿಗೂ ಅನ್ವಯವಾಗದೇ ಇರುವ ಮಾನ್-ಧನ್ ಯೋಜನೆ ಮಾಡಿಸಲು ಇಲಾಖೆಯಿಂದ ಒತ್ತಾಯಿಸಬಾರದು. ಪ್ರತಿ ತಿಂಗಳು 5ರೊಳಗೆ ವೇತನ ಪಾವತಿಸಬೇಕು ಎಂದು ಆಗ್ರಹಿಸಿದರು. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಜಯರಾಂ, ಸಂಘದ ಜಿಲ್ಲಾ ಸಮಿತಿ ಗೌರವಾಧ್ಯಕ್ಷೆ ಸುನಂದಾ, ಸಂಘದ ಜಿಲ್ಲಾಧ್ಯಕ್ಷೆ ಕೆ.ಮಂಜುಳಾ, ಪ್ರಧಾನ ಕಾರ್ಯದರ್ಶಿ ಮಂಗಳಾ, ಪದಾಧಿಕಾರಿಗಳಾದ ಪುಷ್ಪ ಸರಸ್ವತಿ, ಲೀಲಾವತಿ, ಕಾಮಾಕ್ಷಮ್ಮ ಸೇರಿದಂತೆ ನೂರಾರು ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬೇಡಿಕೆಗೆ ಸ್ಪಂದಿಸದಿದ್ದರೆ ಏ.18ರಿಂದ ಬೆಂಗಳೂರಲ್ಲಿ ಬೃಹತ್ ಹೋರಾಟ

ಮೈಸೂರು ಜಿಲ್ಲೆಯ 480 ಮಂದಿ ಸೇರಿದಂತೆ ಇಡೀ ರಾಜ್ಯದಲ್ಲಿ 12 ಸಾವಿರ ಬಿಸಿಯೂಟ ನೌಕರರನ್ನು ಮಾ.31ರಂದು ಕೆಲಸದಿಂದ ಬಿಡುಗಡೆ ಮಾಡಲಾಗಿದೆ. ಇವರಿಗೆ ತಲಾ 1 ಲಕ್ಷ ರೂ. ಇಡುಗಂಟು ನೀಡಬೇಕು. ಮುಖ್ಯ ಅಡುಗೆಯವರಿಗೆ 2,700 ರೂ. ಮತ್ತು ಸಹಾಯಕರಿಗೆ 2,600 ವೇತನ ನೀಡುತ್ತಿದ್ದು, ಶಿಕ್ಷಣ ಇಲಾಖೆ ಶಿಫಾರಸ್ಸಿನಂತೆ ಮುಖ್ಯ ಅಡುಗೆಯವರಿಗೆ 6 ಸಾವಿರ ರೂ. ಮತ್ತು ಸಹಾಯಕರಿಗೆ 5 ಸಾವಿರ ರೂ. ವೇತನ ನೀಡಬೇಕು. ನಮ್ಮ ಬೇಡಿಕೆಗಳಿಗೆ ಸ್ಪಂದಿಸದೇ ಇದ್ದರೆ, ಏ.18ರಿಂದ ಬೆಂಗಳೂರಿನಲ್ಲಿ ರಾಜ್ಯಮಟ್ಟದ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗುವುದು. **-ಸಂಘದ ಜಿಲ್ಲಾಧ್ಯಕ್ಷೆ ಕೆ.ಮಂಜುಳಾ**

ಮಾನವನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಕಳಪೆ, ಕಲಬೆರಕೆ ಆಹಾರ, ಪರಿಸರ ಮಾಲಿನ್ಯ

'ವಿಶ್ವ ಆರೋಗ್ಯ ದಿನ' ಕಾರ್ಯಕ್ರಮದಲ್ಲಿ ಖ್ಯಾತ ಹೃದ್ರೋಗ ತಜ್ಞ ಡಾ. ಕೆ.ಎಸ್.ಸದಾನಂದ ಆತಂಕ



ಮೈಸೂರು,ಏ.11(ಆರ್‌ಕೆಬಿ)-ಬದಲಾಗುತ್ತಿರುವ ಜೀವನ ಶೈಲಿ ಹಾಗೂ ಆಹಾರ ಪದ್ಧತಿ ಅದರಲ್ಲೂ ಕಲಬೆರಕೆ ಆಹಾರ ಮತ್ತು ಹೆಚ್ಚುತ್ತಿರುವ ಪರಿಸರ ಮಾಲಿನ್ಯದಿಂದ ಹೊಸ ಹೊಸ ರೋಗಗಳು ವ್ಯಾಪಿಸುತ್ತಿವೆ ಎಂದು ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಫಾರ್ಮಸಿ ಕಾಲೇಜು ವತಿಯಿಂದ ಸೋಮವಾರ 'ವಿಶ್ವ ಆರೋಗ್ಯ ದಿನ'ದ ಅಂಗವಾಗಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ಮಧುಮೇಹ, ಬೊಜ್ಜು, ರಕ್ತದೊತ್ತಡ, ಹೃದಯಾಘಾತ, ಕ್ಯಾನ್ಸರ್, ಉಸಿರಾಟದ ಸೋಂಕುಗಳು ಇನ್ನಿತರ ಮಾರಣಾಂತಿಕ ಕಾಯಿಲೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಕೆಲವು ಮಾಲಿನ್ಯ ಮತ್ತು ಕಲಬೆರಕೆ ಆಹಾರದ ಸೇವನೆಯಿಂದ ನಮ್ಮ ಆರೋಗ್ಯಕ್ಕೆ ಧಕ್ಕೆಯಾಗುತ್ತಿದೆ. ಹೀಗಾಗಿ ಒತ್ತಡಕ್ಕೆ ಒಳಗಾಗುತ್ತಿದ್ದೇವೆ. ಹವಾಮಾನ ಬದಲಾವಣೆ, ಜಾಗತಿಕ ತಾಪಮಾನ ಮತ್ತು ಇನ್ನಿತರ ಪರಿಸರ ಮಾಲಿನ್ಯದಿಂದ ಉಂಟಾದ ಇತರ ಕಾರಣಗಳಿಂದಾಗಿ ವ್ಯಕ್ತಿಯ ಸಹಜ ನಿದ್ರಿಸುವಿಕೆ ಮೇಲೆ ಪರಿಣಾಮ ಬೀರುತ್ತಿದೆ. ಅಗತ್ಯಕ್ಕಿಂತ ಕಡಿಮೆ ಸಮಯ ನಿದ್ರಿಸುತ್ತಿದ್ದಾರೆ. ಇದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಲಿದ್ದು, ಮುನ್ನೆಚ್ಚರಿಕೆ ವಹಿಸಬೇಕು ಎಂದು ಕರೆ ನೀಡಿದರು.

ಎಲ್ಲಾ ರೀತಿಯ ಮಾಲಿನ್ಯವು ನಮ್ಮ ಆರೋಗ್ಯದ ಮೇಲೆ ದೊಡ್ಡ ಪರಿಣಾಮ ಬೀರುತ್ತಿದೆ. ಪರಿಸರದ ಅಪಾಯಗಳು ನಮ್ಮ ಭೂಮಿಯ ಆರೋಗ್ಯ ಮತ್ತು ಮಾನವನ ಆರೋಗ್ಯಕ್ಕೆ ತೀವ್ರ ತರದ ಸವಾಲನ್ನು ಒಡ್ಡುತ್ತಿವೆ. ಅದರಿಂದ ಪಾರಾಗಲು ನಾವು ನಮ್ಮ ಪರಿಸರವನ್ನು ಸಂರಕ್ಷಿಸಿಕೊಳ್ಳಬೇಕು. ಜೊತೆಗೆ ನಮ್ಮ ಆರೋಗ್ಯದ ಕಡೆಗೆ ಹೆಚ್ಚು ಲಕ್ಷ್ಯ ವಹಿಸಬೇಕು ಎಂದು ಸಲಹೆ ನೀಡಿದರು. ಮೈಸೂರು ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಹನುಮಂತಾಚಾರ್ ಜೋಶಿ ಅಧ್ಯಕ್ಷತೆ ವಹಿಸಿದ್ದರು. ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಎನ್.ಚಂದ್ರಶೇಖರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.04.2022 ಮಂಗಳವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ಏಕಾದಶಿ, ನಕ್ಷತ್ರ: ಮಖೆ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಡಾ. ರಾಜ್‌ಕುಮಾರ್ ಸೇವಾ ಸಮಿತಿ :** ಡಾ. ರಾಜ್‌ಕುಮಾರ್‌ರವರ 16ನೇ ವರ್ಷದ ಪುಣ್ಯಸ್ಮರಣೆ, ಮುಖ್ಯ ಅತಿಥಿಗಳು : ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಕಾಂಗ್ರೆಸ್ ಯುವ ಮುಖಂಡ ಎನ್.ಎಂ. ನವೀನ್ ಕುಮಾರ್, ಜೀವಧಾರಾ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಸ್ಥಳ: ವಸ್ತುಪ್ರದರ್ಶನ ಆವರಣ, ಬೆಳಗ್ಗೆ 10.30ಕ್ಕೆ.

■ **ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ :** ವಸಂತ-ವೈಭವ ಮಕ್ಕಳ ಬೇಸಿಗೆ ಶಿಬಿರ, ಉದ್ಘಾಟನೆ : ಭ್ರಮರಿ ಡ್ಯಾನ್ಸ್ ರೆಪರ್ಟರಿ ನಿರ್ದೇಶಕಿ ವಿದುಷಿ ಸ್ನೇಹಾ ಕುಪ್ಪಣ್ಣ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಟಿ. ಗುರುರಾಜ್, ಅಧ್ಯಕ್ಷತೆ : ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ ಅಧ್ಯಕ್ಷ ಎಂ. ರಾಮಪ್ಪ, ಸ್ಥಳ: ರೂಪಾನಗರ ಶಾಲೆ ಆವರಣ, ಬೆಳಗ್ಗೆ 11ಕ್ಕೆ.


■ **ವೆಂಕಟಗಿರಿ ಪ್ರಕಾಶನ :** ಡಾ. ಎ. ಪುಷ್ಪ ಅಯ್ಯಂಗಾರ್ ಅವರ 'ಬಾಳು ಬೆಳಗಿತು' ಕೃತಿ ಬಿಡುಗಡೆ ಹಾಗೂ 'ಮುಂಗಾರು ಕವಿ ಸಮ್ಮಿಲನ' ಕಾರ್ಯಕ್ರಮ, ಕೃತಿ ಬಿಡುಗಡೆ: ಪ್ರೊ. ಭಾಷ್ಯಂ ಸ್ವಾಮೀಜಿ, ಅಧ್ಯಕ್ಷತೆ : ವಿದ್ಯಾ ವಿಕಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ವಾಸು, ಉಪಸ್ಥಿತರು : ಮಹಾಕವಿಯತ್ರಿ ಡಾ. ಲತಾ ರಾಜಶೇಖರ್, ಸಮಾಜ ಸೇವಕಿ ಎ. ವೈದೇಹಿ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಪ್ರೊ. ನೀ. ಗಿರಿಗೌಡ, ಮುಂಗಾರು ಸಮ್ಮಿಲನದಲ್ಲಿ : ಡಾ. ಸಿಪಿಕೆ, ಪ್ರೊ. ಮಲೆಯೂರು ಗುರುಸ್ವಾಮಿ, ಸ.ಚ. ಮಹದೇವನಾಯಕ್, ಪ್ರೊ. ಕೆ. ಲೀಲಾಪ್ರಕಾಶ್, ಎಂ. ಮುತ್ತುಸ್ವಾಮಿ, ಕೆ.ಆರ್. ಷಣ್ಮುಖಸ್ವಾಮಿ, ಡಾ. ಉಷಾನರಸಿಂಹನ್, ಡಾ. ಸೌಗಂಧಿಕಾ ವಿ. ಜೋಯಿಸ್, ಸಾಲುಂಡಿ ಬಸಪ್ಪ, ತುಮಕೂರು ಕಮಲಾ ರಾಜೇಶ್, ಸ್ಥಳ: ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಕಲ್ಯಾಣೋತ್ಸವ ಭವನ, ಬೆಳಗ್ಗೆ 11.30ಕ್ಕೆ.

■ **ಕರ್ನಾಟಕ ರಾಜ್ಯ ಸವಿತಾ ಸಮಾಜ :** ಸಂಘಟನೆ ಮತ್ತು ವಿಚಾರ ಸಂಕಿರಣ, ಉದ್ಘಾಟನೆ : ರಾಜ್ಯ ಸವಿತಾ ಸಮಾಜದ ಅಭಿವೃದ್ಧಿ ನಿಗಮದ ಅಧ್ಯಕ್ಷ ನರೇಶ್ ಕುಮಾರ್, ಅಧ್ಯಕ್ಷತೆ : ರಾಜ್ಯ ಸವಿತಾ ಸಮಾಜದ ಅಧ್ಯಕ್ಷ ಸಂಪತ್ ಕುಮಾರ್, ಮುಖ್ಯ ಅತಿಥಿಗಳು : ಎಸ್. ಕಿರಣ್ ಕುಮಾರ್, ಆರ್. ಆನಂದ್, ವಿ. ಮಂಜುನಾಥ್, ರಾಜ್‌ಕುಮಾರ್, ಎಂ. ರಮೇಶ್, ಸ್ಥಳ: ಹೋಟೆಲ್ ಗೋವರ್ಧನ್, ಶ್ರೀ ಹರ್ಷ ರಸ್ತೆ, ಮಧ್ಯಾಹ್ನ 2.30 ರಿಂದ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಕಲಾಕೂಟ, ವೀರಶೈವ ಲಿಂಗಾಯತ ಮಹಾಸಭಾ ಬಸವ ಬಳಗಗಳ ಒಕ್ಕೂಟ :** ಶಿವಸಂಚಾರ ನಾಟಕೋತ್ಸವ, ಗಡಿಯಂಕ ಕುಡಿಮದ್ದು ನಾಟಕ ಪ್ರದರ್ಶನ, ರಚನೆ : ಲಿಂಗದೇವರು ಹಳೆಮನೆ, ನಿರ್ದೇಶನ ಮತ್ತು ಸಂಗೀತ : ಆರ್. ಜಗದೀಶ್, ಸ್ಥಳ: ಶ್ರೀ ಹೊಸಮಠ ಶಿಕ್ಷಣ ಸಂಸ್ಥೆಗಳ ಆವರಣ, ಸಂಜೆ 6.30ಕ್ಕೆ.

ವಿವಿಧೆಡೆ ಶ್ರೀ ರಾಮನವಮಿ

■ **ಗಾನವಿಶಾರದ ಶ್ರೀಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 106ನೇ ವಾರ್ಷಿಕ ಪಾರಂಪರಿಕ ರಾಮನವಮಿ ಸಂಗೀತೋತ್ಸವ, ವಿದುಷಿ ಇಂದು ನಾಗರಾಜ್ ಮತ್ತು ವಿದುಷಿ ಲಕ್ಷ್ಮಿ ನಾಗರಾಜ್ ಅವರಿಂದ ಯುಗಳ ಗಾಯನಗೋಷ್ಠಿ, ವಿದ್ವಾನ್ ಸುಮಂತ್ ಮಂಜುನಾಥ್(ವಯೋಲಿನ್), ವಿದ್ವಾನ್ ಕೇಶವದತ್ (ಮೃದಂಗ), ವಿದ್ವಾನ್‌ಶಮಿತ್‌ಗೌಡ (ಘಟಂ) ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 5.30ಕ್ಕೆ.



■ **ಶ್ರೀ ಮಹಾಜನ ಸಭಾ, ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ :** 93ನೇ ವರ್ಷದ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ 10ಕ್ಕೆ ಶ್ರೀ ಅನಂತ ಜೋಶಿ, ಅಧ್ಯಕ್ಷರು ವೇದ ಬಳಗ ಮತ್ತು ವೃಂದ ದವರಿಂದ ಶ್ರೀ ರಾಮತಾರಕ ಹೋಮ, ಸಂಜೆ 6 ರಿಂದ ವಿದುಷಿ ಮೇಧಾ ವಿನೋದ್ ಶ್ಯಾಮ್ ಮತ್ತು ಶ್ರೀಮತಿ ವೃಂದದವರಿಂದ ಶಾಸ್ತ್ರೀಯ ಸಂಗೀತ ಗಾಯನ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್, ಮೈಸೂರು ಉತ್ತರ:** ಶ್ರೀರಾಮನವಮಿ ಸಂಗೀತ ಕಾರ್ಯಕ್ರಮ, ಬೆಳಗ್ಗೆ 10ಕ್ಕೆ ಸೀತಾ ಸಹಸ್ರನಾಮ ಮತ್ತು ಶ್ರೀ ರಾಮ ಪಟ್ಟಾಭಿಷೇಕ, ಸಂಜೆ 5.15ಕ್ಕೆ ವಿದ್ವಾನ್ ವರುಣ್ ಅವರಿಂದ ಕೊಳಲು ವಾದನ, ಸಿ.ವಿ. ಶ್ರುತಿ-ಪಿಟೀಲು, ಶುಭಾಂಗ್-ಮೃದಂಗ, ಸಂಜೆ 6ಕ್ಕೆ ವಿದ್ವಾನ್ ಯಘ್ನೇಶ್ ಹೆಚ್. ಸೂರತ್‌ಕಲ್ ಮತ್ತು ವೃಂದ (ಪಾದುಕ ಪ್ರಧಾನ ಮತ್ತು ನಿವೇದನ) ಹರಿಕಥೆ, ಸ್ಥಳ : ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಮೈಸೂರು.

■ **ಶ್ರೀ ಜಾನಕೀ ರಾಮ ಮಂದಿರ :** ಶ್ರೀ ರಾಮನವಮಿ ಕಾರ್ಯಕ್ರಮ, ಸಂಜೆ 6ಕ್ಕೆ ಶ್ರೀ ವಿದ್ಯಾಗಣಪತಿ ಭಜನಾ ಮಂಡಳಿಯವರಿಂದ ಭಜನೆ, ಸ್ಥಳ: ಮಂದಿರದ ಆವರಣ, ಗೊಲ್ಲಗೇರಿ, ಚಾಮರಾಜ ಮೊಹಲ್ಲಾ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮೋತ್ಸವ ಕಾರ್ಯಕ್ರಮ, ವಿದ್ವಾನ್ ವಿಘ್ನೇಶ್ ಈಶ್ವರನ್ ಅವರಿಂದ ಶಾಸ್ತ್ರೀಯ ಸಂಗೀತ, ಆರ್.ಕೆ. ಶ್ರೀರಾಮ್‌ಕುಮಾರ್ (ಪಿಟೀಲು), ವಿದ್ವಾನ್ ಅರುಣ್ ಪ್ರಕಾಶ್ (ಮೃದಂಗ), ಭಾರ್ಗವ ಹಾಲಂಬಿ (ಖಂಜೀರಾ), ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ.

■ **ಶ್ರೀ ರಾಮ ಸೇವಾ ಮಂಡಲಿ :** ಶ್ರೀ ರಾಮೋತ್ಸವ ಕಾರ್ಯಕ್ರಮ, ಬೆಳಗ್ಗೆ 10.30ಕ್ಕೆ ಶಾರದಾಂಬ ಭಜನಾ ಮಂಡಳಿಯಿಂದ ಭಜನೆ, ಸಂಜೆ 6.30ಕ್ಕೆ ಚಿನ್ಮಯ ಮಿಷನ್‌ನ ಪರಮಪೂಜ್ಯ ಸ್ವಾಮಿ ಆದಿತ್ಯಾನಂದ ಅವರಿಂದ ಆನಂದ ರಾಮಾಯಣ ಕುರಿತು ಉಪನ್ಯಾಸ, ಸಂಜೆ 7.45 ರಿಂದ ವಿದುಷಿ ರೂಪಶ್ರೀ ಆನಂದ್ ಮತ್ತು ವೃಂದದವರಿಂದ ಸಂಗೀತ, ಸ್ಥಳ: ಆವನಿ ಶಂಕರ ಮಠ, 9ನೇ ಕ್ರಾಸ್, ವಿದ್ಯಾರಣ್ಯಪುರಂ.

■ **ಶ್ರೀ ರಾಮ ಮಂದಿರ, ಜಯನಗರ :** ಶ್ರೀ ರಾಮೋತ್ಸವ, ಬೆಳಗ್ಗೆ 7ಗಂಟೆಗೆ ಶ್ರೀ ಲಲಿತಾ ಹೋಮ, ಸಂಜೆ 6.30ಕ್ಕೆ ವಿದ್ವಾನ್ ಡಾ. ರಾ.ಸ. ನಂದಕುಮಾರ್ ಮತ್ತು ಶಿಷ್ಯರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಶ್ರೀರಾಮಮಂದಿರ, ಜಯನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 / 5.00 ಅಕ್ಷರ ಮೈಸೂರು ಅನ್ನದ ಸೂರು -ಮೈಸೂರಿನ ಪರಂಪರೆಯಲ್ಲಿ ಅನ್ನ ಅಕ್ಷರಗಳ ನೆನಪು, ಪ್ರಸ್ತುತಿ- ಡಾ. ವಿ. ರಂಗನಾಥ್, 6.40 ಅರಿವಿನ ಶಿಖರ-ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ-ಗೀತಾ ವೈ ಪುಟ್ಟಿ, ಕೆ.ಪಿ. ರೇವತಿ ಮತ್ತು ಎ.ಎನ್. ಶೀಲಾ, ವ್ಯಾಖ್ಯಾನ- ಡಾ.ಲತಾ ಮೈಸೂರು, 7.15 ಕಾದಂಬರಿ ವಿಹಾರ-ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ- ಉಮೇಶ್ ಎಸ್.ಎಸ್., 7.45 ನಿತ್ಯ ವಿಜ್ಞಾನ-ಪ್ರಾಯೋಜಿತ ಕಾರ್ಯಕ್ರಮ, 10.00 ಎಂ.ಡಿ. ಸುಮತಿ ಮುರಾರಿ- ಹಾಡುಗಾರಿಕೆ, 10.30 ನಮ್ಮ ಆರೋಗ್ಯ-ಪ್ರಣವ ಹೆಲ್ತ್ ಕೇರ್ ಪ್ರಾಯೋಜಿತ ಕಾರ್ಯಕ್ರಮ ವೃಷಣ ಕ್ಯಾನ್ಸರ್, ಅನ್ನನಾಳದ ಕ್ಯಾನ್ಸರ್ ಹಾಗೂ ತಲೆ ಮತ್ತು ಕತ್ತಿನ ಕ್ಯಾನ್ಸರ್ - ಚಿಕಿತ್ಸೆ ಕುರಿತು ಡಾ. ಗಿರೀಶ್ ಎಂ. ಅವರಿಂದ ಮಾಹಿತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05ವನಿತಾ ವಿಹಾರ, 12.30 ದೇವರನಾಮ, 12.45 ಸ್ವಾತಂತ್ರ್ಯ ಚಳವಳಿಯಲ್ಲಿ ವಿಜ್ಞಾನಿಗಳು, ಮಾತನಾಡುತ್ತಾರೆ ಹರ್ಷವರ್ಧನ ಬಿ., 1.20 ಭಾವಗೀತೆ-ದೀಪಾ ಸತ್ಯನಾರಾಯಣ, 3.00 ಕೆ. ಗಾನ ಸರಸ್ವತಿ-ಹಾಡುಗಾರಿಕೆ, 4.00 ಕಥಾಕಾಲಕ್ಷೇಪ-ಶ್ರೀ ರಾಮಾಂಜನೇಯ ಯುದ್ಧ, ಪ್ರಸ್ತುತಿ- ವಿದ್ವಾನ್ ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ-ಕಿಸಾನ್ ವಾಣಿ-ಭತ್ತದ ಕೃಷಿಯಲ್ಲಿ ಅಧಿಕ ಉತ್ಪಾದನೆಗಾಗಿ ತಾಂತ್ರಿಕತೆಗಳು ಕುರಿತು ಡಾ.ಎಂ.ಪಿ. ರಾಜಣ್ಣ ಅವರೊಡನೆ ಸಂದರ್ಶನ, 10.00 ಯಕ್ಷ ಸಂಪದ-ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ನಿರ್ವಹಣ- ದಿವಾಕರ ಹೆಗಡೆ, 10.30 ಸವಿನೆನಪು

ಮೈಸೂರು ಮಿತ್ರ

ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರುವ ಹೊಣೆಗಾರಿಕೆ ಪ್ರಶಾಂತ್ ಕಿಶೋರ್ ತಂಡಕ್ಕೆ

- ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ: ಖುದ್ದು ರಾಹುಲ್ ಗಾಂಧಿ ಮೇಲುಸ್ತುವಾರಿ
- ಕಿಶೋರ್ ತಂಡದ ಸುನೀಲ್‌ಕುನಗೋಳ್ ರಾಜ್ಯದಲ್ಲಿ ಕಾರ್ಯಾರಂಭ

ಬೆಂಗಳೂರು, ಏ.11(ಕೆಎಂಶಿ)– ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಹೊಣೆಗಾರಿಕೆಯನ್ನು ಚುನಾವಣಾ ಮಾಂತ್ರಿಕ ಪ್ರಶಾಂತ್ ಕಿಶೋರ್ ತಂಡದ ಸುನೀಲ್‌ಕುನಗೋಳ್ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ವಹಿಸಿದೆ.

ಸುನೀಲ್ ಅವರ ಎಬಿಎಂ ಸಂಸ್ಥೆ ನಗರದ ಎಂ.ಜಿ. ರಸ್ತೆಯಲ್ಲಿ ಕಚೇರಿ ತೆರೆದು, ಚುನಾವಣಾ ಕೆಲಸ ಆರಂಭಿಸಿದೆ.

ಸಂಸ್ಥೆ ನೀಡುವ ಸಲಹೆ ಸೂಚನೆಯಂತೆ ಪ್ರದೇಶ ಕಾಂಗ್ರೆಸ್ ಹಾಗೂ ಮುಖಂಡರು ನಡೆದುಕೊಳ್ಳುವಂತೆ ಕಾಂಗ್ರೆಸ್‌ನ ಯುವರಾಜ ರಾಹುಲ್‌ಗಾಂಧಿ ಆದೇಶ ಮಾಡಿದ್ದಾರೆ.

ರಾಹುಲ್ ಅವರೇ ಸಂಸ್ಥೆಯ ಮುಖ್ಯಸ್ಥರೊಟ್ಟಿಗೆ ಕಳೆದ ತಿಂಗಳು ಸಮಾಲೋಚನೆ ನಡೆಸಿ, ರಾಜ್ಯದ ಚುನಾವಣಾ ಹೊಣೆಗಾರಿಕೆಯನ್ನು ಈ ಸಂಸ್ಥೆಯ ಹೆಗಲಿಗೆ ಹಾಕಿದ್ದಾರೆ.

ಇಡೀ ರಾಷ್ಟ್ರದಲ್ಲಿ ಕಾಂಗ್ರೆಸ್ ಸೋತು ಸೋತು ಎಡಪಂಥೀಯ ಪಕ್ಷಗಳಂತೆ ಎಲ್ಲೆಡೆ ಒಂದಂಕಿಗೆ ಕುಸಿಯುತ್ತಿದೆ. ಈ ಹಿನ್ನೆಲೆಯಲ್ಲಿ ಗೆಲುವಿನ ಅವಕಾಶವಿರುವ ಕರ್ನಾಟಕದಲ್ಲಿ ಅಧಿಕಾರ ಹಿಡಿಯಲು ರಾಹುಲ್ ಎಲ್ಲ ಕಸರತ್ತು ನಡೆಸಿದ್ದಾರೆ.



ಪ್ರಶಾಂತ್ ಕಿಶೋರ್

ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದರೆ ಮುಂಬರುವ ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಹೋರಾಟ ಮಾಡಲು ನಮ್ಮ ಕಾರ್ಯಕರ್ತರಲ್ಲಿ ಹುಮ್ಮಸ್ಸು ಬರುತ್ತದೆ ಎನ್ನುವ ದೃಷ್ಟಿಯಿಂದ ಪಕ್ಷವನ್ನು ಅಧಿಕಾರಕ್ಕೆ ತರಲು ಎಬಿಎಂ ಸಂಸ್ಥೆಗೆ ಇಡೀ ಹೊಣೆಗಾರಿಕೆ ವಹಿಸಲಾಗಿದೆ.

ಗೆಲುವಿನ ಅವಕಾಶವನ್ನು ಕಳೆದುಕೊಳ್ಳಬಾರದೆಂಬ ಉದ್ದೇಶದಿಂದ ರಾಹುಲ್ ಅವರೇ ಚುನಾವಣೆಯ ಮೇಲುಸ್ತುವಾರಿ ವಹಿಸಿಕೊಂಡಿದ್ದಾರೆ. ಚಾಣಕ್ಯನ ಸಂಸ್ಥೆ ನೀಡುವ ಸಲಹೆ ಸೂಚನೆಗಳಂತೆ ರಾಜ್ಯದ ನಾಯಕರು ನಡೆದುಕೊಳ್ಳುವಂತೆಯು ಆದೇಶ ಮಾಡಿದ್ದಾರೆ.

ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಗಳಾಗಿರುವ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಚುನಾವಣಾ ಸಮೀಕ್ಷೆಗಾಗಿ ಪ್ರತ್ಯೇಕ ಸಂಸ್ಥೆಗಳನ್ನು ನೇಮಕ ಮಾಡಿಕೊಂಡು, ಈಗಾಗಲೇ ಆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು.

ಆದರೆ ಇದೀಗ ವರಿಷ್ಠರೇ ಸಂಸ್ಥೆ ನೇಮಕ ಮಾಡಿದ ಹಿನ್ನೆಲೆಯಲ್ಲಿ ಅವರ ಅಣತಿಯಂತೆ ನಡೆದುಕೊಳ್ಳಬೇಕು.

ಸಂಸ್ಥೆಯ ಮುಖ್ಯಸ್ಥ ಸುನೀಲ್, ಈಗಾಗಲೇ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಎಂ.ಬಿ. ಪಾಟೀಲ್, ಡಿ.ಕೆ ಶಿವಕುಮಾರ್, ಹರಿಪ್ರಸಾದ್ ಸೇರಿದಂತೆ ರಾಜ್ಯದ ಕಾಂಗ್ರೆಸ್ ಮುಖಂಡ ರೊಟ್ಟಿಗೆ ಒಂದು ಸುತ್ತಿನ ಚರ್ಚೆ ನಡೆಸಿದ್ದಾರೆ. ಅನುಭವವಿರುವ 200 ಸಿಬ್ಬಂದಿಯೊಂದಿಗೆ ಸಮೀಕ್ಷಾ ಕಾರ್ಯ ಆರಂಭಿಸಿದೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಜೊತೆ ನಿರಂತರ ಸಂಪರ್ಕ ಇಟ್ಟುಕೊಂಡು ಚುನಾವಣಾ ಕೆಲಸ ಆರಂಭಿಸಿದೆ. ರಾಜ್ಯದ 224 ವಿಧಾಸಭಾ ಕ್ಷೇತ್ರಗಳ ವಾಸ್ತವ ಚಿತ್ರಣವನ್ನು ಪಡೆದುಕೊಂಡಿದೆ.

ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನೊಂದು ವರ್ಷ ಬಾಕಿ ಇದ್ದು, ಕಾಂಗ್ರೆಸ್ ಆಡಳಿತಾರೂಢ ಬಿಜೆಪಿ ಮತ್ತು ಜೆಡಿಎಸ್ ವಿರುದ್ಧ ಯಾವ ರೀತಿ ಹೋರಾಟ ಮಾಡಬೇಕು, ಯಾವ ವಿಷಯಗಳನ್ನು ಮುಂದಿಟ್ಟುಕೊಂಡು ಹೋದರೆ ಮತದಾರನ ಮನಗೆಲ್ಲಬಹುದು, ಮತ್ತು ಕ್ಷೇತ್ರಗಳಲ್ಲಿ ಯಾವ ಅಭ್ಯರ್ಥಿ ಕಣಕ್ಕಿಳಿಸಿದರೆ, ಗೆಲುವು ಸಾಧ್ಯವಾಗುತ್ತದೆ ಎಂಬುದರ ಬಗ್ಗೆ ಎಲ್ಲ ಮಗ್ಗಲುಗಳಿಂದಲೂ ಸ್ಥಳೀಯವಾಗಿ ಪರಿಶೀಲನೆ ಮಾಡಿ, ಕೆಪಿಸಿಸಿಗೆ ಕಾಲಾನುಕಾಲಕ್ಕೆ ಸಂಸ್ಥೆ ಶಿಫಾರಸು ಮಾಡುತ್ತದೆ. ಕರ್ನಾಟಕದಲ್ಲಿ ಚುನಾವಣಾ ಸಮೀಕ್ಷೆ ಮತ್ತು ತಂತ್ರಗಾರಿಕೆ ನಡೆಸಲು ದೊಡ್ಡ ಪ್ರಮಾಣದ ಹಣವನ್ನು ಸಂಸ್ಥೆಗೆ ಕಾಂಗ್ರೆಸ್ ಪಾವತಿಸುತ್ತಿದೆ.

ನ್ಯಾಷನಲ್ ಹೆರಾಲ್ಡ್ ಕೇಸ್: ಇಡಿಯಿಂದ ಮಲ್ಲಿಕಾರ್ಜುನ ಖರ್ಗೆ ವಿಚಾರಣೆ


ನವದೆಹಲಿ: ನ್ಯಾಷನಲ್ ಹೆರಾಲ್ಡ್ ಕೇಸ್‌ನಲ್ಲಿ ಅಕ್ರಮ ಹಣ ವರ್ಗಾವಣೆ ತನಿಖೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇಡಿ) ಕಾಂಗ್ರೆಸ್ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಮವಾರ ವಿಚಾರಣೆಗೆ ಒಳಪಡಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತನಿಖೆಗಾಗಿ ನವದೆಹಲಿಯಲ್ಲಿರುವ ಜಾರಿ ನಿರ್ದೇಶಾಲಯ ಅಧಿಕಾರಿಗಳ ಮುಂದೆ ವಿಚಾರಣೆಗೆ ಹಾಜರಾಗುವಂತೆ ರಾಜ್ಯಸಭೆಯ ವಿಪಕ್ಷ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸಮನ್ಸ್ ನೀಡಲಾಗಿತ್ತು ಎಂದು ಅವರು ಹೇಳಿದ್ದಾರೆ. ತನಿಖೆಯಲ್ಲಿ ಕೆಲವೊಂದು ವಿಷಯಗಳನ್ನು ತಿಳಿಯಲು ಇಡಿ ಬಯಸಿದ್ದು, ಹಣ ವರ್ಗಾವಣೆ ತಡೆ ಕಾಯ್ದೆಯಡಿ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗುತ್ತದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ದಾಖಲೆ ಬೆಲೆ ಏರಿಕೆ ಕಾಂಗ್ರೆಸ್ ಕಾಲದಲ್ಲೇ

ಸಿಎಂ ಬೊಮ್ಮಾಯಿ ತಿರುಗೇಟು

ಬೆಂಗಳೂರು, ಏ. 11(ಕೆಎಂಶಿ)– ಬೆಲೆಯೇರಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್‌ಗೆ ಪ್ರತಿಭಟನೆ ಮಾಡುವ ನೈತಿಕ ಹಕ್ಕಿಲ್ಲ. ದೇಶದಲ್ಲಿ ಅತೀ ಹೆಚ್ಚು ಬೆಲೆಯೇರಿಕೆ ಮಾಡಿದ ಖ್ಯಾತಿ, ಕೀರ್ತಿ, ದಾಖಲೆ ಕಾಂಗ್ರೆಸ್‌ನದ್ದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ಉಡುಪಿ ಜಿಲ್ಲಾ ಪ್ರವಾಸಕ್ಕೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರನ್ನು ದಾರಿ ತಪ್ಪಿಸಲು ಕಾಂಗ್ರೆಸ್ ಚುನಾವಣಾ ತಂತ್ರಗಾರಿಕೆ ನಡೆಸಿದೆ ಎಂದರು.

ರಾಜ್ಯದಲ್ಲಿ ಒಂದಲ್ಲಾ ಒಂದು ವಿವಾದ ಎಬ್ಬಿಸಿ, ಕಾನೂನು ಸುವ್ಯವಸ್ಥೆ ಹಾಳು ಮಾಡುವ ವ್ಯವಸ್ಥೆ ನಡೆದಿದೆ. ಇದಕ್ಕೆ ನಮ್ಮ ಸರ್ಕಾರ ಅವಕಾಶ ನೀಡುವುದಿಲ್ಲ.

ಯಾವುದೇ ಧರ್ಮಗಳು, ಅವರ ವಿಚಾರಗಳನ್ನು ಪ್ರಚಾರ ಮಾಡಿದರೆ, ತೊಂದರೆ ಇಲ್ಲ. ಆದರೆ ಕಾನೂನು ಕೈಗೆ ತೆಗೆದುಕೊಂಡಾಗ ಅಥವಾ ಹಿಂಸೆಗೆ ಇಳಿದಾಗ ಸರ್ಕಾರ ಅದನ್ನು ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಪಿ.ಎಫ್.ಐ. ವಿದ್ಯಾರ್ಥಿಗಳ ಪ್ರತಿಭಟನೆ ಕುರಿತಂತೆ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ರಚಿಸಿರುವ ಸಮಿತಿ ಪರಾಮರ್ಶೆ ಮಾಡುತ್ತಿದ್ದು ವರದಿ ಬಂದ ಕೂಡಲೇ ತೀರ್ಮಾನ ಮಾಡಲಾಗುವುದು ಎಂದರು.

ಮುಸ್ಕಾನ್ ಸಂಬಂಧ ಹೆಗಡೆ ಪತ್ರ: ಮುಸ್ಕಾನ್ ಅವರಿಗೆ ಅಲ್ ಖೈದಾ ಮುಖ್ಯಸ್ಥರು ನೀಡಿರುವ ಬೆಂಬಲಕ್ಕೆ ಸಂಬಂಧಿಸಿದಂತೆ ಅನಂತಕುಮಾರ್ ಹೆಗಡೆ ಅವರು ಪತ್ರ ಬರೆದಿದ್ದಾರೆ. ಈ ಬಗ್ಗೆ ತನಿಖೆಯಾಗಿದೆಯೇ ಎನ್ನುವ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ, ಏನಿದೆ ಎಂದು ಗೊತ್ತಿಲ್ಲ. ಅನಂತಕುಮಾರ್ ಹೆಗಡೆ ಅವರ ಬಳಿ ಚರ್ಚೆ ಮಾಡಿ ಅವರ ಬಳಿ ಇರುವ ಮಾಹಿತಿ ಬಗ್ಗೆ ತಿಳಿದುಕೊಳ್ಳಲಾಗುವುದು. ಅದರ ಆಧಾರದ ಮೇಲೆ ಮುಂದಿನ ಕ್ರಮ ಜರುಗಿಸಲಾಗುವುದು ಎಂದರು.

ಸುಮಲತಾ ಭೇಟಿ: ಸುಮಲತಾ ಅಂಬರೀಶ್ ಅವರು ಬಿಜೆಪಿ ಸೇರುತ್ತಿದ್ದಾರೆಯೇ ಎನ್ನುವ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ ಅವರ ಸಹೋದರಿಯ ಮಗಳ ಮದುವೆಗೆ ಆಹ್ವಾನಿಸಲು ಬಂದಿದ್ದರು. ಕೆಲವು ಅಭಿವೃದ್ಧಿ ಕೆಲಸಗಳ ಬಗ್ಗೆ ಚರ್ಚಿಸಲಾಯಿತು ಎಂದರು.

PUBLIC NOTICE

Notice is hereby issued to the general public that Sri Nanjundaswamy, S/o Late Nanjundaiah, Residing at Hampapura Post, Hampapura Hobli, H.D. Kote Taluk, Hommaragahalli, Mysuru Dist., has agreed to sell the Schedule Property to my client/s.

Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at #L-50/2A, 1st Floor, Ashoka Road, Mysuru-570 001 within Seven (07) days from the date of this Public Notice, failing which such claim/s shall be considered to have been waived and / or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

All that piece and parcel of vacant site property measuring East to West (9.144 + 5.7912)/2 meters and North to South 39.7764 Meters totally measuring 297.03 square meters & the Rural Development and Panchayat Raj Department has issued Form No. 11B vide unique No. 152200100611920034 & Property No. as 250/273, situated at Hommaragalli Village, within the limits of Hampapura Grama Panchayat, Hampapura Hobli, H.D. Kote Taluk bounded on: East by: Property belonging to Mariswamachar & Brothers ; West by: Road ; North by: Property belonging to Lakshmamma ; South by: M.M. Road.

Sd/- M. Sanjay Jain, B.B.M. LL.B., CCL, CMJFS, Advocate
#L-50/2A, 1st Floor, Ashoka Road, Mysuru-570 001. **Mob: 9341464636**
Email: msj186@yahoo.co.in

Place: Mysuru
Date: 11.04.2022

ನಕ್ಕರೆ ಅದೇ ಸ್ವರ್ಗ

ಮಹಿಳೆ : "ಅಂಚೆ ಕಚೇರಿಯಲ್ಲಿ ಅಂಚೆ ಮಾಸ್ತರರಿಗೆ ಲಕೋಟೆಯನ್ನು ನೀಡುತ್ತಾ" ಸ್ಟ್ಯಾಂಪ್ ಸರಿಯಾಗಿ ಹಚ್ಚಲಾಗಿದೆಯೇ"

ಅಂಚೆ ಮಾಸ್ತರರು : (ಲಕೋಟೆ ತೂಗಿ) "ನೀವು ಜಾಸ್ತಿ ಸ್ಟ್ಯಾಂಪ್ ಹಚ್ಚಿದ್ದೀರಿ"

ಮಹಿಳೆ : "ಅಯ್ಯೋ, ಹಾಗಾದರೆ ಈ ಲಕೋಟೆ ನಿಗದಿ ಮಾಡಿದ ವಿಳಾಸಕ್ಕಿಂತ ದೂರ ಹೋಗಿ ಬಿಡುವುದಿಲ್ಲ ತಾನೆ?!"

ಮೈಸೂರು ಮಿತ್ರ

ಮಂಗಳವಾರ, 12 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಅವಕಾಶ ಸಿಗದ ಪ್ರತಿಭೆ, ಪ್ರತಿಭೆಯಲ್ಲದ ಅವಕಾಶ ಪ್ರಯೋಜನಕ್ಕೆ ಬಾರದು.

– ಅನುಭವದ ನುಡಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಉತ್ತು ಬಾಳುವವನ ಬದುಕು ಎತ್ತಲೂ ಲೇಸು

ನಿಮ್ಮ ಪತ್ರಗಳು

ಮೈಸೂರು ವಿವಿ ಹಾಸ್ಟೆಲ್ ದುಸ್ಥಿತಿ





ಮಾನ್ಯರೆ,

ಮೈಸೂರು ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿರುವ ಮಹಾರಾಜ ಲೇಡಿಸ್ ಹಾಸ್ಟೆಲ್‌ನಲ್ಲಿ ಚರಂಡಿ ವ್ಯವಸ್ಥೆಯು ದುಸ್ಥಿತಿಯಲ್ಲಿದೆ. ಪೈಪ್‌ಲೈನ್‌ಗಳು ಕಟ್ಟಿಕೊಂಡು ಎಲ್ಲಾ ತ್ಯಾಜ್ಯ ನೀರು ಹೊರಗಡೆ ಬಂದು ದುರ್ವಾಸನೆ ಬೀರುತ್ತಿದೆ. ಇದರ ಬಗ್ಗೆ ಎರಡು ತಿಂಗಳ ಹಿಂದೆಯೇ ವಾರ್ಡನ್‌ಗೆ ತಿಳಿಸಿದ್ದರೂ ಇದರ ಬಗ್ಗೆ ಕ್ರಮಕೈಗೊಂಡಿಲ್ಲ.

ದಿನೇ ದಿನೆ ಇದರ ತೊಂದರೆ ಹೆಚ್ಚಾಗುತ್ತಿದೆ. ಇದರ ವಾಸನೆಯಿಂದಾಗಿ ಮತ್ತು ಸೊಳ್ಳೆಗಳು ಹೆಚ್ಚಾಗಿರುವ ಕಾರಣದಿಂದಾಗಿ ಹಾಸ್ಟೆಲ್‌ನಲ್ಲಿ ಇರಲು ಸಾಧ್ಯವಾಗುತ್ತಿಲ್ಲ. ಹಲವು ಬಾರಿ ಎಲ್ಲರಿಗೂ ತಿಳಿಸಿದ್ದರೂ ಸಹ ಮೇಲ್ವಿಚಾರಕರು ಯಾವುದೇ ಕ್ರಮ ಕೈಗೊಳ್ಳದೆ ತಮ್ಮ ಪಾಡಿಗೆ ಇದ್ದಾರೆ. ತ್ಯಾಜ್ಯ ನೀರು ದಿನಬಳಕೆ ನೀರಿಗೆ ಬೆರೆಯುತ್ತಿರುವ ಕಾರಣ ಹಲವು ವಿದ್ಯಾರ್ಥಿನಿಯರು ಚರ್ಮ ಸಂಬಂಧಿತ ಸಮಸ್ಯೆಗೆ ಗುರಿಯಾಗುತ್ತಿದ್ದಾರೆ. ಈ ಕೂಡಲೇ ಇದರ ಬಗ್ಗೆ ಗಮನಹರಿಸಿ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕಾಗಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

– ನೊಂದ ಹಾಸ್ಟೆಲ್ ವಿದ್ಯಾರ್ಥಿನಿಯರು, ಮೈಸೂರು ವಿವಿ

ಪ್ರೊ ಭಾಷ್ಯಂ ಸ್ವಾಮೀಜಿಯವರಿಗೆ ಅಭಿನಂದನೆಗಳು

ಮಾನ್ಯರೆ,

ಮೈಸೂರಿನ ಆಧ್ಯಾತ್ಮಿಕ ಚೇತನ, ಹಿರಿಯ ವಿದ್ವಾಂಸರೂ ಘನ ಪಾಠಿಗಳೂ ಆದ ಪ್ರೊ.ಭಾಷ್ಯಂ ಸ್ವಾಮಿಜಿಯವರಿಗೆ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಪ್ರತಿಷ್ಠಿತ "ನಾಡೋಜ" ಪ್ರಶಸ್ತಿ ನೀಡಿ ಗೌರವಿಸಿರುವುದು ಔಚಿತ್ಯಪೂರ್ಣವಾಗಿದೆ.

ವಿಜಯನಗರದಲ್ಲಿರುವ ಶ್ರೀ ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿಯವರು ಸಮಾಜ ಸೇವೆಯ ಜೊತೆಯಲ್ಲಿ, ಧಾರ್ಮಿಕ ಕಾರ್ಯಗಳಲ್ಲಿ ಸಹ ತೊಡಗಿಸಿಕೊಂಡಿದ್ದಾರೆ.

ಪ್ರತಿ ವರ್ಷದ ಮೊದಲ ದಿನದಂದು ಭಕ್ತಾದಿಗಳಿಗೆ ಲಕ್ಷಗಟ್ಟಲೆ ಲಾಡುಗಳನ್ನು ವಿತರಿಸುವ ಮೂಲಕ ಭಕ್ತಾದಿಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿರುವ ಪ್ರೊ. ಭಾಷ್ಯಂ ಸ್ವಾಮಿಗಳಿಗೆ ಇದುವರೆವಿಗೂ ಹಲವಾರು ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಕನ್ನಡದ ಕಣ್ಮಣಿ ಡಾ.ರಾಜಕುಮಾರ್ ಅವರ ಕುಟುಂಬ ವರ್ಗಕ್ಕೆ ತುಂಬಾ ಆಪ್ತರಾಗಿರುವ ಪ್ರೊ.ಭಾಷ್ಯಂ ಸ್ವಾಮೀಜಿಯವರಿಗೆ ಇದೀಗ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದು ಎಂದು ಹೇಳಲಾಗುವ 'ನಾಡೋಜ' ಪ್ರಶಸ್ತಿ ಸಂದಿದೆ. ನಗರದ ಸಂಸ್ಕೃತ ಕಾಲೇಜಿನಲ್ಲಿ ಹಲವಾರು ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುವ ಪ್ರೊ.ಭಾಷ್ಯಂ ಸ್ವಾಮೀಜಿಗಳು ಸ್ಥಾಪಿಸಿರುವ "ಯೋಗ ನರಸಿಂಹ ಸ್ವಾಮಿ," ದೇವಸ್ಥಾನ ಜಾತಿ ಧರ್ಮಗಳ ಸಂಕೋಲೆಗಳಿಲ್ಲದ ಒಂದು "ಧಾರ್ಮಿಕ ಸಂಸತ್" ನಂತಿದೆ. ಇಲ್ಲಿ ನಿತ್ಯ ಪೂಜೆಗಳ ಜೊತೆಗೆ ಹಬ್ಬ ಹರಿ ದಿನಗಳಲ್ಲಿ ಹಾಗೂ ವಿಶೇಷ ದಿನಗಳಲ್ಲಿ ವಿಶೇಷವಾದ ಪೂಜಾ ಕಾರ್ಯಕ್ರಮಗಳ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹ ನಡೆಯುತ್ತವೆ. ವರ್ಷದಲ್ಲಿ ನೂರಾರು ವಿವಾಹ ಕಾರ್ಯಗಳು ನೆರವೇರುತ್ತಿವೆ. ಈ ಸ್ವಾಮಿ ಸನ್ನಿಧಿಯಲ್ಲೇ ಮದುವೆ ಮಾಡಬೇಕು ಎಂದು ಪೋಷಕರು ಬಯಸುತ್ತಾರೆ. ಒಮ್ಮೆ ಯೋಗ ನರಸಿಂಹ ಸ್ವಾಮಿ ದೇವಸ್ಥಾನಕ್ಕೆ ಹೋಗಿ ದೇವರ ದಿವ್ಯ ದರ್ಶನ ಪಡೆದರೆ, ಮನಸ್ಸಿಗೆ ಶಾಂತಿ, ಸಮಾಧಾನ ಸಿಗುತ್ತದೆ. ಈ ದೇವಸ್ಥಾನವನ್ನು "ಶಾಂತಿನಿಕೇತನ" ಎಂದು ಬೇಕಾದರೂ ಕರೆಯಬಹುದು. ಪೂಜ್ಯ ಸ್ವಾಮೀಜಿಗಳಿಗೆ ಹೃತ್ಪೂರ್ವಕ ಧನ್ಯವಾದಗಳು.

– ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ,ಮೈಸೂರು

ಪರೀಕ್ಷಾರ್ಥಿಗಳಿಗೆ ಉತ್ತಮ ಸಲಹೆ

ಮಾನ್ಯರೆ,

ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಹೆಚ್ಚಿಸಬೇಕಾದ ಕೆಲವು ಅತ್ಯಮೂಲ್ಯ ಸಲಹೆಗಳು.

ಇದು ಪರೀಕ್ಷಾ ಸಮಯವಾದ್ದರಿಂದ ವಿದ್ಯಾರ್ಥಿಗಳಲ್ಲಿ ಉಪನ್ಯಾಸಕರು ಹಾಗೂ ಪೋಷಕರು ಒತ್ತಡ ಹೇರದೆ, ಭಯಪಡಿಸದೆ ಸರಾಗವಾಗಿ ಪರೀಕ್ಷೆ ಎದುರಿಸುವ ಕುರಿತು ಅವರಿಗೆ ಮಾರ್ಗದರ್ಶನ ನೀಡಬೇಕು.

ಯಶಸ್ಸು ಸಾಧಿಸಲು–ಪರೀಕ್ಷೆ ಗೆಲ್ಲಲು ಕೆಲ ಸೂತ್ರಗಳನ್ನು ಪಾಲಿಸಿ.


* ಒಂದು ದಿನಚರಿಯನ್ನು ನಿಮಗೆ ಅನುಕೂಲವಾಗುವಂತೆ ರಚಿಸಿ, ಅದರಂತೆ ನಡೆದುಕೊಳ್ಳಲು ಪ್ರಯತ್ನಿಸಿ. ಒಂದು ವಾರದ ನಂತರ ಅನುಸರಣೆ ಆಗುವುದು.
* ಓದಿನ ನಡುವೆ ವಿಷಯ ವಸ್ತುವನ್ನು ಬದಲಿಸಿ ಓದಿ, ಕೆಲಸದ ಬದಲಾವಣೆಯೇ ವಿಶ್ರಾಂತಿ ಎಂಬುದನ್ನು ತಿಳಿಯಿರಿ. ಉತ್ತಮ ಫಲಿತಾಂಶ ಗಳಿಸಿರಿ.
* ಆದಷ್ಟು ಬೇಗ ಮಲಗಿ, ಸೂರ್ಯೋದಯಕ್ಕೂ ಮುನ್ನ ಏಳಿ.
* ಓದಿದ್ದನ್ನು ಮನನ ಮಾಡಿ, ಆನಂತರ ಅದನ್ನು ಬರೆಯಿರಿ. ತಪ್ಪಿರುವುದನ್ನು ಆ ಪುಸ್ತಕ ನೋಡಿ ಪರಿಶೀಲಿಸಿರಿ.
* ಪರೀಕ್ಷೆಯ ಹಿಂದಿನ ದಿನ ಅಗತ್ಯ ವಸ್ತುಗಳಾದ ಸಮವಸ್ತ್ರ, ಪ್ರವೇಶ ಪತ್ರ, ಲೇಖನಿ ಮತ್ತಿತರೆ ಸಲಕರಣೆಗಳು ಎಲ್ಲವನ್ನೂ ಓರಣವಾಗಿ ಜೋಡಿಸಿಟ್ಟುಕೊಳ್ಳಿ.
* ಪರೀಕ್ಷೆಗೆ ನಿಗದಿತ ಸಮಯಕ್ಕಿಂತ ಅರ್ಧಗಂಟೆ ಬೇಗ ಹೋಗಿ, ಆ ಸ್ಥಳ ಪರಿಶೀಲಿಸಿದ ನಂತರ ಪರೀಕ್ಷೆ ಬರೆಯಿರಿ.

– ಎ.ಎಸ್. ಗೋವಿಂದೇಗೌಡ, ಮೈಸೂರು.

ತುಂಗೆಯ ತೀರದ ಹರಿಹರಪುರದಲ್ಲಿ

ಮಹಾಕುಂಭಾಭಿಷೇಕ ಮಹೋತ್ಸವ ವೈಭವ

"ಏಪ್ರಿಲ್ 10ರಿಂದ 24ರವರೆಗೆ ತುಂಗೆಯ ತೀರದ ಮಹರ್ಷಿ ಅಗಸ್ತ್ಯರು ತಪೋನಿರತ ಪುಣ್ಯಭೂಮಿ ಹರಿಹರದಲ್ಲಿ ಮಹಾ ಕುಂಬಾಭಿಷೇಕ ನಡೆಯುತ್ತಿದೆ. ಈ ಪುಣ್ಯ ಕಾರ್ಯದಲ್ಲಿ ದೇಶದ ನಾನಾ ಭಾಗದಿಂದ ಆಸ್ತಿಕ ಮಹಾಶರಣರು ನೆರೆದು, ಭಕ್ತಿಭಾವಗಳಿಂದ ಪುನೀತರಾಗುತ್ತಾರೆ.





ಭಾರತವು ಧರ್ಮಭೂಮಿ, ಪುಣ್ಯ ಭೂಮಿ, ಹಿಮಾಲಯದಿಂದ ಕನ್ಯಾ ಕುಮಾರಿವರೆಗೆ ಹರಡಿಕೊಂಡಿರುವ ಸಸ್ಯಶ್ಯಾಮಲೆಯಾದ ಈ ಭರತಖಂಡ ದಲ್ಲಿ ಪುರಾತನ ವೇದ–ಪುರಾಣ ಇತಿಹಾಸಗಳ ಹಿನ್ನೆಲೆಯುಳ್ಳ ಪವಿತ್ರ ಕ್ಷೇತ್ರಗಳು, ಪುಣ್ಯ ನದಿಗಳು ಎಲ್ಲೆಲ್ಲೂ ಕಾಣ ಸಿಗುತ್ತವೆ. ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳ ಪ್ರದೇಶವು ಸಹ್ಯಾದ್ರಿ ಪರ್ವತ ಎಂಬುದಾಗಿ ಹಚ್ಚ ಹಸುರಿನ ನಿಸರ್ಗವು ರಮಣೀಯವಾಗಿ ಪ್ರಸಿದ್ದಿಯನ್ನು ಪಡೆದಿವೆ. ಐತಿಹಾಸಿಕವಾಗಿ ಮಹರ್ಷಿಗಳು, ಸಂತರು, ರಾಜಮಹಾರಾಜರು ಮಠಮಾನ್ಯಗಳನ್ನು, ದೇವಾಲಯಗಳನ್ನು ಎಲ್ಲೆಡೆ ಸ್ಥಾಪಿಸಿ ಧರ್ಮ ರಕ್ಷಣೆ ಮಾಡಿದರು. ಅಂತಹ ಕ್ಷೇತ್ರಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯ ಮಲೆನಾಡಿನ ಮಡಿಲಲ್ಲಿರುವ ಸವಿ ನೀರಿನ ತುಂಗೆಯ ದಡದಲ್ಲಿರುವ ಹರಿಹರಪುರದ ಕ್ಷೇತ್ರವೂ ಸಹ ಒಂದು ಪುಣ್ಯಭೂಮಿಯಾಗಿದೆ.

ಈ ಪವಿತ್ರ ಸ್ಥಳವು ಯಾಗ ಭೂಮಿ, ತಪೋ ಭೂಮಿ ಮತ್ತು ಜ್ಞಾನ ಭೂಮಿಯಾಗಿ ಪ್ರಖ್ಯಾತಿಯ ಜೊತೆಗೆ ಐತಿಹಾಸಿಕ ಪ್ರಸಿದ್ಧಿಯನ್ನು ಹೊಂದಿದೆ. ಶ್ರೀಮಠ ಮಹಿಮಾ ಸ್ತೋತ್ರ ಎಂಬ ಪುರಾತನ ತಾಳೆಗರಿ ಗ್ರಂಥದ ಆಧಾರ ಮತ್ತು ಸ್ಕಾಂದ ಪುರಾಣದ ಪ್ರಕಾರ ಈ ಸ್ಥಳದಲ್ಲಿ ಪರಶಿವನ ಮಾವನಾದ ದಕ್ಷ ಪ್ರಜಾಪತಿಯು ಮಹಾಯಾಗವೊಂದನ್ನು ಮಾಡಿದನೆಂದು ಪ್ರತೀತಿ. ಈ ಮಹಾ ಯಾಗದ ಕುಂಡದಲ್ಲಿ ಸಾಕ್ಷಾತ್ ಪರಶಿವನೇ ಅವರ್ಭವಿಸಿ ಅಲ್ಲಿ ಸೇರಿದ್ದ ಎಲ್ಲಾ ದೇವಾನು ದೇವತೆಗಳನ್ನು, ಮಾವನಾದ ದಕ್ಷ ಬ್ರಹ್ಮನನ್ನೂ ಅನುಗ್ರಹಿಸಿದನೆಂದು ತಿಳಿದು ಬರುತ್ತದೆ. ಹರಿಹರಪುರದ ಕಾಡಿನ ನಡುವೆ ಇರುವ ಶಿಲಾಮಯ ದೇವಾಲಯವಿರುವ ಸ್ಥಳವೇ ಯಾಗ ಕುಂಡವಾಗಿದ್ದು, ಅಲ್ಲಿ ಲಿಂಗ ರೂಪದಲ್ಲಿರುವ ಶ್ರೀ ಸೋಮೇಶ್ವರ ದೇವರಿಗೆ ದಕ್ಷ–ಹರ ಸೋಮೇಶ್ವರ ಎಂಬುದಾಗಿಯೇ ಈಗಲೂ ನಿತ್ಯ ಪೂಜೆ ಸಲ್ಲಿಸಲಾಗುತ್ತಿದೆ. ಹೀಗೆ ಪ್ರಸಿದ್ಧಿ ಪಡೆದ ಈ ಕ್ಷೇತ್ರದಲ್ಲಿ ಯಜ್ಞಯಾಗಗಳು ನಿರಂತರವಾಗಿ ನಡೆಯುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಶ್ರೀ ಕ್ಷೇತ್ರವು ಯಾಗ ಭೂಮಿಯೂ ಆಗಿದೆ.

ಭಾರತೀಯ ಸನಾತನ ವೈದಿಕ ಪರಂಪರೆಯ ಮಹಾ ತಪಸ್ವಿಗಳಲ್ಲಿ ಮಹರ್ಷಿ ಅಗಸ್ತ್ಯರು ದಕ್ಷಿಣ ಭಾರತದಲ್ಲಿ ಸುಪ್ರಸಿದ್ದರು. ದಕ್ಷಿಣೋತ್ತರ ಭಾರತದ ನಡುವಿನ ವಿಂಧ್ಯ ಪರ್ವತವು ವಿಪರೀತ ಎತ್ತರಕ್ಕೆ ಬೆಳೆಯುವುದನ್ನು ತಡೆಗಟ್ಟಲು ದೇವತೆಗಳು ಅಗಸ್ತ್ಯ ಮಹರ್ಷಿಯನ್ನು ಪ್ರಾರ್ಥಿಸಲಾಗಿ ಅವರು ಉತ್ತರದಿಂದ ದಕ್ಷಿಣಕ್ಕೆ ಹೊರಟು ತಮ್ಮ ತಪಸ್ಸಿನ ಮಹಿಮೆಯಿಂದ ವಿಂಧ್ಯಪರ್ವತವು ತಲೆ ತಗ್ಗಿಸುವಂತೆ ಮಾಡಿ ವಿಧಿಯನ್ನು ವಿಧಿಸಿ ದಕ್ಷಿಣ ಭಾರತವನ್ನು ಪ್ರವೇಶಿಸಿ ಹಲವಾರು ಕಡೆ ತಪಸ್ಸು ನಡೆಸುತ್ತಾ ದಕ್ಷಿಣದಲ್ಲಿನ ತೀರ್ಥ ಕ್ಷೇತ್ರಗಳ ಮಹತ್ವಕ್ಕೆ ಕಾರಣರಾದರು. ಮುಂದೆ ಮಹರ್ಷಿ ಅಗಸ್ತ್ಯರು ದಕ್ಷ–ಕ್ಷೇತ್ರ ಹರಿಹರ ಪುರದ ಪರಿಸರ ಮತ್ತು ಪಾವಿತ್ರ್ಯದಿಂದ ಪ್ರಭಾವಿತರಾಗಿ ಕೆಲವು ಕಾಲ ತಪೋನಿರತರಾಗಿ ಇಲ್ಲಿ ಇದ್ದ ಸಂದರ್ಭದಲ್ಲಿ ತಮ್ಮ ಶಿಷ್ಯರಾದ ಗೋವಿಂದ ಯೋಗಿಗಳಿಗೆ ಶ್ರೀ ಲಕ್ಷ್ಮೀನರಸಿಂಹ ಸಾಲಿಗ್ರಾಮದ ಮೂರ್ತಿಗಳನ್ನು ನೀಡಿ ಅನುಗ್ರಹಿಸಿ ಮುಂದೆ ತೆರಳಿದರು. ಇಂದಿಗೂ ಅಗಸ್ತ್ಯ ಕರಾರ್ಚಿತ ಸಾಲಿಗ್ರಾಮದ ಮೂರ್ತಿಗಳು ಶ್ರೀ ಮಠದಲ್ಲಿ ಆರಾಧಿಸಲ್ಪಡುತ್ತಿರುವುದು ವಿಶೇಷ.

ಶ್ರೀಕ್ಷೇತ್ರವು ಶ್ರೀ ಕೃಷ್ಣ ಯೋಗೀಂದ್ರರ ನಂತರದ ಹಲವಾರು ಮಹರ್ಷಿಗಳ ತಪೋ ಭೂಮಿಯಾಗಿ ಮುಂದುವರೆಯುತ್ತಿದೆ. ಸುಮಾರು 8ನೇ ಶತಮಾನದಲ್ಲಿ ಸನಾತನ ವೈದಿಕ ಧರ್ಮವನ್ನು ಪುನರುಜ್ಜೀವನ ಗೊಳಿಸಿದ ಪರಶಿವನ ಅವತಾರವಾದ ಪರಮ ಪೂಜ್ಯ ಆಚಾರ್ಯ ಶಂಕರ ಭಗವತ್ಪಾದರು ದಕ್ಷಿಣ ಭಾರತದಲ್ಲಿ ಧರ್ಮಪ್ರಸಾರವಾಗಿ ವಿಜಯಯಾತ್ರೆಯನ್ನು ಮಾಡುತ್ತಾ ದಕ್ಷ ಕ್ಷೇತ್ರವಾದ ಹರಿಹರಪುರಕ್ಕೂ ಆಗಮಿಸಿ ತಪಸ್ಸುಗಳಲ್ಲಿ ನಿರತರಾಗಿದ್ದ ಶ್ರೀ ಕೃಷ್ಣ ಯೋಗೀಂದ್ರರಿಗೆ ಮಂತ್ರ ದೀಕ್ಷೆಯನ್ನು ನೀಡಿ ಆಶೀರ್ವದಿಸಿ ಜ್ಞಾನದೇವತೆ ಶ್ರೀ ಶಾರದೆಯನ್ನು ಶ್ರೀ ಚಕ್ರದ ಮೂಲಕ ಪ್ರತಿಷ್ಠಾಪಿಸಿದರು. ಅಂದಿನಿಂದ ಪೀಠದ ಪ್ರಥಮ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶ್ರೀ ಸುರೇಶ್ವರಾ ಚಾರ್ಯರು ಶ್ರೀ ಕೃಷ್ಣ ಯೋಗೀಂದ್ರರಿಗೆ ಸನ್ಯಾಸ ದೀಕ್ಷೆಯನ್ನು ನೀಡಿ ಸ್ವಯಂ–ಪ್ರಕಾಶ ಸರಸ್ವತೀ ಎಂಬ ಯೋಗಪಟ್ಟವನ್ನು ಅನುಗ್ರಹಿಸಿದರು. ಅಂದಿನಿಂದ ಶ್ರೀ ಕ್ಷೇತ್ರದಲ್ಲಿ ಮಹರ್ಷಿಗಳ ಪರಂಪರೆಯಿಂದ ಆಸ್ತಿಕರಿಗೆ ಮಾರ್ಗದರ್ಶನ ದೊರಕುತ್ತಿದೆ.

ಐತಿಹಾಸಿಕವಾಗಿ ದಕ್ಷಿಣ ಭಾರತವನ್ನು ಆಕ್ರಮಿಸುತ್ತಿದ್ದ ವಿಧರ್ಮೀಯ ದಾಳಿಕಾರರ ಹಾವಳಿಯನ್ನು ತಡೆಗಟ್ಟಲು ಕ್ರಿ.ಶ.14ನೇ ಶತಮಾನದಲ್ಲಿ ಶೃಂಗೇರಿಯ ಜಗದ್ಗುರು ಪೀಠದ ಮಹಾಯೋಗಿ ಶ್ರೀ ವಿದ್ಯಾತೀರ್ಥರ ನಿರ್ದೇಶನದಂತೆ ಅವರ ನೇರ ಶಿಷ್ಯರಾದ ಯೋಗಿಶ್ರೇಷ್ಠ ಜಗದ್ಗುರು ಶ್ರೀ ಶ್ರೀ ವಿದ್ಯಾರಣ್ಯರ ಪ್ರಯತ್ನದಿಂದ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯದ ಮೊದಲ ಚಕ್ರವರ್ತಿ ಹರಿಹರ ರಾಯರು ತುಂಗಾ ನದಿ ತೀರದ ದಡದಲ್ಲಿದ್ದ ಕಪಾಲಂ ಎಂಬ ಸ್ಥಳದಲ್ಲಿ ಅಗ್ರಹಾರವನ್ನು ನಿರ್ಮಿಸಿ ತಮ್ಮ ಹೆಸರಿನಲ್ಲಿ ಹರಿಹರಪುರ ಎಂದು ಪುನರ್ ನಾಮಕರಣ ಮಾಡಿದರು. ನಂತರದ ರಾಜರಾದ ಇಮ್ಮಡಿ ಹರಿಹರ ರಾಯರು ಶ್ರೀ ಮಠಕ್ಕೆ ಭೂಮಿಯನ್ನು ದತ್ತಿಯಾಗಿ ನೀಡಿದರೆಂಬುದು ದಾಖಲೆಯಲ್ಲಿದೆ. ಹೀಗೆ ಸಾವಿರಾರು ವರ್ಷಗಳ ಭವ್ಯವಾದ ಇತಿಹಾಸ ಮತ್ತು ಶ್ರೇಷ್ಠವಾದ ಗುರುಪರಂಪರೆಯನ್ನು ಹೊಂದಿರುವ ರಾಜಮಾನ್ಯವಾದ ಈ ಧರ್ಮಪೀಠವು ಆಯಾಯ ಕಾಲ ಪರಿಸ್ಥಿತಿಗೆ ಅನುಗುಣವಾಗಿ ಯಾವುದೇ ಬೇಧ ಭಾವವಿಲ್ಲದೆ ಸಮಸ್ತ ಸಮಾಜಕ್ಕೂ ಧರ್ಮ ಮಾರ್ಗವನ್ನು ಬೋಧಿಸುತ್ತಾ ಸನ್ಮಾರ್ಗದಲ್ಲಿ ಸುಖ, ಶಾಂತಿ, ಸಮೃದ್ಧಿ, ಸಾಮರಸ್ಯತೆಗಾಗಿ ನಿರಂತರವಾಗಿ ದಿವ್ಯ ಮಾರ್ಗದರ್ಶನವನ್ನು ಮಾಡಿಕೊಂಡು ಬರುತ್ತಿದೆ. ಅನಾದಿ ಕಾಲದಿಂದ ಶ್ರೀಮಠದ ಗುರುಪರಂಪರೆಯಲ್ಲಿ 25 ಯತಿಗಳು ಧರ್ಮಬೋಧನೆಯನ್ನು ಮಾಡುತ್ತಾ ಆಸ್ತಿಕರಿಗೆ ಅನುಗ್ರಹಿಸುತ್ತಿದ್ದಾರೆ. 1999ರಲ್ಲಿ ಬ್ರಹ್ಮೈಕ್ಯರಾದ ಶ್ರೀ ಶ್ರೀ ಸ್ವಯಂಪ್ರಕಾಶ ಅಭಿನವ ರಮಾನಂದ ಸರಸ್ವತೀ ಮಹಾಸ್ವಾಮಿಗಳವರು ತಮ್ಮ ಉತ್ತರಾಧಿಕಾರಿಯನ್ನು ನೇಮಿಸದ ಕಾರಣ ಶ್ರೀಮಠದ ಭಕ್ತರೆಲ್ಲರೂ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರಲ್ಲಿ ಹರಿಹರ ಪುರದ ಶ್ರೀಮಠಕ್ಕೆ ಉತ್ತರಾಧಿಕಾರಿಯನ್ನು ನೇಮಿಸುವಂತೆ ಭಿನ್ನವಿಸಲಾಗಿ ಶೃಂಗೇರಿ ಜಗದ್ಗುರುಗಳವರು ಶೃಂಗೇರಿ ಪೀಠದಲ್ಲೇ ಅಧ್ಯಯನ ಮಾಡುತ್ತಿದ್ದ ನಾಗರಾಜ ಶರ್ಮ ಎಂಬ ಬ್ರಹ್ಮಚಾರಿಗೆ ಆಶೀರ್ವಾದ ಮಾಡಿ ಶ್ರೀ ಕ್ಷೇತ್ರ ಹರಿಹರಪುರದ ಶ್ರೀ ಮಠಕ್ಕೆ ಪೀಠಾಧಿಕಾರಿಯಾಗಿ ಕಳುಹಿಸಿಕೊಟ್ಟರು. ಶೃಂಗೇರಿ ಸಮೀಪದ ಉಳವೆ ಗ್ರಾಮದ ಸದ್ಗೃಹಸ್ಥ ದೈವಭಕ್ತರಾದ ಶ್ರೀ ಗೋಪಾಲ ರಾಯರು ಮತ್ತು ಶ್ರೀಮತಿ ಜಯಲಕ್ಷ್ಮೀ ದಂಪತಿಗಳ ಎರಡನೇ ಸುಪುತ್ರರಾಗಿ ಜುಲೈ 6, 1970 ರಂದು ಜನಿಸಿದ ಶ್ರೀ ನಾಗರಾಜ ಶರ್ಮರವರು ಬಾಲ್ಯದಲ್ಲೇ ಆಧ್ಯಾತ್ಮಿಕತೆಯಲ್ಲಿ ಒಲವನ್ನು ಬೆಳೆಸಿಕೊಂಡರು. ನಂತರ ರಾಮಕೃಷ್ಣಾಶ್ರಮ ಹಾಗೂ ಶ್ರೀ ಶೃಂಗೇರಿ ಶಾರದಾ ಪೀಠದಲ್ಲಿ ಜಗದ್ಗುರುಗಳವರ ಮಾರ್ಗದರ್ಶನದಲ್ಲಿ ನೈಷ್ಠಿಕ ಬ್ರಹ್ಮಚರ್ಯದಿಂದ ವೇದ, ಸಂಸ್ಕೃತ, ಶಾಸ್ತ್ರಾಧ್ಯಯನವನ್ನು ಮಾಡಿದರು. ಮೇ 27, 2001 ರಂದು ಇವರು 30ನೇ ವಯಸ್ಸಿನಲ್ಲಿ ಶೃಂಗೇರಿಯಲ್ಲಿ ಬ್ರಹ್ಮಚಿಂತನಾ ತತ್ಪರರಾಗಿದ್ದ ಹಿರಿಯ ವಯಸ್ಸಿನ ಪರಿವ್ರಾಜಕ ಶ್ರೀ ನಿತ್ಯಾನಂದ ಭಾರತೀ ಸ್ವಾಮಿಗಳವರಿಂದ ಸಂನ್ಯಾಸ ದೀಕ್ಷೆ ಮಹಾವಾಕ್ಯೋಪದೇಶ ಪಡೆದು ಶ್ರೀ ಶ್ರೀ ಸಚ್ಚಿದಾನಂದ ಸರಸ್ವತೀ ಎಂಬ ಯೋಗ ಪಟ್ಟವನ್ನು ಪಡೆದರು. ಇವರಿಗೆ ಶ್ರೀಮಠದ ಗುರುಪೀಠದಲ್ಲಿ ಪಟ್ಟಾಭಿಷೇಕವನ್ನು ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು ನೆರವೇರಿಸಿ ಆಶೀರ್ವದಿಸಿದರು. ಪೀಠಾಧಿಪತಿಗಳಾದ ನಂತರ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರು ಶ್ರೀಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ನೀಡಿ ಎಲ್ಲೆಡೆ ಪ್ರವಾಸವನ್ನು ಮಾಡಿ ಸನಾತನ ಹಿಂದೂ ಧರ್ಮದ ಪ್ರಸಾರವನ್ನು ಮಾಡುತ್ತಾ ಆಸ್ತಿಕರನ್ನು ಅನುಗ್ರಹಿಸುತ್ತಿದ್ದಾರೆ. ವೇದ–ಸಂಸ್ಕೃತ ಪಾಠಶಾಲೆ ಸ್ಥಾಪನೆ, ಹಿಂದಿನ ಗುರುಗಳವರ ಅಧಿಷ್ಠಾನದ ಪುನರ್ ನಿರ್ಮಾಣ, ಭಕ್ತಾದಿಗಳ ಸೌಕರ್ಯಕ್ಕೆ ಸುಸಜ್ಜಿತ ವಸತಿಗೃಹ ನಿರ್ಮಾಣ, ಮುಷ್ಠಿ ಭಿಕ್ಷಾ ಯೋಜನೆ, ಆಧ್ಯಾತ್ಮಿಕ ಮೌಲ್ಯಗಳನ್ನು ತಿಳಿಸಲು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಮಾಸಪತ್ರಿಕೆ ಪ್ರಕಟಣೆ, ಸುಸಜ್ಜಿತ ಗೋಶಾಲೆ ಸ್ಥಾಪನೆ, ತುಂಗಾತೀರದ ನದಿಯ ದಂಡೆಯ ಅಭಿವೃದ್ಧಿ ಹೀಗೆ ಹಲವು ಯೋಜನೆಗಳ ಜೊತೆಗೆ ಪ್ರಮುಖವಾಗಿ ಜಾತಿ–ಮತ ಭೇದವಿಲ್ಲದೆ ಎಲ್ಲಾ ವರ್ಗದ ಭಕ್ತರಿಗೆ ರುದ್ರಾಕ್ಷಿಯೊಂದಿಗೆ ಶಿವದೀಕ್ಷೆ ಯನ್ನು ನೀಡುತ್ತಿರುವುದು ಶ್ರೀಗಳವರ ಕಾರುಣ್ಯಕ್ಕೆ ಸಾಕ್ಷಿಯಾಗಿದೆ. ಇಂತಹ ಸತ್ಕಾರ್ಯಗಳ ಜೊತೆಗೆ ಭಗವಂತನ ಪ್ರೇರಣೆಯಂತೆ ಈ ದಿವ್ಯ ಕ್ಷೇತ್ರದಲ್ಲಿ ಶ್ರೀ ಶಾರದಾಪರಮೇಶ್ವರಿ ಅಮ್ಮನವರ, ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ದೇವಾಲಯಗಳ ಪುನರ್ ಬೃಹತ್ ನಿರ್ಮಾಣದ ಮಹತ್ಕಾರ್ಯವನ್ನು ಸುಮಾರು 12 ವರ್ಷಗಳ ಹಿಂದೆ ಆರಂಭಿಸಿದ್ದು, ಈಗ ಸುಂದರ ಶಿಲಾ ಕಲಾಕೃತಿಗಳನ್ನೊಳಗೊಂಡ ಭವ್ಯವಾದ ಶಿಲಾಮಯ ದೇವಾಲಯವು ನಿರ್ಮಾಣಗೊಂಡಿರುತ್ತದೆ. ಇದೀಗ ಭಕ್ತ ಕೋಟಿಯು ಬಹುದಿನಗಳಿಂದ ನಿರೀಕ್ಷಿಸುತ್ತಿರುವ ಸುಸಮಯವು ಬಂದಿದ್ದು ಶ್ರೀ ಶುಭಕೃನ್ನಾಮ ಸಂವತ್ಸರದ ಚೈತ್ರ ಶುದ್ಧ ಚತುರ್ದಶಿಯ (ದಿನಾಂಕ 15–04–2022) ಶುಭದಿನದಂದು ಅಗಸ್ತ್ಯ ಮಹರ್ಷಿ ಕರಾರ್ಚಿತ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಗೆ ಹಾಗೂ ಶ್ರೀ ಆದಿ ಶಂಕರ ಭಗವತ್ಪಾದರು ಪ್ರತಿಷ್ಠಾಪಿಸಿರುವ ಶ್ರೀ ಶಾರದಾ ಪರಮೇಶ್ವರಿ ದೇವಿಗೆ ಪರಮಪೂಜ್ಯ ಶ್ರೀ ಶ್ರೀ ಮಹಾಸ್ವಾಮಿಗಳವರು ತಮ್ಮ ಅಮೃತ ಹಸ್ತದಿಂದ ಮಹಾಕುಂಭಾಭಿಷೇಕವನ್ನು ನೆರವೇರಿಸುವರು. ತತ್ಸಂಬಂಧವಾಗಿ ದಿನಾಂಕ 10–04–2022 ರಿಂದ 24–04–2022 ರವರೆಗೆ ಧಾರ್ಮಿಕ ಕಾರ್ಯಗಳಾದ ಗಣಪತಿ ಹೋಮ, ನವಗ್ರಹ ಮಹಾಯಾಗ, ಲಲಿತಾ ಹೋಮ, ಗಾಯಿತ್ರಿ ಮಹಾಯಾಗ, ಸುದರ್ಶನ ನಾರಸಿಂಹ ಮಹಾಯಾಗ, ಗುರುದತ್ತಾತ್ರೇಯ ಮಹಾಯಾಗ, ಕೋಟಿ ತುಳಸಿ ಅರ್ಚನೆ, ಶ್ರೀ ಲಕ್ಷ್ಮೀನರಸಿಂಹ ಮಹಾಯಾಗ, ಸಹಸ್ರ ಚಂಡಿಕಾ ಮಹಾಯಾಗ, ಶ್ರೀ ಅಂಜನೇಯ ಮಹಾಯಾಗ, ಶ್ರೀ ಲಕ್ಷ್ಮೀನಾರಾಯಣ ಹೃದಯ ಹೋಮ, ಧನ್ವಂತ್ರಿ ಮಹಾಯಾಗ, ತುಂಗಾನದಿ ಯಲ್ಲಿ ತೆಪ್ಪೋತ್ಸವ ಹಾಗೂ ನಾಡಿನ ಪ್ರಖ್ಯಾತ ಕಲಾವಿದರುಗಳಿಂದ ನಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಶ್ರದ್ಧಾ ಭಕ್ತಿ, ಉತ್ಸಾಹ, ಸಡಗರಗಳಿಂದ ಧಾರ್ಮಿಕ ವಿಧಿವಿಧಾನಗಳೊಂದಿಗೆ ವೈಭವದಿಂದ ನಡೆಯಲಿದ್ದು, ಸನಾತನ ಧರ್ಮದ ರಕ್ಷಣೆಯಲ್ಲಿನ ಶ್ರೀಮಠದ ಕಾರ್ಯ ನಾಡಿನ ಆಸ್ತಿಕ ಬಂಧುಗಳಿಗೆ ಸಂತಸ ತಂದಿದೆ.



ನಂ. ಶ್ರೀಕಂಠ ಕುಮಾರ್

ಮೊ: 9481067333

ಹಿಂದು–ಮುಸ್ಲಿಂ ಒಂದೇ ತಾಯಿ ಮಕ್ಕಳಿದ್ದಂತೆ

ಅಹಿತಕರ ಘಟನೆ ಮರುಕಳಿಸಿದರೆ ಕಠಿಣ ಕ್ರಮ ಖಚಿತ: ಬಿಎಸ್‌ವೈ




ಬೆಳಗಾವಿ: ಹಿಂದು–ಮುಸ್ಲಿಂ ಒಂದೇ ತಾಯಿಯ ಮಕ್ಕಳಂತೆ ಬಾಳಬೇಕು. ಇಂತಹ ಅಹಿತಕರ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು. ತಪ್ಪಿತಸ್ಥರ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಬೆಳಗಾವಿ ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಪ್ರಸ್ತುತ ನಡೆಯುತ್ತಿರುವ ಘಟನೆಗಳ ಕುರಿತು ಪ್ರತಿಕ್ರಿಯಿಸಿದರು. ಹಿಂದು–ಮುಸ್ಲಿಂ ಒಂದೇ ತಾಯಿ ಮಕ್ಕಳಂತೆ ಬಾಳಬೇಕು ಎಂಬುದು ಪ್ರಧಾನಿ ನರೇಂದ್ರ ಮೋದಿ ಅಪೇಕ್ಷೆ ಇಂತಹ ಅಹಿತಕರ ಘಟನೆಗಳು ಮರುಕಳಿಸದಂತೆ ಸರ್ಕಾರ ಎಚ್ಚರ ವಹಿಸಬೇಕು ಯಡಿಯೂರಪ್ಪ ಹೇಳಿದರು.

ಸಿಎಂ ಬೊಮ್ಮಾಯಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಲ್ಲಿ ಸಣ್ಣಪುಟ್ಟ ಘಟನೆಗಳು ನಡೆಯುತ್ತಿವೆ, ಅವುಗಳಿಗೆ ನಮ್ಮ ಬೆಂಬಲ ಇಲ್ಲ. ಆ ಥರ ಘಟನೆಯಾದರೆ ಖಂಡಿಸುತ್ತೇನೆ. ಯಾರು ಅಂಥ ಸನ್ನಿವೇಶಗಳನ್ನು ಸೃಷ್ಟಿಸಿ, ಗೊಂದಲ ಉಂಟು ಮಾಡುತ್ತಾರೋ ಅವರ ಮೇಲೆ ಕ್ರಮ ಕೈಗೊಳ್ಳುವುದಾಗಿ ಸಿಎಂ ಹೇಳಿದ್ದಾರೆ ಎಂದು ಬಿಎಸ್‌ವೈ ಹೇಳಿದರು.

ಪಕ್ಷ ಸಂಘಟನೆಗೆ ಆದ್ಯತೆ: ನಾಳೆಯಿಂದ ಮೂರು ದಿನಗಳ ಪ್ರವಾಸ ಶುರುವಾಗುತ್ತದೆ, ಎಲ್ಲರೂ ಒಟ್ಟಾಗಿ ನಡೆಯುತ್ತೇವೆ. ಸಿಎಂ ಮತ್ತು ರಾಜ್ಯಾಧ್ಯಕ್ಷರು ಹಾಗೂ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಮತ್ತು ನಾನು ರಾಜ್ಯ ಪ್ರವಾಸದ ಮೂಲಕ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಮುಂದಿನ ಚುನಾವಣೆ ಈಗಿನಿಂದಲೇ ತಯಾರಿ ನಡೆಸಿದ್ದೇವೆ ಎಂದರು.


ವಿರೋಧ ಪಕ್ಷಗಳಿಂದ ಪಾಠ ಕಲಿಯಬೇಕಾದ ಅಗತ್ಯ ಇಲ್ಲ



ಉಡುಪಿ: ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಉತ್ತಮ ಆಡಳಿತ ನೀಡಲು ಸಾಕಷ್ಟು ಸಮಯೋಚಿತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದು, ಈ ಬಗ್ಗೆ ವಿರೋಧ ಪಕ್ಷಗಳಿಂದ ಯಾವುದೇ ಪಾಠ ಕಲಿಯುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಉಡುಪಿಯಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿದ ಸಿಎಂ, ಹಲವು ವಿಷಯಗಳಲ್ಲಿ ಸಿಎಂ ಮೌನವಾಗಿದ್ದಾರೆ ಎಂಬ ವಿರೋಧ ಪಕ್ಷದ ನಾಯಕರ ಆರೋಪಗಳಲ್ಲಿ ಯಾವುದೇ ಹುರುಳಿಲ್ಲ. ರಾಜ್ಯದಲ್ಲಿ ಈ ಹಿಂದಿನ ಕಾಂಗ್ರೆಸ್ ಸರ್ಕಾರ ಕೊಲೆಯಲ್ಲಿ ನೇರವಾಗಿ ಭಾಗಿಯಾಗಿದ್ದ ಕೆಲವು ವ್ಯಕ್ತಿಗಳನ್ನು ಆರೋಪ ಮುಕ್ತಗೊಳಿಸಲು ಅವಕಾಶ ಮಾಡಿಕೊಟ್ಟಿದೆ. ಆಗ ಆಡಳಿತ ಪ್ರಜ್ಞೆ ಎಲ್ಲಿತ್ತು? ಎಂದು ಸಿಎಂ ಪ್ರಶ್ನಿಸಿದರು.

ಪ್ರಧಾನಿ ತವರಲ್ಲಿ ಭೀಕರ ದುರಂತ

ಕೆಮಿಕಲ್ ಫ್ಯಾಕ್ಟರಿ ಸ್ಫೋಟಗೊಂಡು 6 ಮಂದಿ ಸಾವು




ಗಾಂಧಿನಗರ: ಗುಜರಾತ್‌ನ ಭರೂಚ್ ಜಿಲ್ಲೆಯ ರಾಸಾಯನಿಕ ಕಾರ್ಖಾನೆಯೊಂದು ಮುಂಜಾನೆ ವೇಳೆ ಸ್ಫೋಟಗೊಂಡಿದ್ದು, 6 ಮಂದಿ ಕಾರ್ಮಿಕರು ಮೃತಪಟ್ಟಿರುವ ದುರಂತ ಘಟನೆ ನಡೆದಿದೆ. ಅಹಮದಾಬಾದ್‌ನಿಂದ 235 ಕಿಮೀ ದೂರದಲ್ಲಿರುವ ದಹೇಜ್ ಕೈಗಾರಿಕಾ ಪ್ರದೇಶದ ಘಟಕದಲ್ಲಿ ಮುಂಜಾನೆ 3 ಗಂಟೆ ಸುಮಾರಿಗೆ ಈ ಅವಘಡ ಸಂಭವಿಸಿದೆ. ರಿಯಾಕ್ಟರ್ ಬಳಿ ಕೆಲಸ ಮಾಡುತ್ತಿದ್ದ ವೇಳೆ ದ್ರಾವಕ ಭಟ್ಟಿ ಇಳಿಸುವ ಪ್ರಕ್ರಿಯೆಯಲ್ಲಿ ಇದ್ದಕ್ಕಿದ್ದಂತೆ ಸ್ಫೋಟಗೊಂಡಿದೆ ಎಂದು ಭರೂಚ್ ಪೊಲೀಸ್ ವರಿಷ್ಠಾಧಿಕಾರಿ ಲೀನಾ ಪಾಟೀಲ್ ಹೇಳಿದ್ದಾರೆ. ರಿಯಾಕ್ಟರ್‌ನಲ್ಲಿನ ಸ್ಫೋಟದಿಂದಾಗಿ ಕಾರ್ಖಾನೆಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದಾಗಿ ಅಲ್ಲೇ ಇದ್ದ 6 ಮಂದಿ ಮೃತಪಟ್ಟಿದ್ದಾರೆ. ನಂತರ ಬೆಂಕಿಯನ್ನು ನಿಯಂತ್ರಿಸಿ, ಮೃತದೇಹಗಳನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ಇದರ ಹೊರತಾಗಿ ಯಾರೂ ಗಾಯಗೊಂಡಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ಜಮ್ಮು–ಕಾಶ್ಮೀರದ ಬಾರಾಮುಲ್ಲಾದಲ್ಲಿ ಫೀ.ಮಾ. ಕೆ.ಎಂ.ಕಾರ್ಯಪ್ಪ ಪಾರ್ಕ್ ನಿರ್ಮಾಣ



ಬರಾಮುಲ್ಲಾದಲ್ಲಿ ಸೇನಾಧಿಕಾರಿಗಳ ಜೊತೆ ಫೀ.ಮಾ. ಕೆ.ಎಂ. ಕಾರ್ಯಪ್ಪ ಪುತ್ರ ನಿವೃತ್ತ ಏರ್ ಮಾರ್ಷಲ್ ನಂದಾ ಕಾರ್ಯಪ್ಪ ಮಾತನಾಡುತ್ತಿರುವುದು



ಮಡಿಕೇರಿ,ಏ.11–ಜಮ್ಮು–ಕಾಶ್ಮೀರದ ಬಾರಾಮುಲ್ಲಾದಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ಸ್ವತಂತ್ರ ಭಾರತದ ಮೊದಲ ಸೇನಾ ಮಹಾದಂಡ ನಾಯಕ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ ಹೆಸರಲ್ಲಿ ಉದ್ಯಾನವನ ನಿರ್ಮಾಣಗೊಳ್ಳುತ್ತಿದೆ.

ಕೊಡಗು ಸೇರಿದಂತೆ ದೇಶದ ಕ್ಷಾತ್ರ ತೇಜಸ್ಸಿನ ಯೋಧ ಪರಂಪರೆಯ ಪಾಲಿಗೆ ಇದು ಅತ್ಯಂತ ಸಂತಸದ ವಿಚಾರ. ಸ್ಥಳಕ್ಕೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಪುತ್ರ ನಿವೃತ್ತ ಏರ್ ಮಾರ್ಷಲ್ ನಂದಾ ಕಾರ್ಯಪ್ಪ, ಕುಟುಂಬ ಸದಸ್ಯರೊಂದಿಗೆ ಇತ್ತೀಚೆಗೆ ಭೇಟಿ ನೀಡಿದ್ದರು.

ಬಾರಾಮುಲ್ಲಾ ನಗರಸಭೆ, ಕಾರ್ಯಪ್ಪ ಉದ್ಯಾನವನ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿದೆ. ಜಮ್ಮು–ಕಾಶ್ಮೀರ ಸರ್ಕಾರ ಹಾಗೂ ಕೊಲ್ಕತ್ತಾದ ರಾಜರಾಮ್ ಮೋಹನ್ ರಾಯ್ ಲೈಬ್ರರಿ ಸುಮಾರು 3 ಕೋಟಿ ರೂ. ಅನುದಾನವನ್ನು ಈ ಯೋಜನೆಗಾಗಿ ನೀಡಿದೆ.

ಏರ್ ಮಾರ್ಷಲ್ ನಂದಾ, ಇಲ್ಲಿರುವ ತಮ್ಮ ತಂದೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪುತ್ಥಳಿಗೆ ನಮನ ಸಲ್ಲಿಸಿದರು. ಬಳಿಕ ಒಂದನೇ ಸಿಖ್ ರೆಜಿಮೆಂಟ್‌ನ ಹುತಾತ್ಮ ಯೋಧರ ಯುದ್ಧ ಸ್ಮಾರಕಕ್ಕೂ ತೆರಳಿ ಪುಷ್ಪಗುಚ್ಛ ಅರ್ಪಿಸಿ, ಗೌರವ ಸಮರ್ಪಿಸಿದರು. ಸ್ಥಳೀಯ ಆಡಳಿತ ಮಂಡಳಿಯ ನಿರ್ಧಾರಕ್ಕೆ ಇದೇ ಸಂದರ್ಭ ನಿವೃತ್ತ ನಂದಾ ಕಾರ್ಯಪ್ಪ ಶ್ಲಾಘನೆ ವ್ಯಕ್ತಪಡಿಸಿದರು.

ತನ್ನ ತಂದೆ, ಭಾರತದ ಹೆಮ್ಮೆಯ ಸೇನಾ ಮಹಾದಂಡನಾಯಕ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಮತ್ತು ಬಾರಾಮುಲ್ಲಾ ಜನತೆ ನಡುವೆ ಸೌಹಾರ್ದ ಸಂಬಂಧವಿತ್ತು. ಬಾರಾಮುಲ್ಲಾದ ಬಗ್ಗೆ ಕಾರ್ಯಪ್ಪ ಅವರಿಗೆ ತುಂಬಾ ಅಭಿಮಾನ ವಿತ್ತು. ಇಂತಹ ಪ್ರದೇಶದಲ್ಲಿಯೇ ಇದೀಗ ಅವರ ಹೆಸರಿನಲ್ಲಿ ಸುಂದರವಾದ ಉದ್ಯಾನ ವನ ನಿರ್ಮಾಣವಾಗುತ್ತಿರುವುದು ಹೆಮ್ಮೆಯ ವಿಚಾರ ಎಂದು ನಂದಾ ಕಾರ್ಯಪ್ಪ ತಿಳಿಸಿದರು.

ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ



ತಿ.ನರಸೀಪುರ, ಏ.11(ಎಸ್‌ಕೆ)– ಭಾರತದಲ್ಲಿ ಕ್ರೀಡೆಗೆ ಸೂಕ್ತ ಮನ್ನಣೆ ಸಿಗುತ್ತಿಲ್ಲ. ಸರ್ಕಾರಗಳು ಕ್ರೀಡಾಪಟುಗಳಿಗೆ ಅಗತ್ಯ ತರಬೇತಿ ಜೊತೆಗೆ ಪ್ರೋತ್ಸಾಹ ನೀಡಬೇಕು ಎಂದು ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ತಿಳಿಸಿದರು.

ಪಟ್ಟಣದ ಶಿವಶಂಕರ್ ಸ್ಪೋರ್ಟ್ಸ್ ಅಕಾಡೆಮಿಯಿಂದ ಆಯೋಜಿಸಿದ್ದ ಕ್ರೀಡಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಜಪಾನ್‌ನಂತಹ ಸಣ್ಣ ದೇಶಗಳು ಹೆಚ್ಚು ಪದಕ ಗಳಿಸುತ್ತದೆ. ಆದರೆ ದೇಶದ ಜನಸಂಖ್ಯೆ ಹೆಚ್ಚಾಗಿದ್ದರೂ, ಒಲಿಂಪಿಕ್ಸ್‌ನಲ್ಲಿ ಭಾರತ ಗಳಿಸುವ ಪದಕಗಳ ಸಂಖ್ಯೆ ಕಡಿಮೆ. ದೇಶದಲ್ಲಿ ಕ್ರೀಡಾ ಕ್ಷೇತ್ರಕ್ಕೆ ಸೂಕ್ತ ಮನ್ನಣೆ ಸಿಗುತ್ತಿಲ್ಲ. ಪೋಷಕರು ಕೂಡ ಶಿಕ್ಷಣಕ್ಕೆ ಒತ್ತು ನೀಡುವಷ್ಟು ಕ್ರೀಡೆಗೆ ಪ್ರೋತ್ಸಾಹ ನೀಡುತ್ತಿಲ್ಲ. ನಗರ ಪ್ರದೇಶಗಳಲ್ಲಿ ಮಕ್ಕಳು ಆಟವಾಡಲು ಸೂಕ್ತ ಕ್ರೀಡಾಂಗಣವಿಲ್ಲ. ಇದರಿಂದ ಅವರ ವ್ಯಕ್ತಿತ್ವ ವಿಕಸನ ಆಗುತ್ತಿಲ್ಲ. ರಾಜ್ಯದಲ್ಲೂ ಕೂಡ ಕ್ರೀಡೆಗೆ ಬೆಂಬಲ ಸಿಗುತ್ತಿಲ್ಲ ಎಂದರು. ಕ್ರಿಕೆಟ್ ಹೊರತುಪಡಿಸಿ ಬೇರೆ ಯಾವ ಕ್ರೀಡೆಗೂ ಬೆಂಬಲ ಸಿಗುತ್ತಿಲ್ಲ. ಇಂತಹ ವೇಳೆ ತಾಲೂಕಿನಲ್ಲಿ ಶಿವಶಂಕರ್ ಕ್ರೀಡಾ ಅಕಾಡೆಮಿ ಸ್ಥಾಪಿಸಿರುವುದು ನಿಜಕ್ಕೂ ಅಭಿನಂದನೀಯ. ಮಕ್ಕಳಿಗೆ ಕೌಶಲ್ಯ ಧಾರಿತ ತರಬೇತಿ ಅಗತ್ಯವಿದೆ. ವಾರ್ಷಿಕ ಇಬ್ಬರು ಕ್ರೀಡಾಪಟುಗಳು ರಾಜ್ಯ ಪ್ರತಿನಿಧಿಸುವ ತರಬೇತಿ ನೀಡಲಿ ಎಂದು ಅಕಾಡೆಮಿ ನವೀನ್ ಮತ್ತು ತಂಡಕ್ಕೆ ಶುಭಕೋರುವುದಾಗಿ ತಿಳಿಸಿದರು.

ವೀರಶೈವ ಮಹಾಸಭಾ ಅಧ್ಯಕ್ಷ ತೊಟ್ಟವಾಡಿ ಮಹದೇವ ಸ್ವಾಮಿ, ಮಕ್ಕಳ ಕ್ರೀಡಾ ಚಟುವಟಿಕೆ ಪ್ರೋತ್ಸಾಹಿಸಲು ರಜಾ ದಿನಗಳಲ್ಲಿ ಕ್ರೀಡಾ ಶಿಬಿರ ಬಹಳ ಉಪಯುಕ್ತ. ಮಕ್ಕಳ ಶೈಕ್ಷಣಿಕ ಪ್ರಗತಿ ಜೊತೆಗೆ ಅವರ ಮಾನಸಿಕ ಹಾಗೂ ದೈಹಿಕ ಆರೋಗ್ಯ ಹೆಚ್ಚಿಸುವ ನಿಟ್ಟಿನಲ್ಲಿ ಕ್ರೀಡಾ ತರಬೇತಿ ಅಗತ್ಯ. ಗ್ರಾಮೀಣ ವಿದ್ಯಾರ್ಥಿಗಳಿಗೆ ಇಂತಹ ತರಬೇತಿ ನಡೆಸಲು ಶಿವಶಂಕರ್ ಸ್ಪೋರ್ಟ್ಸ್ ಅಕಾಡೆಮಿ ಮುಂದಾಗಿರುವುದು ಸಂತೋಷದ ವಿಷಯ ಎಂದರು. ಕಾರ್ಯಕ್ರಮದ ಸಾನಿಧ್ಯವನ್ನು ವಾಟಾಳ್ ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು.

ಈ ವೇಳೆ ವಕೀಲರ ಸಂಘದ ಅಧ್ಯಕ್ಷ ಕೆ.ಜಿ.ಪಾಲಾಕ್ಷ, ವಕೀಲರಾದ ಶಿವಣ್ಣ, ಜ್ಞಾನೇಂದ್ರ ಮೂರ್ತಿ, ಶಿವಣ್ಣ, ಮಣಿಕಂಠ ರಾಜುಗೌಡ, ಸಾಲೂರು ಸ್ವಾಮಿ, ರಾಷ್ಟ್ರೀಯ ಕ್ರೀಡಾಪಟು ವೀಣಾ, ಡಾ.ಬಸವಣ್ಣ, ಡಾ.ನವೀನ್, ಕಿರಗಸೂರು ಕಾಂತರಾಜು, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಮಂಟೇಲಿಂಗಪ್ಪ, ಕಿರಗಸೂರು ಶಂಕರ್, ಬಿಲಿಗೆರೆಹುಂಡಿ ಗುರು, ಸ್ವಾಮೀಜಿ, ತೋಟೇಶ್, ಆರ್.ಎಸ್. ಬಸವರಾಜು, ಪುರಸಭಾ ಸದಸ್ಯ ಮೆಡಿಕಲ್ ನಾಗರಾಜು, ದೈಹಿಕ ಶಿಕ್ಷಕ ಕುಮಾರ ಸ್ವಾಮಿ, ಫ್ಯಾನ್ಸಿ ಮೋಹನ್, ಟೌನ್ ವೀರಶೈವ ಸಂಘದ ಅಧ್ಯಕ್ಷ ಶಾಂತರಾಜು, ಮೂಗೂರು ಕುಮಾರಸ್ವಾಮಿ, ಏಳುಮಲೈ ಮಂಜು, ಶಿವಶಂಕರ್ ಸ್ಪೋರ್ಟ್ಸ್ ಅಕಾಡೆಮಿ ನವೀನ್, ಮಹೇಶ್, ಮಹದೇವಮ್ಮ, ಸಿದ್ದಲಿಂಗಸ್ವಾಮಿ, ಪಂಚಾಕ್ಷರಿ ಇತರರಿದ್ದರು.

ಹಾಲಿನ ದರ ಹೆಚ್ಚಳ ಪ್ರಸ್ತಾಪ ಇಲ್ಲ



ಮೈಸೂರು,ಏ.11(ಆರ್‌ಕೆ)–ಹಾಲಿನ ದರ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ. ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಸರ್ಕಾರವು ಹಾಲಿನ ದರವನ್ನು ಹೆಚ್ಚಿಸುವುದಿಲ್ಲ. ಈ ಬಗ್ಗೆ ಪ್ರಸ್ತಾವನೆಯೂ ಇಲ್ಲ. ಆದರೆ, ಆಯಾ ಹಾಲು ಒಕ್ಕೂಟಗಳು ತಮ್ಮ ಲಾಭಾಂಶದಲ್ಲಿ ರೈತರಿಗೆ ಒಂದಿಷ್ಟು ಹಣವನ್ನು ಕೊಡಬಹುದು. ಅದರಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸುವುದಿಲ್ಲ ಎಂದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ನಾಯಕರು ನಡೆಸುತ್ತಿರುವ ಪ್ರತಿಭಟನೆಗೆ ಪ್ರತಿಕ್ರಿಯಿಸಿದ ಸಚಿವರು, ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಕಾಂಗ್ರೆಸ್‌ನವರು ಪ್ರತಿಭಟನೆಗಿಳಿದಿದ್ದಾರೆ. ನಾವೂ ಇದ್ದೀವಿ ಎಂದು ತೋರಿಸಿಕೊಳ್ಳಲು ಈ ರೀತಿ ಮಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು. ಕಾಂಗ್ರೆಸ್ ಪದಾಧಿಕಾರಿಗಳ ನೇಮಕದ ಬಗ್ಗೆಯೂ ಲೇವಡಿ ಮಾಡಿದ ಸೋಮಶೇಖರ್, ನಮ್ಮ ಪಕ್ಷದಲ್ಲಿ ಒಬ್ಬ ಅಧ್ಯಕ್ಷ, ಮೂವರು ಪ್ರಧಾನ ಕಾರ್ಯದರ್ಶಿ, ಹತ್ತು ಮಂದಿ ಉಪಾಧ್ಯಕ್ಷರಿದ್ದಾರೆ. ಆದರೆ ಕಾಂಗ್ರೆಸ್ ಜಂಬೋ ಜೆಟ್ ಇದ್ದಂತೆ. ಅಲ್ಲಿ 140ರಿಂದ 150 ಮಂದಿ ಇದ್ದಾರೆ ಎಂದರು.

ಧಾರವಾಡದಲ್ಲಿ ಕಲ್ಲಂಗಡಿ ವ್ಯಾಪಾರಿ ಮೇಲಿನ ಹಲ್ಲೆ ಪ್ರಕರಣಕ್ಕೂ ಬಿಜೆಪಿ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲ. ಈ ಬಗ್ಗೆ ಪಕ್ಷದ ಹಿರಿಯರು ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. ಇದರಿಂದ ಪಕ್ಷಕ್ಕೆ ಹಿನ್ನಡೆಯಾಗುವುದಿಲ್ಲ ಎಂದ ಅವರು, ಗೃಹ ಸಚಿವರು ಸಮರ್ಥಿಸಿದ್ದಾರೆ. ಚಂದ್ರು ಕೊಲೆ ಪ್ರಕರಣ ಕುರಿತು ಸೂಕ್ತ ತನಿಖೆ ನಡೆಯಲಿದೆ ಎಂದು ಎಸ್.ಟಿ.ಸೋಮಶೇಖರ್ ಪ್ರತಿಕ್ರಿಯೆ ನೀಡಿದರು.

ನಾಳೆ (ಏ.12)ಯಿಂದ ನಡೆಯಲಿರುವ ಬಿಜೆಪಿ ಸಂಘಟನಾ ಯಾತ್ರೆಯು ಅವಧಿಗೂ ಮುನ್ನ ಚುನಾವಣಾ ತಯಾರಿಯಲ್ಲ. ಪಕ್ಷ ಸಂಘಟನೆಗಾಗಿ ರಾಜ್ಯದಾದ್ಯಂತ ಕೋರ್ ಕಮಿಟಿ ಸಭೆಗಳು ನಡೆಯುತ್ತಿವೆ. ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೇತೃತ್ವದಲ್ಲಿ ರಚನೆಯಾಗಿರುವ ಸಮಿತಿಯ ಸದಸ್ಯರು ಏ. 12, 13ರಂದು ನಡೆಯಲಿರುವ ಕೋರ್ ಕಮಿಟಿ ಸಭೆಗೆ ಆಗಮಿಸುತ್ತಿದ್ದಾರೆ ಎಂದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಪ್ರಧಾನಿ ಮೋದಿ ಅವರನ್ನು ಸಂಸದ ಪ್ರತಾಪ್ ಸಿಂಹ ಆಹ್ವಾನಿಸಿದ್ದಾರೆ. ಪ್ರಧಾನಿಗಳು ಬಂದಲ್ಲಿ ಕಾರ್ಯಕ್ರಮ ಯಶಸ್ವಿಯಾಗಲಿದ್ದು, ಮೈಸೂರಿಗೆ ಹೆಮ್ಮೆಯ ವಿಷಯವಾಗಲಿದೆ ಎಂದರು.

ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಭಾರೀ ಪ್ರತಿಭಟನೆ

● ಕೇಂದ್ರದ ಜನ ವಿರೋಧಿ ನೀತಿಗೆ ಖಂಡನೆ ● ಬೆಲೆಗಳು ಗಗನದತ್ತ; ಆದಾಯ ಮಾತ್ರ ಪಾತಾಳದತ್ತ

ಬೆಂಗಳೂರು, ಏ. 11(ಕೆಎಂಶಿ)– ಪೆಟ್ರೋಲ್, ಡೀಸೆಲ್‌ನಂತಹ ಇಂಧನದಿಂದ ಹಿಡಿದು ಅಡುಗೆ ಅನಿಲ, ಅಡುಗೆ ಎಣ್ಣೆಯಂತಹ ದಿನಬಳಕೆ ವಸ್ತುಗಳು ದಿನದಿಂದ ದಿನಕ್ಕೆ ಬೆಲೆ ಏರುತ್ತಿರುವುದನ್ನು ಖಂಡಿಸಿ, ಪ್ರದೇಶ ಕಾಂಗ್ರೆಸ್ ಬೃಹತ್ ಪ್ರತಿಭಟನೆ ನಡೆಸಿತು.

ಕರ್ನಾಟಕದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿ, ಕೇಂದ್ರ ಸರ್ಕಾರದ ಜನವಿರೋಧಿ ನೀತಿಯನ್ನು ಖಂಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನವಿರೋಧಿ ನೀತಿಯ ಬಗ್ಗೆ ಮನೆ ಮನೆಗೂ ತಿಳಿಸುವಂತೆ ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ನೂತನವಾಗಿ ನೇಮಕವಾಗಿರುವ ಉಪಾಧ್ಯಕ್ಷರು, ಪದಾಧಿಕಾರಿಗಳು ಇದ್ದೀರಿ. ಮುಂದೆ ಪದಾಧಿಕಾರಿಗಳು ಆಗುವವರು ಇದ್ದೀರಿ. ಪಟ್ಟಿ ಇಷ್ಟಕ್ಕೆ ಮುಗಿದಿಲ್ಲ. ಎಲ್ಲ ವರ್ಗದವರು, ಸಮಾಜದವರಿಗೆ ಸ್ಥಾನ ಕೊಡಬೇಕು ಎಂದು ಕಾಂಗ್ರೆಸ್ ನಿರ್ಧರಿಸಿದೆ. ಪಟ್ಟಿ ಬಿಡುಗಡೆ ತಡವಾಗಿದೆ ಎಂದು ತುರ್ತಾಗಿ ಕೆಲವು ಹೆಸರುಗಳಿಗೆ ಅನುಮತಿ ನೀಡಿದ್ದಾರೆ. ಹಗಲು ರಾತ್ರಿ ದುಡಿಯುವ ಎಲ್ಲರಿಗೂ ಅವಕಾಶ ಮಾಡಿಕೊಡುತ್ತೇವೆ. ನಮ್ಮ ರಾಷ್ಟ್ರೀಯ ನಾಯಕರು ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ನಡೆಸುವಂತೆ ಸೂಚನೆ ನೀಡಿದ್ದರು. ಜಿಲ್ಲಾ ಮಟ್ಟದಲ್ಲಿ ಪ್ರತಿಭಟನೆ, ಪತ್ರಿಕಾಗೋಷ್ಠಿಗಳನ್ನು ನಡೆಸಲಾಗಿದೆ ರಾಜ್ಯಮಟ್ಟದ ಪ್ರತಿಭಟನೆಯನ್ನು ಮೆರವಣಿಗೆ ಮೂಲಕ ಮಾಡಬೇಕು ಎಂದು ತೀರ್ಮಾನಿಸಿದ್ದೆವು. ಆದರೆ ಹೈಕೋರ್ಟ್ ಆದೇಶ ಹಿನ್ನೆಲೆಯಲ್ಲಿ ಅದಕ್ಕೆ ಗೌರವ ನೀಡಲು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ನಾವೆಲ್ಲರೂ ಇಂದು ಬೆಲೆ ಏರಿಕೆ ವಿರುದ್ಧ ಮಾತನಾಡುತ್ತಿದ್ದೇವೆ. ಕೇಂದ್ರ ಸರ್ಕಾರ ಚುನಾವಣೆ ಗೆದ್ದ ನಂತರ ಬಡವರ ಲೂಟಿಗೆ ಇಳಿದಿದೆ. ಪಂಚ ರಾಜ್ಯ ಚುನಾವಣೆ ನಂತರ ಪ್ರತಿನಿತ್ಯ ಎಲ್ಲ ವಸ್ತುಗಳ ಬೆಲೆ ಗಗನಕ್ಕೆ ಏರಿದರೆ ಆದಾಯ ಮಾತ್ರ ಪಾತಾಳಕ್ಕೆ ಹೋಗುತ್ತಿದೆ. ಮೋದಿ ಅವರು ಎಲ್ಲ ರೈತರ ಆದಾಯ ಡಬಲ್ ಮಾಡುವುದಾಗಿ ಹೇಳಿದ್ದರು. ನಾನು ಹೋದ ಕಡೆ ಯೆಲ್ಲಾ ಕೇಳುತ್ತಿದ್ದೇನೆ. ಎಲ್ಲರೂ ನಮ್ಮ ಆದಾಯ ಕುಸಿದಿದೆ ಎಂದು ಹೇಳುತ್ತಿದ್ದಾರೆಯೇ ಹೊರತು ಆದಾಯ ಹೆಚ್ಚಾಗಿದೆ ಎಂದು ಯಾರೂ ಹೇಳಿಲ್ಲ.



ಬೆಲೆ ಏರಿಕೆ
ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ದಿನಬಳಕೆ ವಸ್ತುಗಳು

ದೇಶದ 17 ಸಾವಿರ ಉದ್ದಿಮೆದಾರರು ಈ ಸರ್ಕಾರದ ಕಿರುಕುಳ ತಾಳಲಾರದೆ ದೇಶ ತೊರೆದು ಆಸ್ಟ್ರೇಲಿಯಾ, ಸೌದಿ, ಕೆನಡಾಕ್ಕೆ ಹೋಗುತ್ತಿದ್ದಾರೆ. ಪ್ರತಿ ವ್ಯಕ್ತಿಯೂ ಈ ಬೆಲೆ ಏರಿಕೆಯಿಂದ ತೊಂದರೆ ಅನುಭವಿಸುತ್ತಿದ್ದಾನೆ. ಸಣ್ಣ ಬೈಕು, ಕಾರು ಇಟ್ಟುಕೊಂಡ ಕುಟುಂಬಕ್ಕೆ ದಿನಕ್ಕೆ 100 ರೂ, ವೆಚ್ಚ ಹೆಚ್ಚಾಗಿದೆ. ಅಡುಗೆ ಅನಿಲ 410ರಿಂದ 1000 ಆಗಿದೆ, ಪೆಟ್ರೋಲ್ 68ರಿಂದ 111 ಆಗಿದೆ, ಡೀಸೆಲ್ 57ರಿಂದ 97 ರೂ. ಆಗಿದೆ. ಅಡುಗೆ ಎಣ್ಣೆ 90ರಿಂದ 210 ಆಗಿದೆ. ಗೊಬ್ಬರ 150 ರೂ. ಹೆಚ್ಚಾಗಿದೆ. ಹಾಲು ಶೇ.20ರಷ್ಟು, ವಿದ್ಯುತ್ ಬೆಲೆ ಹೆಚ್ಚಾಗುತ್ತಿದೆ. ಬಟ್ಟೆ ಬೆಲೆ ಶೇ.20ರಷ್ಟು ಹೆಚ್ಚಳವಾಗಿದೆ.

ನಾವು ಜನರ ಮಧ್ಯೆ ಹೋಗಿ ಅವರಿಗೆ ನೆನಪು ಮಾಡಿಕೊಡಬೇಕು. ಕಾಂಗ್ರೆಸ್ ಸರ್ಕಾರ ಇದ್ದಾಗ ನಾವು ಹೇಗೆ ಬೆಲೆ ನಿಯಂತ್ರಣ ಮಾಡುತ್ತಿದ್ದೆವು. ಕಚ್ಚಾತೈಲ ಬೆಲೆ ಎಷ್ಟಿತ್ತು, ಈಗ ಎಷ್ಟಿದೆ? ಕೇವಲ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಮಾತ್ರ ಹೆಚ್ಚಾಗುತ್ತಿಲ್ಲ. ಕಬ್ಬಿಣ 36 ಸಾವಿರದಿಂದ 90 ಸಾವಿರ ಆಗಿದೆ, ಸೀಮೆಂಟ್ 180 ರಿಂದ 450 ರೂ. ಆಗಿದೆ. ಮನೆ ಕಟ್ಟುವವರು ಹೇಗೆ ಕಟ್ಟಬೇಕು? ದಿನ ಬೆಳಗಾದರೆ ಜನರಿಗೆ ಸರ್ಕಾರ ಬೆಲೆ ಏರಿಕೆ ಗಿಫ್ಟ್ ಕೊಡುತ್ತಿದೆ.

ನೂತನವಾಗಿ ಸುಮಾರು 150 ಪದಾಧಿಕಾರಿಗಳು ನೇಮಕಗೊಂಡಿದ್ದು, ಇನ್ನು 200 ಮಂದಿ ನೇಮಕವಾಗಲಿದ್ದಾರೆ. ನೀವುಗಳು ಪ್ರತಿ ಕ್ಷೇತ್ರ, ಮನೆ ಮನೆಗೂ ಹೋಗಿ ಮಾತನಾಡಿಸಿ ಅವರಿಗೆ ನಮ್ಮ ಆಚಾರ ವಿಚಾರ ಪ್ರಚಾರ ಮಾಡಬೇಕು. ಈ ಸರ್ಕಾರ ಹೇಗೆ ಅನ್ಯಾಯ ಮಾಡಿದೆ, ಕೋವಿಡ್ ಸಮಯದಲ್ಲಿ ಹೇಗೆ ನಡೆದುಕೊಂಡಿದೆ ಎಂದು ಜನರಿಗೆ ತಿಳಿಸಬೇಕು. ಪಕ್ಕದ ರಾಜ್ಯದಲ್ಲಿ ತೆರಿಗೆ ವಿನಾಯಿತಿ ಕೊಟ್ಟರೂ ಇಲ್ಲಿ ಯಾವುದೇ ನೆರವು ನೀಡಲಿಲ್ಲ.

ನಾವು ಚಾಲಕರು, ಸಾಂಪ್ರದಾಯಿಕ ವೃತ್ತಿಪರರಿಗೆ ನೆರವು ನೀಡಬೇಕು ಎಂದು ಪ್ರತಿಭಟನೆ ಮಾಡಿದರೂ ಸರ್ಕಾರ ನೀಡಲಿಲ್ಲ. ಕೋವಿಡ್‌ನಿಂದ 4.5 ಲಕ್ಷ ಜನ ಸತ್ತರೂ 45 ಸಾವಿರ ಲೆಕ್ಕ ಕೊಡುತ್ತಿದ್ದಾರೆ. ಅವರಿಗೂ ಪರಿಹಾರ ಕೊಟ್ಟಿಲ್ಲ. ದೇಶದಲ್ಲಿ ಶೇ.40ರಷ್ಟು ಕಮಿಷನ್ ಪಡೆಯುವ ಸರ್ಕಾರ ಇದ್ದರೆ ಅದು ರಾಜ್ಯ ಬಿಜೆಪಿ ಸರ್ಕಾರ. ಈ ಸರ್ಟಿಫಿಕೇಟ್ ಕೊಟ್ಟವರು ನಾವಲ್ಲ. ಇದನ್ನು ಕೊಟ್ಟವರು ನೋಂದಣಿಯಾಗಿರುವ ಗುತ್ತಿಗೆದಾರರ ಸಂಘದ ಅಧ್ಯಕ್ಷರು. ಈ ಬಗ್ಗೆ ಪ್ರಧಾನ ಮಂತ್ರಿ ಮೋದಿ ಅವರು ಮಾತನಾಡುತ್ತಿಲ್ಲ.

ಬಿಜೆಪಿ ಸರ್ಕಾರ ಕೇವಲ ತೊಂದರೆ ಕೊಡುತ್ತಿದೆ. ನಮಗೆ ದಿನಬೆಳಗಾದರೆ ನೋಟೀಸ್ ನೀಡುತ್ತಿದೆ. ಎಲ್ಲ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಕಿರುಕುಳ ನೀಡುತ್ತಿದ್ದಾರೆ. ನ್ಯಾಯ ನೀತಿ, ಸತ್ಯ, ಧರ್ಮದಲ್ಲಿ ನಾವು ಕೆಲಸ ಮಾಡುತ್ತಿದ್ದು, ನಮ್ಮ ಹೋರಾಟ ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ. ಇಂದು ಪ್ರತಿ ವಸ್ತುವಿನ ಬೆಲೆ ಕಡಿಮೆ ಮಾಡಿಸ ಬೇಕಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲ ವರ್ಗದ ಜನರ ಬಗ್ಗೆ ಚಿಂತಿಸುತ್ತದೆ. ನಾನು ಆಗಾಗ್ಗೆ ಒಂದು ಮಾತು ಹೇಳುತ್ತಿರುತ್ತೇನೆ. ಕಾಂಗ್ರೆಸ್ ಶಕ್ತಿ ದೇಶದ ಶಕ್ತಿ, ಕಾಂಗ್ರೆಸ್ ಇತಿಹಾಸ ದೇಶದ ಇತಿ ಹಾಸ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲ ವರ್ಗದ ಜನ ಅಧಿಕಾರಕ್ಕೆ ಬಂದಂತೆ. ನಾವು 6 ತಿಂಗಳ ಮುಂಚಿತವಾಗಿ ಪ್ರಣಾಳಿಕೆ ಸಿದ್ಧಪಡಿಸುತ್ತೇವೆ. ಮಹಿಳೆಯರು, ಯುವಕರು, ಹೆಣ್ಣು ಮಕ್ಕಳು, ಜನಸಾಮಾನ್ಯರ ಬದುಕಿನ ಬಗ್ಗೆ, ರೈತರ ಬಗ್ಗೆ ಆಲೋಚಿಸಿ ಪ್ರಣಾಳಿಕೆ ಮಾಡುತ್ತೇವೆ. ಸಿದ್ದರಾಮಯ್ಯ ಅವರ ಸರ್ಕಾರ ಬರುವಾಗ 177 ಕಾರ್ಯಕ್ರಮ ಘೋಷಿಸಿದ್ದು, 165 ಕಾರ್ಯಕ್ರಮ ಜಾರಿಗೊಳಿಸಿ ನುಡಿದಂತೆ ನಡೆದಿದ್ದೇವೆ. ಬಿಜೆಪಿ ಸರ್ಕಾರ ತನ್ನ ಪ್ರಣಾಳಿಕೆ ತೆಗೆದುಕೊಂಡು ಕೊಟ್ಟ ಮಾತು ಉಳಿಸಿಕೊಂಡಿದ್ದಾರಾ ತೀರ್ಮಾನಿಸಲಿ. ಯಾರಿಗೂ ಸಮಾನತೆ ನೀಡಲು ಸಾಧ್ಯವಾಗಲಿಲ್ಲ ಎಂದರು.





ಗೋಕುಲ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಹಾಗೂ ಕೈವಾರ ತಾತಯ್ಯ ಕ್ಷೇತ್ರದ ಧರ್ಮಾಧಿಕಾರಿ ಡಾ.ಎಂ.ಆರ್. ಜಯರಾಂ ಸುತ್ತೂರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು.



ಮೈಸೂರು ನಗರ ಕನ್ನಡಪರ ಸಂಘಟನೆ, ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ 'ನಾಡೋಜ' ಪದವಿ ಪುರಸ್ಕೃತ ಡಾ.ಭಾಷ್ಯಂ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಮಂಜುನಾಥ (ಮಿಲ್ಕ್ ಮಂಜು), ಉಪಾಧ್ಯಕ್ಷ ಮೆಸ್ ಬಾಬು, ಹಿರಿಯ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣಗೌಡ, ಕಾರ್ಯದರ್ಶಿ ಸರ್ದಾರ್ ಮಹೇಶ್, ಶಾಮಿಯಾನ ಸ್ವಾಮಿ ಉಪಸ್ಥಿತರಿದ್ದರು.



ಮೈಸೂರಿನ ಬಸವೇಶ್ವರ ರಸ್ತೆಯ ಕುದೇರು ಮಠದ ಬಳಿ ಶ್ರೀ ಗುರುಮಲ್ಲೇಶ್ವರ ಯುವ ಬಳಗದಿಂದ ಶ್ರೀ ಶಿವಕುಮಾರ ಸ್ವಾಮೀಜಿ ಜಯಂತಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಪಾಲಿಕೆ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡರಾದ ಪ್ರದೀಪ್, ಆಲನಹಳ್ಳಿ ಪುಟ್ಟಸ್ವಾಮಿ, ಹರೀಶ್ ಇತರರಿದ್ದರು.



ಜಗದ್ಗುರು ಶ್ರೀ ರೇವಣ ಸಿದ್ದೇಶ್ವರ ಸಿಂಹಾಸನ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಜನ್ಮದಿನದ ಪ್ರಯುಕ್ತ ಮೈಸೂರಿನ ಕೊಲ್ಲಾಪುರದಮ್ಮ ಮಹಾಲಕ್ಷ್ಮೀ ದೇವಸ್ಥಾನದ ವತಿಯಿಂದ ಸಾರ್ವಜನಿಕರಿಗೆ ತುಳಸಿ ಗಿಡ ವಿತರಿಸಲಾಯಿತು. ಈ ವೇಳೆ ಮುಡಾ ಸದಸ್ಯ ನವೀನ್ ಕುಮಾರ್, ದೇವಸ್ಥಾನದ ಅಧ್ಯಕ್ಷ ನಾಗರಾಜ್, ಸದಸ್ಯರಾದ ಜವರಪ್ಪ, ಶಿವಮ್ಮ ಚೇತನ, ರಾಮಸ್ವಾಮಿ ನಾಗರಾಜ್, ಶಾಂತಿ ಇನ್ನಿತರರು ಉಪಸ್ಥಿತರಿದ್ದರು.

ಬೆಲೆ ಏರಿಕೆ: ಮೈಸೂರಲ್ಲಿ ಸಿಪಿಐ ಪ್ರತಿಭಟನೆ

ಮೈಸೂರು, ಏ.11(ಪಿಎಂ)– ಪೆಟ್ರೋಲ್, ಡೀಸೆಲ್, ಗ್ಯಾಸ್, ವಿದ್ಯುತ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸದೇ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ಜನ ವಿರೋಧಿ ನೀತಿ ಅನುಸರಿಸುತ್ತಿವೆ ಎಂದು ಆರೋಪಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರಿನ ಪುರಭವನ ಆವರಣದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಅಗತ್ಯ ವಸ್ತುಗಳ ಬೆಲೆಗಳನ್ನು ಇಳಿಸಿ, ನಿರುದ್ಯೋಗ ಸಮಸ್ಯೆ ನಿವಾರಿಸುವ ಜೊತೆಗೆ ಭ್ರಷ್ಟಾಚಾರ ನಿರ್ಮೂಲನೆ ಮಾಡುವ ವಾಗ್ದಾನ ನೀಡಿ, ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ, ಇದೀಗ ತಾನು ನೀಡಿದ ಭರವಸೆಗಳನ್ನು ಈಡೇರಿಸದೇ, ದೇಶದ ಜನತೆ ಮೇಲೆ ಬೆಲೆ ಏರಿಕೆಯ ಹೊರೆ ಹಾಕುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿ ಮೋದಿಯವರು ಅಧಿಕಾರ ವಹಿಸಿಕೊಂಡಾಗ ಒಂದು ಲೀಟರ್‌ಗೆ 65 ರೂ. ಇದ್ದ ಪೆಟ್ರೋಲ್ ಬೆಲೆ ಈಗ 112 ರೂ.ಗೆ ಏರಿಕೆ ಕಂಡಿದೆ. ಡೀಸೆಲ್ ದರ 55 ರೂ.ನಿಂದ 98 ರೂ.ಗೆ ತಲುಪಿದೆ. 400 ರೂ. ಇದ್ದ ಅಡುಗೆ ಅನಿಲದ ಸಿಲಿಂಡರ್ ಬೆಲೆ ಈಗ ಸಾವಿರ ರೂ.ಗೆ ಹೆಚ್ಚಳವಾಗಿದೆ. ಜನತೆ ತೀವ್ರತರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದರೂ ಬೆಲೆ ಏರಿಕೆಗೂ ತಮಗೂ ಯಾವುದೇ ಸಂಬಂಧ ಇಲ್ಲ ಎಂಬಂತೆ ಕೇಂದ್ರ ಸರ್ಕಾರ ಹೊಣಗೇಡಿತನ ಪ್ರದರ್ಶಿಸುತ್ತಿದೆ ಎಂದು ಕಿಡಿಕಾರಿದರು.

ಜನತೆ ಎದುರಿಸುತ್ತಿರುವ ಮೂಲಭೂತ ಸಮಸ್ಯೆಗಳನ್ನು ಮರೆ ಮಾಚಲು ಹಾಗೂ ಮುಂಬರುವ ಚುನಾವಣೆಗಳಲ್ಲಿ ಮತ್ತೊಮ್ಮೆ ಜನರನ್ನು ವಂಚಿಸಲು ಭಾವನಾತ್ಮಕವಾದ ಧಾರ್ಮಿಕ ವಿಚಾರಗಳನ್ನು ಹುಟ್ಟು ಹಾಕಲಾಗುತ್ತಿದೆ. ಆ ಮೂಲಕ ಸಾಮರಸ್ಯದಿಂದ ಬದುಕುತ್ತಿರುವ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತರ ನಡುವೆ ಕೋಮು ದ್ವೇಷ ಸೃಷ್ಟಿಸುತ್ತಿದೆ ಎಂದು ಆರೋಪಿಸಿದರು. ಸಿಪಿಐ ಮುಖಂಡ ಹೆಚ್.ಆರ್.ಶೇಷಾದ್ರಿ, ಪಕ್ಷದ ಜಿಲ್ಲಾ ಮಂಡಳಿ ಕಾರ್ಯದರ್ಶಿ ಹೆಚ್.ಬಿ.ರಾಮಕೃಷ್ಣ, ಸಹ ಕಾರ್ಯದರ್ಶಿಗಳಾದ ಕೆ.ಎಸ್.ರೇವಣ್ಣ, ಕೆ.ಜಿ.ಸೋಮರಾಜೇ ಅರಸ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಿವಿಧ ಕ್ಷೇತ್ರದ ಗಣ್ಯರು ಸದ್ಯದಲ್ಲೇ ಎಎಪಿ ಸೇರ್ಪಡೆ

ಪಕ್ಷದ ಜಿಲ್ಲಾಧ್ಯಕ್ಷೆ ಮಾಲವಿಕ ಗುಬ್ಬವಾಣಿ



ಮೈಸೂರು,ಏ.11(ಎಂಟಿವೈ)– ಭ್ರಷ್ಟಾಚಾರ ಮುಕ್ತ ಆಡಳಿತದೊಂದಿಗೆ ಜನಸಾಮಾನ್ಯರಿಗೆ ಹಾಗೂ ಬಡವರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಹೆಜ್ಜೆ ಇಡುತ್ತಿರುವುದರಿಂದ ವಿವಿಧ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಗಣ್ಯರು ಎಎಪಿ ಸೇರಲು ಮುಂದಾಗಿದ್ದಾರೆ ಎಂದು ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷೆ ಮಾಲವಿಕಾ ಗುಬ್ಬಿವಾಣಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೆಹಲಿಯಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೇತೃತ್ವದ ಸರ್ಕಾರ 2 ಬಾರಿ ಉತ್ತಮ ಆಡಳಿತ ನೀಡಿದ ಫಲವಾಗಿ ಪಂಜಾಬ್‌ನಲ್ಲೂ ಎಎಪಿ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಜನ ಸಾಮಾನ್ಯರಿಗೆ ಅಧಿಕಾರ ಸಿಗುವುದರೊಂದಿಗೆ ಭ್ರಷ್ಟಾಚಾರವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಎಎಪಿ ಮುಂದಾಗಿದ್ದು, ಅದಕ್ಕಾಗಿ ಪಕ್ಷದ ಮುಖಂಡರು ಪಣ ತೊಟ್ಟಿದ್ದಾರೆ. ಉತ್ತಮ ಆಡಳಿತದಿಂದಾಗಿ ಹಾಗೂ ಭ್ರಷ್ಟಾಚಾರ ಮುಕ್ತ ಆಡಳಿತದಿಂದಾಗಿ ದೇಶದ ಜನತೆ ಆಮ್ ಆದ್ಮಿ ಪಕ್ಷದ ಮೇಲೆ ನಿರೀಕ್ಷೆ ಇಟ್ಟುಕೊಂಡಿದ್ದಾರೆ ಎಂದರು. ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಪಕ್ಷಕ್ಕೆ ಸೇರ್ಪಡೆಗೊಂಡ ಬೆನ್ನಲ್ಲೇ ಇದೀಗ ಹಲವು ಮಂದಿ ಪಕ್ಷ ಸೇರಲು ಮುಂದೆ ಬಂದಿದ್ದಾರೆ ಎಂದರು.

ಶಿಕ್ಷಣ, ಆರೋಗ್ಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಎಎಪಿ ಸರ್ಕಾರ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ರಾಜಕಾರಣಿಗಳ ದುಂದುವೆಚ್ಚಕ್ಕೆ ಕಡಿವಾಣ ಹಾಕುವ ಮೂಲಕ ಜನರ ತೆರಿಗೆ ಹಣವನ್ನು ಜನರ ಏಳಿಗೆಗಾಗಿಯೇ ವಿನಿಯೋಗಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ದೆಹಲಿ, ಪಂಜಾಬ್ ನಂತರ ಕರ್ನಾಟಕದಲ್ಲಿ ಆಮ್ ಆದ್ಮಿ ಪಕ್ಷ ಮುನ್ನಲೆಗೆ ಬರಲಿದೆ ಎಂದು ಮಾಳವಿಕಾ ತಿಳಿಸಿದರು.

ಆಮ್ ಆದ್ಮಿ ಸೇರಿದ ಸಂಗ್ರಾಮ್ ಸಿಂಗ್ ಪುತ್ರಿ: ಇದೇ ವೇಳೆ ನಿವೃತ್ತ ಪೊಲೀಸ್ ಅಧಿಕಾರಿ ಸಂಗ್ರಾಮ್ ಸಿಂಗ್ ಅವರ ಪುತ್ರಿ, ಧರ್ಮಶ್ರೀ ಇಂದು ಅಧಿಕೃತವಾಗಿ ಎಎಪಿ ಸೇರಿದರು. ಪಕ್ಷದ ರಾಜ್ಯಾಧ್ಯಕ್ಷ ಪೃಥ್ವಿರೆಡ್ಡಿ ಹಾಗೂ ಜಿಲ್ಲಾಧ್ಯಕ್ಷೆ ಮಾಲವಿಕಾ ಗುಬ್ಬಿವಾಣಿ, ಧರ್ಮಶ್ರೀ ಅವರಿಗೆ ಎಎಪಿ ಟೋಪಿ ಹಾಕಿ ಅಧಿಕೃತವಾಗಿ ಪಕ್ಷಕ್ಕೆ ಬರಮಾಡಿಕೊಂಡರು.

ಇದೇ ವೇಳೆ ಮಾಲವಿಕಾ ಗುಬ್ಬಿವಾಣಿ ಮಾತನಾಡಿ, ರಿಲಯನ್ಸ್ ಗ್ರೂಪ್‌ನಿಂದ ಯುವ ಉದ್ಯಮಿ ಎಂಬ ಮನ್ನಣೆ ಪಡೆದಿದ್ದ ಧರ್ಮಶ್ರೀ ಅವರು ಎಎಪಿ ತತ್ವ-ಸಿದ್ಧಾಂತ ಒಪ್ಪಿ ಪಕ್ಷಕ್ಕೆ ಸೇರಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಅನೇಕ ಚಟುವಟಿಕೆ ನಡೆಸಿ ನೂರಾರು ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ. ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಧರ್ಮಶ್ರೀ ಪಕ್ಷಕ್ಕೆ ಬಂದಿರುವುದಕ್ಕೆ ಸಂತೋಷವಾಗಿದೆ ಎಂದರು.

ಈ ಸಂದರ್ಭದಲ್ಲಿ ಪಕ್ಷದ ರಾಜ್ಯಾಧ್ಯಕ್ಷರಾದ ಪೃಥ್ವಿರೆಡ್ಡಿ, ಜಿಲ್ಲಾ ಮಾಧ್ಯಮ ಸಂಚಾಲಕ ಜಿ.ಆರ್.ವಿದ್ಯಾರಣ್ಯ, ವಿಜಯ್‌ಶಾಸ್ತ್ರಿ ಮಠ್ ಇನ್ನಿತರರು ಉಪಸ್ಥಿತರಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಕಸಬಾ ಹೋಬಳಿಯ ಸಿದ್ದಲಿಂಗಪುರದಲ್ಲಿ ಮೈಸೂರು ಯುವ ಜನತಾದಳ ಜಿಲ್ಲಾಧ್ಯಕ್ಷ ಗಂಗಾಧರ್‌ಗೌಡ, ಕ್ಷೇತ್ರದ ಅಧ್ಯಕ್ಷ ಸಂದೀಪ್, ಪ್ರಧಾನ ಕಾರ್ಯದರ್ಶಿ ವಿನೋದ್ ನಾಯಕ ನಾಗವಾಲ, ಜಯಪುರ ಹೋಬಳಿ ಯುವ ಜನತಾದಳದ ಅಧ್ಯಕ್ಷ ಮುತ್ತು, ಕಸಬಾ ಹೋಬಳಿ ಅಧ್ಯಕ್ಷ ರಮ್ಮನಹಳ್ಳಿ ಶಿವು, ಉಪಾಧ್ಯಕ್ಷ ಕಳಸ್ತವಾಡಿ ಕುಮಾರಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಸಂಗೀತ ತರಗತಿ

ಮೈಸೂರು,ಏ.11–ಸಂಸ್ಕೃತಿ ಮತ್ತು ಪ್ರದರ್ಶಕ ಕಲೆಗಳ ಧಾಮ ಮೈಸೂರಿನ 'ಭಾವ ರಾಗ ತಾಳ' ಸಂಸ್ಥೆ ವತಿಯಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ ಮತ್ತು ದೇವರನಾಮ ಸೇರಿದಂತೆ ಇನ್ನಿತರ ಸಂಗೀತ ತರಗತಿಗಳನ್ನು ಗೋಕುಲಂ, ಶಕ್ತಿನಗರದಲ್ಲಿ ನಡೆಸಲಾಗುತ್ತಿದೆ. ಆಸಕ್ತರು ದೂ.: 8073067679, 9449886315 ಮೂಲಕ ಸಂಪರ್ಕಿಸಲು ಪ್ರಕಟಣೆ ಕೋರಿದೆ.

ಯುಗಾದಿ ಪುರಸ್ಕಾರ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು, ಏ. 11– ಬೆಂಗಳೂರಿನ ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನವು ವಿವಿಧ ಕ್ಷೇತ್ರದ ಸಾಧಕರಿಂದ ಯುಗಾದಿ ಪುರಸ್ಕಾರ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಸಾಹಿತ್ಯ, ಸಂಗೀತ, ಕೊರೊನಾ ವಾರಿಯರ್ಸ್, ಕ್ರೀಡೆ, ನೃತ್ಯ, ಜಾನಪದ, ರಂಗಭೂಮಿ, ಸಮಾಜಸೇವೆ, ಶಿಕ್ಷಣ, ವೈದ್ಯಕೀಯ, ಸಂಘಟನೆ ಮುಂತಾದ ಕ್ಷೇತ್ರದ ಸಾಧಕರು ತಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ ವಿವರಗಳನ್ನು ಏಪ್ರಿಲ್ 20ರೊಳಗೆ ಕಳುಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. ಸಂ: 9448260417 ಸಂಪರ್ಕಿಸಬಹುದು.

ಏ.13, ಗುರುಮಹಾಶಾಂತಿ ಹೋಮ

ಮೈಸೂರು, ಏ. 11– ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನದಲ್ಲಿ ಏ.13ರಂದು ಗುರುಮಹಾಶಾಂತಿ ಹೋಮ ನಡೆಯಲಿದೆ. ಕುಂಭ ರಾಶಿಯಿಂದ ಮೀನರಾಶಿಗೆ ಗುರು ಪ್ರವೇಶ ಪ್ರಯುಕ್ತ ಮೇಷ, ಮಿಥುನ, ಸಿಂಹ, ಧನುಸ್ಸು, ಮಕರ, ಕುಂಭ ಹಾಗೂ ಮೀನರಾಶಿಯವರಿಗೆ ಶಾಂತಿಹೋಮವನ್ನು ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಪ್ರಧಾನ ಅರ್ಚಕ ಸೋಮಶೇಖರ್ ಅವರನ್ನು ಮೊ. 9535413361 ಮೂಲಕ ಸಂಪರ್ಕಿಸಲು ಕೋರಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ರೈತರ ಬೆಳೆಗೆ ಕನಿಷ್ಠ ಬೆಲೆ ಖಾತರಿಯೂ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆಗೆ ಇಂದಿನಿಂದ ರಾಜ್ಯಾದ್ಯಂತ ರೈತರ ಸರಣಿ ಪ್ರತಿಭಟನೆ

ಹೋರಾಟಕ್ಕೆ ಇಂದು ಸಂಯುಕ್ತ ಕಿಸಾನ್ ಮೋರ್ಚಾದ ಮುಖ್ಯಸ್ಥ ಪ್ರೊ. ಯೋಗೇಂದ್ರ ಯಾದವ್ ಚಾಲನೆ



ಮೈಸೂರು,ಏ.11(ಎಂಟಿವೈ)– ರೈತರು ಬೆಳೆಯುವ ಎಲ್ಲ ಬೆಳೆಗಳಿಗೂ ಕನಿಷ್ಠ ಬೆಲೆ ಖಾತ್ರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ, ರಾಜ್ಯಾ ದ್ಯಂತ ಸರಣಿ ಹೋರಾಟಕ್ಕೆ ನಾಳೆ(ಏ.12) ಬೆಳಗ್ಗೆ 11ಕ್ಕೆ ಮೈಸೂರಿನಲ್ಲಿ ಚಾಲನೆ ದೊರೆಯಲಿದೆ ಎಂದು ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ಸಮಸ್ಯೆಗೆ ಪರಿಹಾರ ಒದಗಿಸಿ, ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನಿಗದಿ ಮಾಡುವಂತೆ ಆಗ್ರಹಿಸಿ, ಕರ್ನಾಟಕ ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ, ಕಾರ್ಮಿಕ, ಮಹಿಳಾ, ವಿದ್ಯಾರ್ಥಿ–ಯುವ ಜನರ ಐಕ್ಯ ವೇದಿಕೆ ಸಂಯುಕ್ತಾಶ್ರಯದಲ್ಲಿ ರಾಜ್ಯದಾದ್ಯಂತ ಒಂದು ವಾರ ಕಾಲ ಸರಣಿ ಪ್ರತಿಭಟನಾ ಕಾರ್ಯಕ್ರಮ ಆಯೋಜಿಸಿದೆ. ರೈತರ ಪಾಲಿನ ಮರಣ ಶಾಸನವಾಗಿದ್ದ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ಆಗ್ರಹಿಸಿ ಒಂದು ವರ್ಷ ಕಾಲ ಹೊಸದಿಲ್ಲಿಯನ್ನು ರೈತರು ನಡೆಸಿದ ಐತಿಹಾಸಿಕ ಹೋರಾಟಕ್ಕೆ ಮಣಿದ ಸರ್ಕಾರ ಕಾಯ್ದೆಗಳನ್ನು ಹಿಂಪಡೆದು ರೈತರ ಬೆಳೆಗೆ ಕನಿಷ್ಠ ಬೆಲೆ ಖಾತ್ರಿಗೊಳಿಸುವ ಕಾಯ್ದೆ ರೂಪಿಸಲು ಸಮಿತಿಯೊಂದನ್ನು ರಚಿಸುವುದಾಗಿ ಲಿಖಿತ ಭರವಸೆ ನೀಡಿತ್ತು. ಆದರೆ, ಸರ್ಕಾರ ಮಾತು ಕೊಟ್ಟು ಮೂರು ತಿಂಗಳಾಯಿತು. ಮಾತು ಉಳಿಸಿ ಕೊಳ್ಳುವ ಯಾವುದೇ ಲಕ್ಷಣ ಕಾಣುತ್ತಿಲ್ಲ. ಹೀಗಾಗಿ ಸರ್ಕಾರಕ್ಕೆ ಬಿಸಿ ಮುಟ್ಟಿಸುವಸಲುವಾಗಿ ಸಂಯುಕ್ತ ಕಿಸಾನ್ ಮೋರ್ಚಾ ದೇಶದಾದ್ಯಂತ ಒಂದು ವಾರ ಹೋರಾಟ ನಡೆಸುತ್ತಿದ್ದು, ರಾಜ್ಯದಲ್ಲಿಯೂ ಹೋರಾಟ ನಡೆಯಲಿದೆ ಎಂದರು. ಏ.12ರಂದು ಬೆಳಗ್ಗೆ 11ಕ್ಕೆ ಕಲಾಮಂದಿರದಲ್ಲಿ ನಡೆಯುವ ಸಂಯುಕ್ತ ಕಿಸಾನ್ ಮೋರ್ಚಾದ ಮುಖ್ಯಸ್ಥ ಪ್ರೊ. ಯೋಗೇಂದ್ರ ಯಾದವ್ ಹೋರಾಟಕ್ಕೆ ಚಾಲನೆ ನೀಡಲಿದ್ದು, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅಧ್ಯಕ್ಷತೆ ವಹಿಸುವರು. ದಲಿತ ಸಂಘರ್ಷ ಸಮಿತಿಯ ಗುರುಪ್ರಸಾದ್ ಕೆರಗೋಡು ದಿಕ್ಸೂಚಿ ಭಾಷಣ ಮಾಡುವರು. ಕೃಷಿ ಮಾರುಕಟ್ಟೆಯ ಭವಿಷ್ಯದ ಬಗ್ಗೆ ಕರ್ನಾಟಕ ಪ್ರಾಂತ್ಯ ರೈತ ಸಂಘದ ಅಧ್ಯಕ್ಷ ಜಿ.ಸಿ.ಬೈಯಾ ರೆಡ್ಡಿ ಮತ್ತು ಎಂಎಸ್‌ಪಿ ಖಾತ್ರಿ ಕುರಿತು ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ.ಪ್ರಕಾಶ್ ಕಮ್ಮರಡಿ ವಿಚಾರ ಮಂಡನೆ ಮಾಡುವರು. ಡಾ.ಯತಿರಾಜು, ಎಸ್.ಆರ್.ಹಿರೇಮಠ್, ಮಲ್ಲಿಗೆ ಸಿರಿಮನೆ, ಚಾಮರಸ ಮಾಲೀ ಪಾಟೀಲ್, ದೇವಿ, ಮಾವಳ್ಳಿ ಶಂಕರ್, ಡಿ.ಎಸ್. ನಿರ್ವಾಣಪ್ಪ ಪಾಲ್ಗೊಳ್ಳಲಿದ್ದಾರೆ ಎಂದರು.

ಇದಕ್ಕೂ ಮುನ್ನ ನಾಳೆ ಬೆಳಗ್ಗೆ 10ಕ್ಕೆ ಸಂಸದ ಪ್ರತಾಪ್ ಸಿಂಹ ಅವರ ಕಚೇರಿಯ ಎದುರು, ಕೇಂದ್ರ ಸರ್ಕಾರ ಘೋಷಣೆ ಮಾಡಿರುವ ಎಂಎಸ್‌ಪಿ ಬೆಲೆಯಲ್ಲಿ ಕೃಷಿ ಉತ್ಪನ್ನಗಳನ್ನು ರಾಜ್ಯದಲ್ಲಿ ಕೊಳ್ಳಲಾಗುತ್ತಿದ್ದೆಯೇ, ತೋರಿಸಿ ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಲಾಗುವುದು. ಬೆಳಗ್ಗೆ 9.10ಕ್ಕೆ ಎಪಿಎಂಸಿ ಆವರಣದಲ್ಲಿ ಎಂಎಸ್‌ಪಿ ತೋರಿಸಿ ಆಗ್ರಹಿಸಿ ಸಭೆ ನಡೆಯಲಿದೆ ಎಂದು ತಿಳಿಸಿದರು.

ಸ್ವ–ರಾಜ್ ಇಂಡಿಯಾದ ಜಿಲ್ಲಾಧ್ಯಕ್ಷ ಉಗ್ರನರಸಿಂಹೇಗೌಡ ಮಾತನಾಡಿ, ಕೇಂದ್ರ ಸರ್ಕಾರ ಇಡೀ ರೈತ ಸಮುದಾಯಕ್ಕೆ ದ್ರೋಹ ಬಗೆಯುತ್ತಿದೆ. ಇತ್ತ ರಾಜ್ಯ ಸರ್ಕಾರ ತನಗೆ ಸಂಬಂಧವೇ ಇಲ್ಲವೆಂಬಂತೆ ಸಲ್ಲದ ವಿಚಾರಗಳನ್ನು ಮುಂದಿಟ್ಟು ದಿಕ್ಕು ತಪ್ಪಿಸುತ್ತಿದೆ. ಭೂಮಿ ಕಾಯ್ದೆ ಮತ್ತು ಜಾನುವಾರು ಹತ್ಯೆ ಕಾಯ್ದೆಗಳನ್ನು, ರೈತರ ಮೇಲೆ ಹೇರುತ್ತಿರುವುದಲ್ಲದೆ, ಎಪಿಎಂಸಿ ವಿನಾಶ ಕಾಯ್ದೆಯನ್ನು ಜಾರಿಗೆ ತರುತ್ತಿದೆ ಮತ್ತು ಇರುವ ಎಂಎಸ್‌ಪಿಯನ್ನೂ ಜಾರಿಗೆ ತರದೆ ರೈತ ಕುಲವನ್ನು ವಂಚಿಸುತ್ತಿದೆ. ಈ ಪ್ರಮುಖ ವಿಚಾರಗಳನ್ನು ಬಿಟ್ಟು, ಬೇಡದ ವಿಚಾರಗಳಲ್ಲಿ ಸರ್ಕಾರ ಕಾಲ ಕಳೆಯುತ್ತಿದೆ. ಕೂಡಲೇ ರೈತರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಪಿ.ಮರಂಕಯ್ಯ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ಶಂಭುಲಿಂಗಸ್ವಾಮಿ, ಸಿಪಿಐನ ಲಾ.ಜಗನ್ನಾಥ್, ಮಂಡಕಳ್ಳಿ ಮಹೇಶ್, ಕಂದೇಗಾಲ ಶ್ರೀನಿವಾಸ್, ಕಲ್ಲಹಳ್ಳಿ ಕುಮಾರ್ ಇದ್ದರು.

ಧಾರವಾಡದಲ್ಲಿ ಮುಸ್ಲಿಂ ವ್ಯಾಪಾರಿ ಅಂಗಡಿ ಧ್ವಂಸ ಪ್ರಕರಣ ಖಂಡಿಸಿ ಪ್ರತಿಭಟನೆ

ಮೈಸೂರು,ಏ.11(ಪಿಎಂ)– ಧಾರವಾಡದ ಮುಸ್ಲಿಂ ವ್ಯಾಪಾರಿಯೊಬ್ಬರ ಅಂಗಡಿ ಧ್ವಂಸ ಪ್ರಕರಣ ಖಂಡಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತಲ್ಲದೆ, ಸದರಿ ವ್ಯಾಪಾರಿ ಸಹಾಯಕ್ಕಾಗಿ ದೇಣಿಗೆ ಸಂಗ್ರಹಿಸಲಾಯಿತು.

ಮೈಸೂರಿನ ನ್ಯಾಯಾಲಯದ ಎದುರಿನ ಗಾಂಧಿ ಪುತ್ಥಳಿ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಸಾಮರಸ್ಯದ ಸಂಕೇತವಾಗಿ ಶ್ರೀರಾಮನ ಫೋಟೋ ಹಿಡಿದು, ದೇಣಿಗೆ ಸಂಗ್ರಹಿಸಿದರಲ್ಲದೆ, ಅಂಗಡಿ ಧ್ವಂಸಗೊಳಿಸಿದ ದುಷ್ಕರ್ಮಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸಾಮರಸ್ಯದಿಂದ ಕೂಡಿದ ನಾಡಾಗಿದ್ದು, ಹಿಜಾಬ್, ಹಲಾಲ್ ಮಾಂಸದ ಹೆಸರಿನಲ್ಲಿ ಇಲ್ಲಿ ಕೋಮು ದ್ವೇಷ ಸೃಷ್ಟಿಸಲಾಗುತ್ತಿದೆ. ಅದೇ ರೀತಿಯಲ್ಲಿ ಧಾರವಾಡದಲ್ಲಿ ಮುಸ್ಲಿಂ ವ್ಯಾಪಾರಿಯೊಬ್ಬರ ಮೇಲೆ ಹಲ್ಲೆ ನಡೆಸಿ, ಅವರ ಕಲ್ಲಂಗಡಿ ಹಣ್ಣಿನ ಅಂಗಡಿಯನ್ನು ಧ್ವಂಸಗೊಳಿಸಿದ್ದಾರೆ. ಈ ಎಲ್ಲವೂ ಬಿಜೆಪಿ ಸರ್ಕಾರದ ಪ್ರಯೋಜಿತ ಘಟನೆಗಳು ಎಂದು ಆರೋಪಿಸಿದರು.



ಮುಂದಿನ ಚುನಾವಣೆಯಲ್ಲಿ ಅಧಿಕಾರ ಹಿಡಿಯಲು ಬಿಜೆಪಿ, ಧರ್ಮ ಧರ್ಮಗಳ ನಡುವೆ ಕೋಮುದ್ವೇಷ ಸೃಷ್ಟಿಸುವ ಮೂಲಕ ರಾಜ್ಯದಲ್ಲಿ ಅಶಾಂತಿ ಉಂಟು ಮಾಡುತ್ತಿದೆ. ಆದ್ದರಿಂದ ರಾಷ್ಟ್ರಪತಿಗಳು ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು. ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಮುಖಂಡರಾದ ಲೋಕೇಶ್ ಕುಮಾರ್ ಮಾದಾಪುರ, ಕಲೀಂ, ಸೈಯದ್ ಜಾಹೀರುದ್ದೀನ್, ನಿಸಾರ್ ಅಹಮ್ಮದ್ ಮತ್ತಿತರರು ಪಾಲ್ಗೊಂಡಿದ್ದರು.

ಮರಣ ಹೊಂದಿದವರ ಹೆಸರಿನ ಪಡಿತರ ವಿತರಣೆ ಪ್ರಕರಣ

ಆಹಾರ ಇಲಾಖೆ ನಿರೀಕ್ಷಕ ಬಿಸಿಲಯ್ಯಗೆ ನೋಟೀಸ್

ತನಿಖೆಗೆ ಆಹಾರ ಅಧಿಕಾರಿಗಳು, ಕಚೇರಿಯ ತಾಂತ್ರಿಕ ತಂಡ ರಚನೆ



ಆಹಾರ ನಿರೀಕ್ಷಕರಿಗೆ ನೋಟೀಸ್ ಜಾರಿಗೊಳಿಸಿರುವುದು.

ಕೊಳ್ಳೇಗಾಲ,ಏ.11 (ನಾಗೇಂದ್ರಸ್ವಾಮಿ)– 'ಅನ್ನಭಾಗ್ಯಕ್ಕಿಲ್ಲ ಕಣ್ಗಾವಲು! ಬಡವರ ಅಕ್ಕಿ ಅನ್ಯರ ಪಾಲು' ಶೀರ್ಷಿಕೆಯಡಿ ಏ.10ರಂದು ಪ್ರಕಟವಾದ 'ಮೈಸೂರು ಮಿತ್ರ'ನ ವರದಿ ಆಧಾರಿಸಿ ಜಿಲ್ಲಾ ಆಹಾರ ಇಲಾಖೆ ಉಪನಿರ್ದೇಶಕ ಯೋಗಾನಂದ ಅವರು ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕಿನ ಆಹಾರ ಇಲಾಖೆ ನಿರೀಕ್ಷಕ ಬಿಸಿಲಯ್ಯಗೆ ನೋಟೀಸ್ ನೀಡಿ, ಪ್ರಕರಣದ ತನಿಖೆಗೆ ಆಹಾರ ಅಧಿಕಾರಿಗಳು, ಕಚೇರಿಯ ತಾಂತ್ರಿಕ ತಂಡ ರಚಿಸಿದ್ದಾರೆ.

ಮಿತ್ರನ ಫಲಶೃತಿ

ಪ್ರಕರಣ ಸಂಬಂಧ ಆಹಾರ ನಿರೀಕ್ಷಕ ಬಿಸಿಲಯ್ಯ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದ್ದು, ಸೋಮವಾರ ಸಂಜೆಯೊಳಗೆ ಸಮಜಾಯಿಸಿ ನೀಡದಿದ್ದರೆ, ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಉಪನಿರ್ದೇಶಕ ಯೋಗಾನಂದ ಅವರು ನೋಟೀಸ್‌ನಲ್ಲಿ ತಿಳಿಸಿದ್ದಾರೆ. ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಜಿಲ್ಲಾ ಆಹಾರ ಇಲಾಖೆ ಉಪನಿರ್ದೇಶಕ ಯೋಗಾನಂದ ಮಾತನಾಡಿ, ಪ್ರಕರಣ ಕುರಿತು ತನಿಖೆಗೆ ಸೂಚಿಸಲಾಗಿದೆ. ತನಿಖೆಗಾಗಿ ಆಹಾರ ಶಿರಸ್ತೇದಾರರು ಮತ್ತು ಇಲಾಖೆಯ ತಾಂತ್ರಿಕ ಸಹಾಯಕರ ತಂಡ ರಚಿಸಲಾಗಿದೆ. ಪಡಿತರ ವಿತರಣೆಯಲ್ಲಿನ ಲೋಪ ಹಾಗೂ ಸಂಬಂಧಿಸಿದ ಹೊಂಡರಬಾಳು ಗ್ರಾಮಕ್ಕೂ ಭೇಟಿ ನೀಡಿ ಮಾಹಿತಿ ಪಡೆದು, ವರದಿ ಸಲ್ಲಿಸಲಿದ್ದಾರೆ ಎಂದರು.

ಪಡಿತರ ದುರ್ಬಳಕೆಯನ್ನು ಯಾವ ರೀತಿ ಮಾಡಿಕೊಳ್ಳಲಾಗಿದೆ ಎಂಬಿತ್ಯಾದಿ ಕುರಿತು ಮಾಹಿತಿಯನ್ನು ಪಡೆಯಲಾಗುವುದು. ತಪ್ಪಿತಸ್ಥರ ರಕ್ಷಿಸುವ ಪ್ರಶ್ನೆಯೆ ಇಲ್ಲ? ಈಗಾಗಲೇ ನೋಟೀಸ್ ನೀಡಲಾಗಿದ್ದು, ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುವುದು. ಮಾ. 31ರಂದು ಯಾವ ಯಾವ ನ್ಯಾಯಬೆಲೆ ಅಂಗಡಿಗಳಲ್ಲಿ ನಿರೀಕ್ಷಕರ ಲಾಗಿನ್ ಮೂಲಕ ಲೋಪ ಎಸಗಲಾಗಿದೆ ಎಂಬುದರ ಕುರಿತು ಪರಿಶೀಲಿಸಲಾಗುತ್ತಿದೆ.

ಈ ಪ್ರಕರಣದ ತನಿಖೆ ಜೊತೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಇನ್ನಿತರೆ ನ್ಯಾಯ ಬೆಲೆ ಅಂಗಡಿಗಳಲ್ಲೂ ಈ ರೀತಿ ಲೋಪವಾಗಿದ್ದರೆ ಅಂಗಡಿ ಮಾಲೀಕರಿಗೆ ನೋಟೀಸ್ ನೀಡಿ, ನ್ಯಾಯ ಬೆಲೆ ಅಂಗಡಿ ಅಮಾನತ್ತಿನಲ್ಲಿಡಲಾಗುವುದು ಎಂದು ಯೋಗಾನಂದ ಅವರು ತಿಳಿಸಿದರು.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲು ಡಿಸಿಗೆ ಮನವಿ



ಅಧಿಕಾರಿ ಲಾಗಿನ್‌ನಿಂದಲೇ ಅಕ್ರಮ ಸರಿಯಲ್ಲ. ಈ ಪ್ರಕರಣದಲ್ಲಿ ಆಹಾರ ಇಲಾಖೆ ಅಧಿಕಾರಿ, ನ್ಯಾಯ ಬೆಲೆ ಅಂಗಡಿ ಇಬ್ಬರದ್ದು ತಪ್ಪಿದೆ. ಹಾಗಾಗಿ, ಪ್ರಕರಣದ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು. ಜಿಲ್ಲಾಧಿಕಾರಿಗಳು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ನಾನು ಕೂಡ ಚರ್ಚಿಸುತ್ತೇನೆ. ನಿಧನರಾದವರಿಗೆ, ಗ್ರಾಮ ತೊರೆದವರಿಗೆ ಪಡಿತರ ವಿತರಿಸಿದಂತೆ ಅಕ್ರಮ ಎಸಗಿರುವುದು ಸರಿಯಲ್ಲ, ನಿಧನರಾದವರನ್ನು ರೇಷನ್ ಕಾರ್ಡ್‌ನಿಂದ ಕೈಬಿಡಬೇಕಿತ್ತು. ಈ ನಿಟ್ಟಿನಲ್ಲಿ ನ್ಯಾಯಬೆಲೆ ಅಂಗಡಿ ಮಾಲೀಕರು ಕ್ರಮವಹಿಸಬೇಕಿತ್ತು. ಅದೇ ರೀತಿಯಲ್ಲಿ ಆಹಾರ ಇಲಾಖೆ ಪಡಿತರ ವಿತರಣೆ ವೇಳೆಯೂ ಜವಾಬ್ದಾರಿ ಮೆರೆಯಬೇಕಿತ್ತು. ಇಬ್ಬರದ್ದು ತಪ್ಪಿದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆ ನಡೆಯದಂತೆ ಹಿರಿಯ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು.

– ಆರ್.ನರೇಂದ್ರ, ಹನೂರು ಶಾಸಕರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

ಚಾಮರಾಜನಗರ, ಏ.11– ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಸೋಮವಾರ ರಾಜ್ಯ ಅಕ್ಷರ ದಾಸೋಹ ಸಂಘದ ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಯಿತು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆಯಲ್ಲಿ ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ, ಅಪರ ಜಿಲ್ಲಾಧಿಕಾರಿ ಕಾತ್ಯಾಯಿನಿ ದೇವಿ ಅವರಿಗೆ ಮನವಿ ಸಲ್ಲಿಸಿದರು.

ಶಿಕ್ಷಣ ಇಲಾಖೆಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸಿಕೊಂಡು ಬಂದಿರುವ ಅಡುಗೆಯವರನ್ನು 60 ವರ್ಷ ವಯೋಮಾನ ನೆಪವೊಡ್ಡಿ 19 ವರ್ಷ ಸೇವೆ ಸಲ್ಲಿಸಿದ ಬಡ ಮಹಿಳೆಯರನ್ನು ನಿವೃತ್ತಿ ಹೆಸರಿನಲ್ಲಿ ಅಮಾನವೀಯವಾಗಿ



ಬಿಡುಗಡೆ ಮಾಡಿರುವ ಕ್ರಮ ಖಂಡನೀಯ. 60 ವರ್ಷದ ಬಿಸಿಯೂಟ ನೌಕರರನ್ನು ಕೆಲಸದಿಂದ ಬಿಡುಗಡೆಗೊಳಿಸುವಾಗ ನಿವೃತ್ತಿ ವೇತನ ಬಿಡುಗಡೆ ಮಾಡಬೇಕು. 2022 ಮಾ.31ಕ್ಕೆ ಬಿಸಿಯೂಟ ನೌಕರರನ್ನು ಬಿಡುಗಡೆಗೊಳಿಸಲು ಹೊರಡಿಸಿರುವ ಸುತ್ತೋಲೆಯನ್ನು ಬದಲಾಯಿಸಿ 2020 ಏ. 10ಕ್ಕೆ ಮರು ಆದೇಶ ನೀಡಬೇಕು. ಬಜೆಟ್‌ನಲ್ಲಿ ಬಿಸಿಯೂಟ ನೌಕರರಿಗೆ ಹೆಚ್ಚಳ ಮಾಡಿದ ಒಂದು ಸಾವಿರ ವೇತನವನ್ನು 2022 ಜನವರಿಯಿಂದ ಅನ್ವಯಿಸಿ ಜಾರಿ ಮಾಡಬೇಕು. ಬಿಸಿಯೂಟ ಯೋಜನೆಯನ್ನು ಕಾಯಂ ಮಾಡಬೇಕು. ಕಾಯಂ ಮಾಡುವ ತನಕ 45 ಮತ್ತು 46ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸಿನಂತೆ ಕಾರ್ಮಿಕರೆಂದು ಗುರುತಿಸಬೇಕು ಎಂದು ಒತ್ತಾಯಿಸಿದರು.

ಬಿಸಿಯೂಟ ನೌಕರರನ್ನು ಕಾಯಂ ಮಾಡಿ ಶಾಸನಾತ್ಮಕ ಸವಲತ್ತುಗಳನ್ನು ಜಾರಿ ಮಾಡಬೇಕು. ಬಿಸಿಯೂಟ ನೌಕರರಿಗೆ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ವೇತನ ಪಾವತಿಯಾಗಬೇಕು. ಬಿಸಿಯೂಟ ನೌಕರರನ್ನು ನೇರವಾಗಿ ಶಿಕ್ಷಣ ಇಲಾಖೆಯಡಿಯಲ್ಲಿಯೇ ಮೇಲ್ವಿಚಾರಣೆ ನಡೆಸಬೇಕು. ಪ್ರತಿ ಶಾಲೆಯಲ್ಲಿ ಕನಿಷ್ಠ ಇಬ್ಬರು ಅಡುಗೆಯವರು ಇರಲೇಬೇಕು. ಸರ್ಕಾರ ನಿವೃತ್ತಿ ವೇತನ ನಿಗದಿ ಮಾಡುವವರೆಗೆ ಈ ತಕ್ಷಣದಲ್ಲಿ ಬಿಡುಗಡೆ ಮಾಡುವ ಬಿಸಿಯೂಟ ನೌಕರರಿಗೆ ಇಡಿಗಂಟು ಒಂದು ಲಕ್ಷ ರೂ. ನೀಡಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷೆ ಶಿವಮ್ಮ, ಪ್ರಧಾನ ಕಾರ್ಯದರ್ಶಿ ಪದ್ಮಾ, ಖಜಾಂಚಿ ತಾರಾ ಕುಮಾರಿ, ಪದಾಧಿಕಾರಿಗಳಾದ ಮಂಜುಳಾ, ಸುವರ್ಣಾ, ಶಾಂತಮ್ಮ, ಪಾರ್ವತಮ್ಮ, ರಾಜಮ್ಮ, ಮಾದೇವಮ್ಮ, ಗೀತಾ, ಲೀಲಾವತಿ, ರತ್ನಮ್ಮ, ಮೀನಾಕ್ಷಿ, ವಿಜಯಾ, ಸುಂದ್ರಮ್ಮ, ರತ್ನಮ್ಮ, ಪುಟ್ಟಸಿದ್ದಮ್ಮ, ಶಾರದಾ, ಶಿವಮ್ಮ, ಶಶಿಕಲಾ ಇದ್ದರು.

ವಿದ್ಯುತ್ ದರ ಏರಿಕೆ: ಕರ್ನಾಟಕ ಸೇನಾಪಡೆಯಿಂದ ಪ್ರತಿಭಟನೆ

ಚಾಮರಾಜನಗರ, ಏ.11– ರಾಜ್ಯದಲ್ಲಿ ವಿದ್ಯುತ್ ದರ ಏರಿಕೆ ಖಂಡಿಸಿ ನಗರದಲ್ಲಿ ಸೋಮವಾರ ಕರ್ನಾಟಕ ಸೇನಾಪಡೆ ವತಿಯಿಂದ ಪಂಜಿನ ಮೆರವಣಿಗೆ ನಡೆಸಿ, ಬಳಿಕ ಸೆಸ್ಕ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರ ನಿರಂತರವಾಗಿ ಪೆಟ್ರೋಲ್, ಡಿಸೇಲ್, ಅಡುಗೆ ಅನಿಲ, ಅಗತ್ಯ ವಸ್ತು ಬೆಲೆ ಏರಿಕೆ ಮಾಡಿದ್ದು, ಈಗ ರಾಜ್ಯ ಸರ್ಕಾರ ವಿದ್ಯುತ್ ದರ ಏರಿಕೆ



ಮಾಡುವ ಮೂಲಕ ಗಾಯದ ಮೇಲೆ ಬರೆ ಎಳೆಯುವಂತ ಕೆಲಸ ಮಾಡಿದ್ದಾರೆ. ಇದರಿಂದ ಜನಸಾಮಾನ್ಯರು ತೊಂದರೆಗೆ ಸಿಲುಕುವಂತಾಗಿದೆ. ಕೂಡಲೇ ಕೇಂದ್ರ ಮತ್ತು ರಾಜ್ಯ ಸರ್ಕಾರ ಬೆಲೆ ಏರಿಕೆಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಶಾ.ಮುರಳಿ, ಚಾ.ರಾ.ಕುಮಾರ್, ನಿಜಧ್ವನಿ ಗೋವಿಂದರಾಜು, ಗು.ಪುರುಷೋತ್ತಮ್, ಮಹೇಶ್‌ಗೌಡ, ಸಾಗರ್ ರಾವತ್, ತಾಂಡವಮೂರ್ತಿ, ವೀರಭದ್ರ, ಆಟೋ ಸುರೇಶ್, ನಂಜುಂಡಸ್ವಾಮಿ ಇದ್ದರು.

ಎಪಿಎಂಸಿ ಚುನಾವಣೆ: ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಪರ ಮತಯಾಚನೆ



ಬೇಗೂರು, ಏ.11(ಕಿರಣ್)– ಎಪಿಎಂಸಿ ಚುನಾವಣೆಯ ಬೇಗೂರು ಕ್ಷೇತ್ರದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಎಂ.ವಿರೂಪಾಕ್ಷ ಪರವಾಗಿ ಕಾಂಗ್ರೆಸ್ ಮುಖಂಡ ಹೆಚ್.ಎಂಗಣೇಶ್‌ಪ್ರಸಾದ್ ಹಾಗೂ ಕಾರ್ಯಕರ್ತರು ಬೇಗೂರು, ರಾಘವಾಪುರ, ಹೆಗ್ಗಡಹಳ್ಳಿ, ಬೆಂಡಗಳ್ಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಮತಯಾಚಿಸಿದರು.

ಗ್ರಾಮದ ಆಂಜನೇಯಸ್ವಾಮಿ ಹಾಗೂ ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಅಭ್ಯರ್ಥಿ ವಿರೂಪಾಕ್ಷ ಹಾಗೂ ಕಾಂಗ್ರೆಸ್ ಮುಖಂಡ ಗಣೇಶ್‌ಪ್ರಸಾದ್ ಗ್ರಾಮದ ಮನೆ–ಮನೆಗೆ ತೆರಳಿ ಮತಯಾಚಿಸಿದರು. ಈ ಸಂದರ್ಭದಲ್ಲಿ ಗ್ರಾಪಂನ ಉಪಾಧ್ಯಕ್ಷ ಕೆ.ಮಹದೇವಶೆಟ್ಟಿ, ಮುಖಂಡರಾದ ಪುನೀತ್, ಸದಾನಂದ, ಯ.ನಾರಾಯಣ, ಮಲ್ಲಿಕಾರ್ಜುನಸ್ವಾಮಿ, ರಾಜು, ಸುರೇಶ್, ರಮೇಶ್ ಇದ್ದರು.

ಸಾಧಕರನ್ನು ಗೌರವಿಸುವುದು ನಮ್ಮ ಹೆಗ್ಗಳಿಕೆ: ಎಂ.ರಾಮಚಂದ್ರ

ಚಾಮರಾಜನಗರ, ಏ.11– ಸಹಕಾರ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಗೈದ ಮೂವರು ಸಾಧಕರನ್ನು ಗೌರವಿಸುವುದು ನಮ್ಮ ಹೆಗ್ಗಳಿಕೆಯಾಗಿದೆ ಎಂದು ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಎಂದು ಹೇಳಿದರು.

ನಗರದ ರೋಟರಿ ಭವನದಲ್ಲಿ ಡಾ. ಎಸ್.ಪಿ.ಬಾಲಸುಬ್ರಹ್ಮಣ್ಯಂ ಗಾನ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆಯಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಹಕಾರ ಕ್ಷೇತ್ರದಲ್ಲಿ ಅವಿರತ ಸೇವೆ ಸಲ್ಲಿಸಿದ ಕೋಡಿಮೋಳೆ ರಾಜಶೇಖರ್ ಅವರಿಗೆ ಸಹಕಾರ ರತ್ನ ಪ್ರಶಸ್ತಿ ಲಭಿಸಿರುವುದು ಹಾಗೂ ಜಿಲ್ಲೆಯ ವಿದ್ಯಾರ್ಥಿಗಳಾದ ಎ.ಎಸ್.ಅಭಿಷೇಕ್ ಅವರಿಗೆ ಯುವ ವಿಜ್ಞಾನ ಪ್ರಶಸ್ತಿ ಲಭಿಸಿರುವುದು, ಮಹದೇವಸ್ವಾಮಿ ಅವರಿಗೆ ಚಿನ್ನದ ಪದಕ ಲಭಿಸಿರುವುದು ಜಿಲ್ಲೆಗೆ ಹೆಮ್ಮೆ ತಂದಿದೆ. ಈ ಮೂವರು ಸಾಧಕರು ಇನ್ನೂ ಹೆಚ್ಚು ಸಾಧನೆ ಮಾಡಲಿ ಎಂದು ಆಶಿಸಿದರು.



ಸನ್ಮಾನ ಸ್ವೀಕರಿಸಿದ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಕೋಡಿಮೋಳೆ ರಾಜಶೇಖರ್ ಮಾತನಾಡಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ ಗಾನ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ವತಿಯಿಂದ ನನ್ನನ್ನು ಸನ್ಮಾನಿಸಿರುವುದು ನನ್ನ ಜವಾಬ್ದಾರಿ ಹೆಚ್ಚು ಮಾಡಿದೆ. ಯಾವುದೇ ಕಪ್ಪುಚುಕ್ಕಿ ಇಲ್ಲದೆ ತಮಗೆ ದೊರೆತ ಸಹಕಾರಿ ಕ್ಷೇತ್ರದ ಅಧಿಕಾರವನ್ನು ಪ್ರಾಮಾಣಿಕ, ದಕ್ಷತೆಯಿಂದ ನಿರ್ವಹಿಸಿಕೊಂಡು ಬಂದಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅರ್.ಸುಂದರ್, ಪ್ರಧಾನ ಕಾರ್ಯದರ್ಶಿ ನಾರಾಯಣಪ್ರಸಾದ್, ಎಸ್‌ಸಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ವೇಣುಗೋಪಾಲ್, ವಿವೇಕಾನಂದ ಪ್ರಶಸ್ತಿ ಪುರಸ್ಕೃತ ಹೆಚ್.ಎಸ್. ಗಂಗಾಧರ, ಜಿಪಂ ಉಪಾಧ್ಯಕ್ಷ ಶಿವಕುಮಾರ್, ನಗರಸಭಾ ಸದಸ್ಯರಾದ ಸುರೇಶ್, ಕುಮುದ್ ಕೇಶವಮೂರ್ತಿ, ಬಿಜೆಪಿ ಹಾಸನ ಜಿಲ್ಲಾ ಉಸ್ತುವಾರಿ ನಿಜಗುಣರಾಜು, ರೋಟರಿ ಅಧ್ಯಕ್ಷ ಶ್ರೀನಿವಾಸ್, ನಾಗವಳ್ಳಿ ಜಾನ್, ವೇದಿಕೆಯ ಗೌರವಾಧ್ಯಕ್ಷ ಎಸ್.ಸುರೇಶ್, ಅಧ್ಯಕ್ಷ ಹೆಚ್.ಎಂ. ಶಿವಣ್ಣ, ಪ್ರಧಾನ ಕಾರ್ಯದರ್ಶಿ ಮುತ್ತುರಾಜ್, ಸಂಘಟನಾ ಕಾರ್ಯದರ್ಶಿ ಜಯರಾಜ್, ಗಾಯಕರಾದ ಜ.ಸುರೇಶ್‌ನಾಗ್, ರಾಜಣ್ಣ, ಶಿವಶಂಕರ್ ಇತರರು ಹಾಜರಿದ್ದರು.

ತಾಯಿಯ ಅಗಲಿಕೆಯ ನೋವಿನ ನಡುವೆಯೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ವಿದ್ಯಾರ್ಥಿ

ಹನೂರು, ಏ.11(ಸೋಮು)– ಮಕ್ಕಳಿಗೆ ತಾಯಿಯೇ ಸರ್ವಸ್ವ, ಆದರೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ದಿನದಂದೇ ತಾಯಿ ಸಾವನ್ನಪ್ಪಿದ್ದು, ಈ ಅಗಲಿಕೆ ನೋವಿನ ನಡುವೆಯೂ ವಿದ್ಯಾರ್ಥಿಯೋರ್ವ ಪರೀಕ್ಷೆ ಬರೆದಿರುವ ಮನಕಲಕುವ ಘಟನೆ ಹನೂರಿನಲ್ಲಿ ಸೋಮವಾರ ನಡೆದಿದೆ.



ವಿದ್ಯಾರ್ಥಿ ಸಂಜಯ್

ಪಟ್ಟಣದ ಮಾರಿಗುಡಿ ಬೀದಿಯ ವಿದ್ಯಾರ್ಥಿ ಸಂಜಯ್ ತನ್ನ ತಾಯಿ ಅಗಲಿಕೆ ನಡುವೆಯೂ ಪರೀಕ್ಷೆ ಬರೆದಿದ್ದಾನೆ. ಈತ ನಾರಾಯಣ್ ಮತ್ತು ಆಶಾರಾಣಿ ಯವರ ಪುತ್ರ ಸಂಜಯ್‌ರ ತಾಯಿ ಕಳೆದ ಹಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದು ಸೋಮವಾರ ಮುಂಜಾನೆ ಅಸುನೀಗಿದ್ದಾರೆ. ತಾಯಿಯ ಸಾವಿನಿಂದ ದುಃಖಿತನಾಗಿದ್ದ ಸಂಜಯ್‌ಗೆ ಶಾಲೆಯ ಶಿಕ್ಷಕರು, ಹಿರಿಯರ ಸಲಹೆ ಹಾಗೂ ತಾಯಿ ಕಂಡಿದ್ದ ಆಸೆಯಂತೆ ಇಂದು ಎಸ್‌ಎಸ್‌ಎಲ್‌ಸಿಯ ಅಂತಿಮ ವಿಷಯವಾದ ವಿಜ್ಞಾನ ಪರೀಕ್ಷೆಯನ್ನು ಕ್ರಿಸ್ತರಾಜ ವಿದ್ಯಾಸಂಸ್ಥೆಯ ಕೇಂದ್ರಕ್ಕೆ ಬಂದು ಬರೆದಿದ್ದಾನೆ.

ಪರೀಕ್ಷೆ ಮುಕ್ತಾಯವಾದ ಬಳಿಕ ವಿದ್ಯಾರ್ಥಿ ಸಂಜಯ್ ಆಗಮಿಸಿ ತಾಯಿಯ ಅಂತಿಮ ವಿಧಿವಿಧಾನಗಳನ್ನು ಪೂರೈಸಿದನು. ಈ ಘಟನೆ ಹನೂರು ಪಟ್ಟಣವಾಸಿಗಳನ್ನು ಕಂಬನಿ ಮಿಡಿಯುವಂತೆ ಮಾಡಿತ್ತು.

ಏ.20ಕ್ಕೆ ತಾಲೂಕು ಮಟ್ಟದ ಆರೋಗ್ಯ ಮೇಳ

ಮಡಿಕೇರಿ ಏ.11–ಜಿಲ್ಲೆಯಲ್ಲಿ ತಾಲೂಕು ಮಟ್ಟದ ಆರೋಗ್ಯ ಮೇಳವನ್ನು ಏ.20ರಂದು ನಡೆಸಲು ಉದ್ದೇಶಿಸಿದ್ದು, ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ನಿರ್ದೇಶನ ನೀಡಿದರು.



ತಮ್ಮ ಕಚೇರಿ ಸಭಾಂಗಣದಲ್ಲಿ ತಾಲೂಕು ಮಟ್ಟದ ಆರೋಗ್ಯ ಮೇಳಕ್ಕೆ ಸಂಬಂಧಿಸಿದಂತೆ ಸೋಮವಾರ ನಡೆದ ಜಿಲ್ಲಾ ಸಮನ್ವಯ ಸಮಿತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆರೋಗ್ಯ ಮೇಳ ಸಂಬಂಧ ತಾಲೂಕು ಮಟ್ಟದಲ್ಲಿಯೂ ಮಾಹಿತಿ ನೀಡಬೇಕು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎಲ್ಲಾ ಹಂತದ ವೈದ್ಯಾಧಿಕಾರಿಗಳು ತಂಡವಾಗಿ ಕಾರ್ಯ ನಿರ್ವಹಿಸಬೇಕು. ಆಯುಷ್ಮಾನ್ ಆರೋಗ್ಯ ಕಾರ್ಯಕ್ರಮ ದಡಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು ಹಾಗೂ ಪೌರಕಾರ್ಮಿಕರಿಗೆ ಆಯುಷ್ಮಾನ್ ಆರೋಗ್ಯ ಕಾರ್ಡ್ ವಿತರಿಸಲು ಕ್ರಮ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.


ಆರೋಗ್ಯಕ್ಕೆ ಸಂಬಂಧಿಸಿದಂತೆ ಇತರೆ ಇಲಾಖೆಗಳ ಯೋಜನೆಗಳಿದ್ದಲ್ಲಿ ಜನರಿಗೆ ಅರಿವು ಮೂಡಿಸುವ ದೃಷ್ಟಿಯಿಂದ ಆರೋಗ್ಯ ಮೇಳದಲ್ಲಿ ಮಳಿಗೆ ತೆರೆಯಲು ಅವಕಾಶ ಕಲ್ಪಿಸಬೇಕು ಹಾಗೂ ಪೋಷಣಾ ಅಭಿಯಾನಕ್ಕೆ ಸಂಬಂಧಿಸಿದಂತೆ ಮಕ್ಕಳಿಗೆ ಪೌಷ್ಟಿಕ ಆಹಾರದ ಬಗ್ಗೆ ಮಾಹಿತಿ ಒದಗಿಸುವ ಮಳಿಗೆ ತೆರೆಯಲು ಸೂಕ್ತ ಕ್ರಮ ವಹಿಸಬೇಕು. ಮೇಳದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವುದರಿಂದ ಮೂಲ ಸೌಕರ್ಯ ಒದಗಿಸಬೇಕು. ಈ ಸಂಬಂಧ ಇತರೆ ಇಲಾಖೆಗಳ ಸಹಕಾರ ಪಡೆಯಬೇಕು ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಲಹೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಆರ್.ವೆಂಕಟೇಶ್ ಮಾತನಾಡಿ, ಏ.18 ರಿಂದ 22ರೊಳಗೆ ಆರೋಗ್ಯ ಮೇಳ ಆಯೋಜಿಸಲು ನಿರ್ದೇಶನ ನೀಡಲಾಗಿದೆ. ಆ ನಿಟ್ಟಿನಲ್ಲಿ ಏ.20ರಂದು ನಗರದ ಒಳಾಂಗಣ ಕ್ರೀಡಾಂಗಣ ಬಳಿಯ ಫುಟ್‌ಬಾಲ್ ಮೈದಾನ(ಡಿಡಿಪಿಐ ಕಚೇರಿ ಎದುರು), ಕುಶಾಲನಗರದ ಮತ್ತು ಗೋಣಿಕೊಪ್ಪದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ತಾಲೂಕು ಮಟ್ಟದ ಆರೋಗ್ಯ ಮೇಳ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ ಎಂದರು.

ಆರೋಗ್ಯ ಮೇಳದಲ್ಲಿ ಹೃದಯ ಸಂಬಂಧಿ ಕಾಯಿಲೆ, ಕ್ಯಾನ್ಸರ್, ರಕ್ತದೊತ್ತಡ ಸೇರಿದಂತೆ ಎಲ್ಲಾ ರೀತಿಯ ಆರೋಗ್ಯ ತಪಾಸಣೆಯನ್ನು ಆರೋಗ್ಯ ಮೇಳದಲ್ಲಿ ನಡೆಸಲಾಗುವುದು ಹಾಗೂ ವಿವಿಧ ಕಾಯಿಲೆಗಳಿಗೆ ಉಚಿತ ಚಿಕಿತ್ಸೆ ಹಾಗೂ ಔಷಧಗಳನ್ನು ಒದಗಿಸಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಾಹಿತಿ ನೀಡಿದರು.

ಜಿಪಂ ಉಪಕಾರ್ಯದರ್ಶಿ ಲಕ್ಷ್ಮಿ, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಪ್ರಾಂಶುಪಾಲ ಡಾ.ವಿಶಾಲ್ ಕುಮಾರ್, ಆರ್‌ಸಿಹೆಚ್ ಅಧಿಕಾರಿ ಡಾ.ಗೋಪಿನಾಥ್, ಕುಟುಂಬ ಕಲ್ಯಾಣಾಧಿಕಾರಿ ಡಾ.ಆನಂದ್, ಪೌರಾಯುಕ್ತ ಎಸ್.ವಿ. ರಾಮದಾಸ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕ ಗೌರವ್ ಕುಮಾರ್ ಶೆಟ್ಟಿ ಇತರರಿದ್ದರು.

ಕಾಡಾನೆ ಸಾವು



ಮಡಿಕೇರಿ, ಏ.11– ಶ್ರೀಮಂಗಲ ಬಿರುನಾಣಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪರಕಟಕೇರಿ ಗ್ರಾಮದಲ್ಲಿ ಸೋಮವಾರ ಕಾಡಾನೆಯೊಂದು ಸಾವಿಗೀಡಾಗಿದೆ.

ತೋಟದ ನಡುವೆ ಇರುವ ಗ್ರಾಮದ ಕಚ್ಚಾ ರಸ್ತೆಯಲ್ಲಿ ಹೆಣ್ಣು ಕಾಡಾನೆ ವಯಸ್ಸಾಗಿ ಸ್ವಾಭಾವಿಕವಾಗಿ ಸಾವಿಗೀಡಾಗಿದೆ ಎಂದು ಬ್ರಹ್ಮಗಿರಿ ಅಭಯಾರಣ್ಯ ವ್ಯಾಪ್ತಿಯ ಶ್ರೀಮಂಗಲ ವಲಯ ಅರಣ್ಯಾಧಿಕಾರಿ ವೀರೇಂದ್ರ ಮರಿಬಸಣ್ಣವರ್ ಮಾಹಿತಿ ನೀಡಿದ್ದಾರೆ. ಬ್ರಹ್ಮಗಿರಿ ಅಭಯಾರಣ್ಯ ವ್ಯಾಪ್ತಿಯಿಂದ ಪರಕಟಕೇರಿ ಗ್ರಾಮಕ್ಕೆ ಕಾಡಾನೆ ಬಂದಿದ್ದು, ಇಲ್ಲಿ ನಿತ್ರಾಣಗೊಂಡ ಸಾವಿಗೀಡಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಸ್ಥಳಕ್ಕಾಗಮಿಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಆವಂಡಿ-ಮುಕ್ಕೋಡ್ಲು ಸೇತುವೆ ನಿರ್ಮಾಣ ಕಾಮಗಾರಿಗೆ ಚಾಲನೆ

1.5 ಕೋಟಿ ರೂ. ಅನುದಾನ ಬಿಡುಗಡೆ

ಮಡಿಕೇರಿ,ಏ.11– ಮಡಿಕೇರಿ ತಾಲೂಕಿನ ಆವಂಡಿ–ಮುಕ್ಕೋಡ್ಲು ಸೇತುವೆ ನಿರ್ಮಾಣಕ್ಕೆ ಸರ್ಕಾರದಿಂದ 1.50 ಕೋಟಿ ರೂ. ಬಿಡುಗಡೆಯಾಗಿದ್ದು, ಇಂದು ಕಾಮಗಾರಿಗೆ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮಡಿಕೇರಿ ಕ್ಷೇತ್ರದ ಗ್ರಾಮಗಳ ಅಭಿವೃದ್ಧಿ ಮತ್ತು ಜನಪರ ಕಾರ್ಯದಲ್ಲಿ ರಾಜಕೀಯ ಮಾಡುವುದಿಲ್ಲ. ಹೆಚ್ಚಿನ ಅನುದಾನಕ್ಕಾಗಿ ಕೋರಿ ಕೊಂಡ ಹಿನ್ನೆಲೆ ಸರ್ಕಾರ ಸ್ಪಂದಿಸಿ ಹಣ ನೀಡಿದೆ ಎಂದರು.

ಇತರ ಜಿಲ್ಲೆಗಳಿಗೆ ಹೋಲಿಸಿದರೆ ಇಲ್ಲಿನ ರಸ್ತೆಗಳು ಉತ್ತಮವಾಗಿವೆ. ರಸ್ತೆಗಳ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗಿದೆ ಎಂದ ಶಾಸಕರು, ಗ್ರಾಮಸ್ಥರು ಸೇತುವೆ ಕಾಮಗಾರಿಯನ್ನು ಪರಿಶೀಲಿಸುತ್ತಿರಬೇಕು. ಕಳಪೆ ಗುಣಮಟ್ಟ ಕಂಡು ಬಂದರೆ ನಮಗೆ ದೂರು ನೀಡಬೇಕು ಎಂದು ಮನವಿ ಮಾಡಿದರು. ವಿಧಾನ ಪರಿಷತ್ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಮಾತನಾಡಿ, ಈ ಭಾಗದ ಗ್ರಾಮಸ್ಥರ ಹಲವು ದಿನಗಳ ಬೇಡಿಕೆ ಈಡೇರಿದಂತಾಗಿದೆ. ಇತ್ತೀಚೆಗೆ ನಡೆದ ವಿಧಾನ ಪರಿಷತ್ ಅಧಿವೇಶನದಲ್ಲಿ



ಸೇತುವೆ ನಿರ್ಮಿಸಲು ಅನುದಾನ ನೀಡುವಂತೆ ಮನವಿ ಮಾಡಿಕೊಂಡಿದ್ದೆ. ಸಚಿವರಾದ ವಿ.ಸೋಮಣ್ಣ, ಸಿ.ಸಿ.ಪಾಟೀಲ್ ಹಾಗೂ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಅವರು ಸೂಕ್ತ ರೀತಿಯಲ್ಲಿ ಸ್ಪಂದಿಸಿ ಸಹಕಾರ ನೀಡಿದ ಕಾರಣ 1.5 ಕೋಟಿ ರೂ. ಬಿಡುಗಡೆಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಜನಪ್ರತಿನಿಧಿಗಳಿಗೆ ಕೆಲಸ ಮಾಡುವ ಇಚ್ಛಾಶಕ್ತಿ ಇರಬೇಕು. ಮೊದಲು ಅಭಿವೃದ್ಧಿ, ನಂತರ ರಾಜಕಾರಣ ಎಂದ ವೀಣಾ ಅಚ್ಚಯ್ಯ ಊರವರ ಕನಸು ಇಂದು ನನಸಾಗಿದ್ದು, ಗುಣಮಟ್ಟದ ಕಾಮಗಾರಿಯೊಂದಿಗೆ ಸೇತುವೆ ಶೀಘ್ರ ನಿರ್ಮಾಣಗೊಳ್ಳಲಿದೆ ಎಂದು ತಿಳಿಸಿದರು.

ಮಕ್ಕಂದೂರು ಗಾಪಂ ಅಧ್ಯಕ್ಷ ಶ್ಯಾಂ ಸುಬ್ಬಯ್ಯ, ಉಪಾಧ್ಯಕ್ಷರು ಹಾಗೂ ಸದಸ್ಯರು, ಪ್ರಮುಖರಾದ ಶಾಂತೆಯಂಡ ಅಚ್ಚಯ್ಯ, ಅಂಚೆಟ್ಟಿರ ಮನುಮುದ್ದಪ್ಪ ಸೇರಿದಂತೆ ಗ್ರಾಮಸ್ಥರಿದ್ದರು.

ಎಪಿಎಂಸಿ ಚುನಾವಣೆ; ಮತದಾರರ ಪಟ್ಟಿ ಪ್ರಕಟ

ಮಡಿಕೇರಿ, ಏ.11–ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ ನಡೆಸುವ ಸಂಬಂಧ ಪ್ರಾರಂಭಿಕ ಮತದಾರರ ಪಟ್ಟಿಯನ್ನು ಈಗಾಗಲೇ ಮಡಿಕೇರಿ ತಾಲೂಕು ಕಚೇರಿ, ಕೃಷಿ ಉತ್ಪನ್ನ ಮಾರು ಕಟ್ಟೆ ಹಾಗೂ ಎಲ್ಲಾ ಹೋಬಳಿಗಳ ನಾಡ ಕಚೇರಿಯಲ್ಲಿ ಪ್ರಕಟಿಸಲಾಗಿದೆ. ಪಟ್ಟಿಯಲ್ಲಿ ಆಕ್ಷೇಪಣೆಗಳು ಇದ್ದಲ್ಲಿ ಏ.22ರೊಳಗೆ ತಮ್ಮ ತಮ್ಮ ಗ್ರಾಮ ಲೆಕ್ಕಾಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ತಹಸೀಲ್ದಾರ್ ಪಿ.ಎಸ್.ಮಹೇಶ್ ತಿಳಿಸಿದ್ದಾರೆ.

ಗಣೇಶ್ ನಿಧನ

ಸೋಮವಾರಪೇಟೆ,ಏ.11–ಇಲ್ಲಿಗೆ ಸಮೀಪದ ಬಜೆಗುಂಡಿ ಗ್ರಾಮದ ಡಿ.ಎಂ.ಗಣೇಶ್(75) ಸೋಮವಾರ ನಿಧನರಾದರು. ಮೃತರು ಪತ್ನಿ, ಐವರು ಪುತ್ರರು



ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬಜೆಗುಂಡಿ ಗ್ರಾಮದ ರುದ್ರಭೂಮಿಯಲ್ಲಿ ನಡೆಯಿತು.

ದೇವರಕೋಲ ಸಂದರ್ಭ ಕೌಟುಂಬಿಕ ಕಲಹ

ವ್ಯಕ್ತಿಯೋರ್ವ ಹಾರಿಸಿದ ಗುಂಡಿಗೆ ಕುಟುಂಬದ ಮೂವರಿಗೆ ಗಾಯ

ಸೋಮವಾರಪೇಟೆ, ಏ.11– ದೇವರಕೋಲ ನಡೆಯುವ ಸಂದರ್ಭ ನಡೆದ ಜಗಳ ವಿಕೋಪಕ್ಕೆ ತಿರುಗಿ ವ್ಯಕ್ತಿಯೋರ್ವ ಗುಂಡು ಹಾರಿಸಿದ ಪರಿಣಾಮ ಮೂವರು



ಗುಂಡು ಹಾರಿಸಿದ ವೀರೇಶ್

ಗಾಯಗೊಂಡಿರುವ ಘಟನೆ ನಗರಳ್ಳಿ ಗ್ರಾಮದಲ್ಲಿ ಸೋಮವಾರ ಸಂಜೆ ನಡೆದಿದೆ.

ನಗರಳ್ಳಿ ಗ್ರಾಮ ನಿವಾಸಿ ಜಿ.ಡಿ.ವೀರೇಶ್ ಎಂಬಾತ ರಿವಾಲ್ವರ್‌ನಿಂದ ಹಾರಿಸಿದ ಗುಂಡಿಗೆ, ಕುಟುಂಬ ಸದಸ್ಯರಾದ ಮಹೇಶ್, ನಂದೀಶ್, ಚಂದ್ರಶೇಖರ್ ಗಾಯಗೊಂಡಿದ್ದಾರೆ.

ನಗರಳ್ಳಿ ಗ್ರಾಮದಲ್ಲಿ 5 ಕುಟುಂಬಸ್ಥರು ಸೇರಿ 12 ವರ್ಷಗಳ ನಂತರ ಕೋಲ ಪೂಜೆ ನಡೆಸಿದ್ದಾರೆ. ಭಾನುವಾರ ಮತ್ತು ಸೋಮವಾರ ಪೂಜೆ ನಡೆದಿದೆ. ಸೋಮವಾರ ಸಂಜೆ ತೆರೆ ಕಟ್ಟುವುದು ಹಾಗೂ ಹಣದ ವಿಷಯದಲ್ಲಿ ವೀರೇಶ್‌ನಿಗೂ ಕುಟುಂಬ ಸದಸ್ಯರಿಗೂ ಜಗಳವಾಗಿದೆ. ವೀರೇಶ್ ಏಕಾಏಕಿ ರಿವಾಲ್ವರ್‌ನಿಂದ ಗುಂಡು ಹಾರಿಸಿದ್ದಾರೆ. ಪರಿಣಾಮ ಮಹೇಶ್ ಅವರಿಗೆ ಸೊಂಟದ ಕೆಳಭಾಗಕ್ಕೆ ಗುಂಡೇಟು ತಗುಲಿದೆ. ಇನ್ನಿಬ್ಬರ ಕೈಗೆ ಗುಂಡೇಟು ತಗುಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗುಂಡು ಹಾರಿಸಿದ ವೀರೇಶ್ ಮೇಲೂ ಹಲ್ಲೆ ನಡೆದಿರುವ ಗಾಯಗಳಾಗಿವೆ. ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ಸೇರಿಸಲಾಗಿದೆ. ಗಾಯಾಳು ಚಂದ್ರಶೇಖರ್ ಹೇಳಿಕೆ ಮೇರೆಗೆ ಸೋಮವಾರಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ. ತನಿಖೆಯ ನಂತರ ಸತ್ಯಾಂಶ ತಿಳಿಯಬೇಕಿದೆ.



ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ

ವಿರಾಜಪೇಟೆ, ಏ.11–ಗ್ರಾಮೀಣ ಭಾಗದ ರಸ್ತೆಗಳು ದುಸ್ಥಿತಿಯಲ್ಲಿದ್ದು, ಎಲ್ಲಾ ರಸ್ತೆಗಳ ಅಭಿವೃದ್ಧಿಯಾಗಬೇಕಿದೆ ಎಂದು ವಿಧಾನ ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ ಹೇಳಿದರು.

ವಿರಾಜಪೇಟೆ ಸಮೀಪದ ಆರ್ಜಿ ಗ್ರಾಪಂ ಬಳಿಯ ಬಲ್ಲಚಂಡ ಕುಟುಂಬಸ್ತರ ಮನೆ ಸಾರ್ವಜನಿಕ ರಸ್ತೆಗೆ 4 ಲಕ್ಷ ರೂ. ಅನುದಾನದಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ ಬಳಿಕ ಅವರು ಮಾತನಾಡಿದರು. ಕೊಡಗಿನಲ್ಲಿ ಕಳೆದ 2 ವರ್ಷಗಳಿಂದ ಭಾರೀ ಮಳೆಯಿಂದಾಗಿ ಗ್ರಾಮೀಣ ಭಾಗದ ರಸ್ತೆಗಳು ದುಸ್ಥಿತಿಯಲ್ಲಿದ್ದು, ಎಲ್ಲಾ ರಸ್ತೆಗಳ ಅಭಿವೃದ್ಧಿಯಾಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಆರ್ಜಿ ಪಂಚಾಯಿತಿ ಉಪಾಧ್ಯಕ್ಷ ಕೆ.ಎಸ್.ಉಪೇಂದ್ರ, ಸದಸ್ಯರಾದ ಟಿ.ಜೋಸೆಫ್, ಸುನಿತಾ ಹರಿದಾಸ್, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ ಸ್ಥಳಿಯ ಗ್ರಾಮಸ್ಥರಾದ ಬಲ್ಲಡಿಚಂಡ ನಾಣಯ್ಯ, ಬಲ್ಲಚಂಡ ಸೋಮಣ್ಣ, ಮೇವಡ ರಾಯ್ ಪೊನ್ನಣ್ಣ, ಗುತ್ತಿಗೆದಾರ ಎ.ಹರೀಶ್ ಇದ್ದರು.

ಕೊಡಗಿಗೆ ಕ್ರೀಡಾ ವಿವಿ, ಶೂಟಿಂಗ್ ಅಕಾಡೆಮಿ ಅಗತ್ಯ: ಶಿವಕುಮಾರ್ ನಾಣಯ್ಯ

ಮಡಿಕೇರಿ ಏ.11–ಅತಿ ಹೆಚ್ಚು ಕ್ರೀಡಾ ಪ್ರತಿಭೆಗಳಿರುವ ಕೊಡಗು ಜಿಲ್ಲೆಗೆ ಕ್ರೀಡಾ ವಿಶ್ವವಿದ್ಯಾನಿಲಯ ಹಾಗೂ ಶೂಟಿಂಗ್ ಅಕಾಡೆಮಿಯ ಅಗತ್ಯವಿದೆ ಎಂದು ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸದಸ್ಯ ತೇಲಪಂಡ ಶಿವಕುಮಾರ್ ನಾಣಯ್ಯ ಅಭಿಪ್ರಾಯಪಟ್ಟರು.

ನಾಪೋಕ್ಲುವಿನಲ್ಲಿ ಕುಲ್ಲೇಟಿರ ಐನ್‌ಮನೆಯಲ್ಲಿ ನಡೆದ ಕುಲ್ಲೇಟಿರ ಭಗವತಿ ಫಂಡ್‌ನ 109ನೇ ಸಭೆಯಲ್ಲಿ ಕುಲ್ಲೇಟಿರ ಹಾಕಿ ಸಮಿತಿಯಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ವೀರರ ನಾಡು ಕೊಡಗಿನ ಜನರಲ್ಲಿ ಕ್ರೀಡಾ ಪ್ರತಿಭೆ ರಕ್ತಗತವಾಗಿ ಬಂದಿದ್ದು, ಯುವ ಸಮೂಹವನ್ನು ಪ್ರೋತ್ಸಾಹಿಸುವ ಅಗತ್ಯವಿದೆ. ಹಾಕಿ ಮಾತ್ರವಲ್ಲದೆ ಶೂಟಿಂಗ್ ಸ್ಪರ್ಧೆಗಳಲ್ಲೂ ಆಸಕ್ತಿ ಹೆಚ್ಚಾಗುತ್ತಿದ್ದು, ಕ್ರೀಡಾ ವಿಶ್ವ ವಿದ್ಯಾನಿಲಯ ಮತ್ತು ಶೂಟಿಂಗ್ ಅಕಾಡೆಮಿ ಜಿಲ್ಲೆಯಲ್ಲೇ ಸ್ಥಾಪನೆಯಾದರೆ ಸ್ಥಳೀಯ ಪ್ರತಿಭೆಗಳಿಗೆ ಹೆಚ್ಚು ಸಹಕಾರಿಯಾಗಲಿದೆ.



ಈ ಎರಡು ಯೋಜನೆಗಳ ಬಗ್ಗೆ ತಾವು ಹೆಚ್ಚು ಆಸಕ್ತರಾಗಿದ್ದು, ಸರ್ಕಾರದೊಂದಿಗೆ ವ್ಯವಹರಿಸಿ ಅನುಷ್ಠಾನಕ್ಕೆ ಶ್ರಮಿಸುವುದಾಗಿ ಶಿವಕುಮಾರ್ ನಾಣಯ್ಯ ಭರವಸೆ ನೀಡಿದರು.

ಕುಲ್ಲೇಟಿರ ಹಾಕಿ ಹಬ್ಬ ಮುಗಿದು ನಾಲ್ಕು ವರ್ಷಗಳೇ ಕಳೆದರೂ ಅನುದಾನ ಬಿಡುಗಡೆಯಾಗದೇ ಇದ್ದಾಗ ಮುಖ್ಯಮಂತ್ರಿಗಳು ಹಾಗೂ ಸಂಬಂಧಿಸಿದ ಸಚಿವರಲ್ಲಿ ನಿರಂತರವಾಗಿ ಮನವಿ ಮಾಡಿಕೊಂಡ ನಂತರ 40 ಲಕ್ಷ ರೂ. ದೊರೆಯಿತು ಎಂದು ನೆನಪಿಸಿಕೊಂಡರು.

ಕುಲ್ಲೇಟಿರ ಭಗವತಿ ಫಂಡ್‌ನ ಅಧ್ಯಕ್ಷ ಕುಲ್ಲೇಟಿರ ರಾಜೇಶ್ ತಮ್ಮಯ್ಯ ಹಾಗೂ ಹಾಕಿ ಸಮಿತಿ ಅಧ್ಯಕ್ಷ ಕುಲ್ಲೇಟಿರ ಶಂಭು ಮಂದಪ್ಪ ಅವರು ಹಾಕಿ ಹಬ್ಬದ ಅನುದಾನವನ್ನು ಬಿಡುಗಡೆ ಮಾಡಿಸಿಕೊಟ್ಟ ತೇಲಪಂಡ ಶಿವಕುಮಾರ್ ನಾಣಯ್ಯ ಅವರ ಪರಿಶ್ರಮವನ್ನು ಶ್ಲಾಘಿಸಿದರು.

ಸನ್ಮಾನ: ಸುಮಾರು 4 ವರ್ಷಗಳ ನಂತರ ಕುಲ್ಲೇಟಿರ ಹಾಕಿ ಹಬ್ಬದ ಅನುದಾನ ಸರ್ಕಾರದಿಂದ ಬಿಡುಗಡೆಯಾಗಲು ಕಾರಣಕರ್ತರಾದ ತೇಲಪಂಡ ಶಿವಕುಮಾರ್ ನಾಣಯ್ಯ ಅವರನ್ನು ಕುಲ್ಲೇಟಿರ ಭಗವತಿ ಫಂಡ್ ಮತ್ತು ಹಾಕಿ ಸಮಿತಿ ಸನ್ಮಾನಿಸಲಾಯಿತು. ಕುಲ್ಲೇಟಿರ ಭಗವತಿ ಫಂಡ್‌ನ ಕಾರ್ಯದರ್ಶಿ ಕುಲ್ಲೇಟಿರ ಲೋಕೇಶ್, ಪಟ್ಟೆದಾರರಾದ ಕುಲ್ಲೇಟಿರ ಗುರುವಪ್ಪ ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಪಾಲಿಕೆ ರಚನೆ ಪ್ರಕ್ರಿಯೆಗೆ ಚಾಲನೆ

ನಗರ ಪಾಲಿಕೆ ವ್ಯಾಪ್ತಿ ವಿಸ್ತರಣೆ ಸಂಬಂಧ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಕೈಗೊಂಡು ಪ್ರಸ್ತಾವನೆ ಸಲ್ಲಿಸಬೇಕಿದೆ ಎಂದು ತಿಳಿಸಿದರು.

ತ್ವರಿತವಾಗಿ ಆಗಲಿ: ಸಂಸದ ಪ್ರತಾಪ್ ಸಿಂಹ ಮಾತನಾಡಿ, ಸಮಸ್ಯೆಗಳಿಗೆ ಕೊನೆಯಿರುವುದಿಲ್ಲ, ಆದರೆ ಅವುಗಳನ್ನು ಹಂತಹಂತವಾಗಿ ಪರಿಹರಿಸಿಕೊಂಡು ಮುಂದುವರೆಯಬೇಕು. ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಸುಮ್ಮನಾದರೆ ಅಭಿವೃದ್ಧಿ ಕಷ್ಟಸಾಧ್ಯ. ನೂತನ ಸ್ಥಳೀಯ ಸಂಸ್ಥೆಗಳು ಹಾಗೂ ಚುನಾಯಿತ ಆಡಳಿತ ಮಂಡಳಿ ಇರದ ಗ್ರಾಪಂಗಳನ್ನು ಪಾಲಿಕೆ ವ್ಯಾಪ್ತಿಗೆ ಸೇರಿಸಿಕೊಳ್ಳೋಣ. ಪಾಲಿಕೆ ವ್ಯಾಪ್ತಿಗೆ ಹೆಚ್ಚು ಕೈಗಾರಿಕಾ ಪ್ರದೇಶ ಒಳಪಡುವುದರಿಂದ ಹೆಚ್ಚು ಆದಾಯ ಸಂಗ್ರಹವಾಗುತ್ತದೆ. ಆ ಮೂಲಕ ಉತ್ತಮ ನಿರ್ವಹಣೆ ಹಾಗೂ ಅಭಿವೃದ್ಧಿ ಸಾಧ್ಯವಿದೆ. ಹಾಗಾಗಿ ಬೃಹತ್ ಮೈಸೂರು ನಗರ ಪಾಲಿಕೆ ರಚನೆಗೆ ಸಹಮತಿಸುವ ಮೂಲಕ ಒಮ್ಮತದ ಹೆಜ್ಜೆ ಇಡೋಣ ಎಂದು ಮನವಿ ಮಾಡಿದರು.

ಈ ಹಂತದಲ್ಲೇ ಪೆರಿಫೆರಲ್ ರಿಂಗ್ ರಸ್ತೆ ಯೋಜನೆ ಬಗ್ಗೆ ಮುಡಾ ಸಮರ್ಪಕ ಮಾಹಿತಿ ನೀಡುವುದು ಉತ್ತಮ. ರಿಂಗ್ ರಸ್ತೆ ವ್ಯಾಪ್ತಿ, ನಕ್ಷೆ ಇನ್ನಿತರ ಮಾಹಿತಿ ಅಗತ್ಯವಾಗಿದೆ. ಯೋಜನೆಗೆ ಬೇಕಾದ ಭೂಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದರೆ ಸಮಸ್ಯೆಯಾಗುತ್ತದೆ. ಮೊದಲೇ ಸ್ಥಳವನ್ನು ಗುರುತಿಸಿ, ಕಾಯ್ದುಕೊಳ್ಳುವ ಕೆಲಸವಾಗಬೇಕು. ಮೂರ್‍ನಾಲ್ಕು ರಾಷ್ಟ್ರೀಯ ಹೆದ್ದಾರಿಗಳು ರಿಂಗ್ ರಸ್ತೆ ಸಂಪರ್ಕಿಸುವುದರಿಂದ ಕೇಂದ್ರ ಸರ್ಕಾರದ ನೆರವು ಪಡೆಯುವ ಅವಕಾಶವೂ ಇದೆ ಎಂದು ತಿಳಿಸಿದರು.

ಜಾಗದ ಬೆಲೆ ಜಿಗಿಯುತ್ತದೆ: ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಮಾತನಾಡಿ, ಬೃಹತ್ ಮೈಸೂರು ನಗರ ಪಾಲಿಕೆ ರಚನೆಗೆ ಆಕ್ಷೇಪವಿಲ್ಲ. ಆದರೆ ಈ ಘೋಷಣೆಯ ಮೊದಲ ಪರಿಣಾಮವಾಗಿ ಈ ವ್ಯಾಪ್ತಿಗೆ ಒಳಪಡುವಂತಹ ಪ್ರದೇಶಗಳಲ್ಲಿ ಜಾಗದ ಬೆಲೆ ಏರಿಕೆಯಾಗುತ್ತದೆ. ಆದ್ದರಿಂದ ಸಾಧಕ–ಬಾಧಕಗಳ ಬಗ್ಗೆ ಕೂಲಂಕುಷವಾಗಿ ಚರ್ಚೆಯಾಗಬೇಕು. ಸೀವೇಜ್, ಗಾರ್ಬೆಜ್ ಸಂಸ್ಕರಣೆ ವ್ಯವಸ್ಥೆ ಬಗ್ಗೆ ಚಿಂತನೆ ನಡೆಯಬೇಕು. ಸಾರಿಗೆ ಸಂಪರ್ಕ ಸೇವೆ, ಪೊಲೀಸ್ ಠಾಣೆಗಳ ಸಂಖ್ಯೆ ಹೀಗೆ ಹಲವು ಸೌಲಭ್ಯಗಳು ಹೆಚ್ಚಿಸಬೇಕು. ಬೆಂಗಳೂರಿನಲ್ಲಿ ರಸ್ತೆ ವಿಸ್ತರಣೆಗೆ ಅವಕಾಶವಿಲ್ಲ. ಅಂತಹ ಅದ್ವಾನಗಳು ಸೃಷ್ಟಿಯಾಗಬಾರದು. ಹಾಗಾಗಿ ಸಮಗ್ರ ಪ್ರಸ್ತಾವನೆ ಸಿದ್ಧಪಡಿಸಿಕೊಂಡು, ಅಗತ್ಯ ರಸ್ತೆ ಅಭಿವೃದ್ಧಿ ಇನ್ನಿತರ ಕಾಮಗಾರಿಗಳಿಗೆ ಅಗತ್ಯ ಭೂಸ್ವಾಧೀನಪಡಿಸಿಕೊಂಡ ನಂತರ ಈ ನಿಟ್ಟಿನಲ್ಲಿ ಮುಂದುವರೆಯುವುದು ಸೂಕ್ತ ಎಂದು ಅಭಿಪ್ರಾಯಿಸಿದರು.

ಸ್ವಾಗತಾರ್ಹ ನಡೆ: ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಮೈಸೂರು ನಗರದ ಭವಿಷ್ಯ ದೃಷ್ಟಿಕೋನ ಹಾಗೂ ಆಡಳಿತ ಸಮಸ್ಯೆ ನಿವಾರಣೆ ದೃಷ್ಟಿಯಿಂದ 'ಬೃಹತ್ ಮೈಸೂರು' ನಿರ್ಣಯ ಸ್ವಾಗತಾರ್ಹವಾಗಿದೆ. ಪ್ರಾಧಿಕಾರದ 96 ಸಾವಿರ ನಿವೇಶನ ಹಾಗೂ ಅನುಮೋದನೆ ಪಡೆದಿರುವ ಖಾಸಗಿ ಬಡಾವಣೆಗಳ ಒಂದು ಲಕ್ಷಕ್ಕೂ ಹೆಚ್ಚು ನಿವೇಶನಗಳು ಸೇರ್ಪಡೆಯಾಗುತ್ತವೆ. ಪ್ರಾಧಿಕಾರಕ್ಕೆ ಬಡಾವಣೆಗಳ ನಿರ್ವಹಣೆ ಸಾಧ್ಯವಿಲ್ಲ, ಇನ್ನು ಗ್ರಾಮ ಪಂಚಾಯಿತಿಗಳಿಗೆ ಆ ಶಕ್ತಿ ಇಲ್ಲ. ಎರಡು ಗ್ರಾಪಂ ವ್ಯಾಪ್ತಿಗೆ ಒಳಪಡುವ ಪ್ರದೇಶಗಳ ಸಮಸ್ಯೆಗಳಿಗೆ ಪರಿಹಾರವೇ ಇಲ್ಲ. ಹೀಗಿರುವಾಗ ಆಡಳಿತ ಹಾಗೂ ನಿರ್ವಹಣೆ ಜವಾಬ್ದಾರಿ ಒಂದೇ ಸ್ಥಳೀಯ ಸಂಸ್ಥೆಗೆ ಒಳಪಡುವುದು ಸೂಕ್ತ ಎಂದು ಅಭಿಮತ ವ್ಯಕ್ತಪಡಿಸಿದರು.

ಮೇಯರ್ ಸುನಂದಾ ಪಾಲನೇತ್ರ ಮಾತನಾಡಿ, ಯೋಜನೆಯಲ್ಲಿ ಸಾಧಕ–ಬಾಧಕಗಳು ಸಹಜ. ಆದರೆ ಏನೇ ಸಮಸ್ಯೆಯಾದರೂ ಪಾಲಿಕೆ ನಿರ್ವಹಿಸಿಕೊಂಡು ಹೋಗುವುದಾಗಿ ವಿಶ್ವಾಸವಿದ್ದು, ಶೀಘ್ರ ಈ ನಿಟ್ಟಿನಲ್ಲಿ ಪ್ರಕ್ರಿಯೆ ಆರಂಭಿಸಬೇಕೆಂದು ಆಗ್ರಹಿಸಿದರು. ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಮಾತನಾಡಿ, ರಿಂಗ್ ರಸ್ತೆಯಲ್ಲಿ ಓಡಾಡಲು ಭಯಪಡುತ್ತಿದ್ದರು, ಆದರೀಗ ಅದು ನಗರದ ಮಧ್ಯಭಾಗ ಎನ್ನುವಂತಾಗಿದೆ. 'ಬೃಹತ್ ಮೈಸೂರು' ಒಳ್ಳೆಯ ಯೋಜನೆಯಾಗಿದ್ದು ನಮ್ಮ ಸರ್ಕಾರದ ಅವಧಿಯಲ್ಲೇ ಆಗಬೇಕು. ನಿರ್ವಹಣೆ ಕಷ್ಟವಾಗುತ್ತದೆ ಎಂಬ ಚಿಂತೆ ಬೇಡ. ಪಾಲಿಕೆ ವಿಸ್ತರಣೆಯಿಂದ ಆದಾಯವೂ ಹೆಚ್ಚಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಾಯವೂ ಸಿಗುತ್ತದೆ ಎಂದು ಅಭಿಪ್ರಾಯಿಸಿದರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಬೃಹತ್ ಮೈಸೂರು ರಚನೆ ಆಗುವವರೆಗೆ ಇದಕ್ಕೆ ಒಳಪಡುವ ಪ್ರದೇಶಗಳ ಆಸ್ತಿ ಭದ್ರತೆ ಹಾಗೂ ಮಾರಾಟಕ್ಕೆ ಅನುವಾಗುವಂತೆ ಕ್ರಮ ವಹಿಸಬೇಕೆಂದು ಆಗ್ರಹಿಸಿದರು.

ಉಪಮೇಯರ್ ಅನ್ವರ್‌ಬೇಗ್, ಅಪರ ಜಿಲ್ಲಾಧಿಕಾರಿ ಮಂಜುನಾಥಸ್ವಾಮಿ, ಮುಡಾ ಆಯುಕ್ತ ಡಿ.ಬಿ.ನಟೇಶ್, ಜಿಪಂ ಸಿಇಓ ಪೂರ್ಣಿಮಾ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು. ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆ ಮಾಡಲು ಉದ್ದೇಶಿಸಿರುವ ಪ್ರದೇಶಗಳು ನಗರದ ಮಧ್ಯಭಾಗದಿಂದ 6.8 ಕಿ.ಮೀ.ನಿಂದ 12.5 ಕಿ.ಮೀ. ಅಂತರದಲ್ಲಿವೆ. ಪಾಲಿಕೆ ವಿಸ್ತರಣೆಯಿಂದ ಒಂದೂವರೆ ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಸೇರ್ಪಡೆಯಾಗಲಿದ್ದು, ವಾರ್ಷಿಕ 26 ಕೋಟಿ ರೂ.ಗೂ ಹೆಚ್ಚು ಆದಾಯ ನಿರೀಕ್ಷಿಸಲಾಗಿದೆ.

ರಾಮದಾಸ್ ಧನ್ಯವಾದ

ವ್ಯಕ್ತಪಡಿಸಿದವು. ಮುಖ್ಯಮಂತ್ರಿಗಳು ಸಮ್ಮತಿಸಿದರೂ ನಗರಾಭಿವೃದ್ಧಿ ಸಚಿವರು ಧೈರ್ಯ ಮಾಡಲಿಲ್ಲ. ಈಗ ಮತ್ತೆ ಚರ್ಚೆಗೆ ಬಂದಿರುವುದು ಸಂತೋಷ ತಂದಿದೆ. ಒಂದು ಆಡಳಿತ ವ್ಯವಸ್ಥೆಗೆ ತರುವ ಈ ಪ್ರಯತ್ನ ಸೂಕ್ತವಾಗಿದೆ. ಸಮಿತಿ ರಚನೆ ಮಾಡಿ ಆ ಮೂಲಕ ಸಾಧಕ–ಬಾಧಕಗಳ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡಿ, ಗಡಿ ಪ್ರದೇಶ ಗುರುತಿಸುವಿಕೆ ಇನ್ನಿತರ ಪ್ರಕ್ರಿಯೆಗಳಿಗೆ ಗಡುವು ನೀಡಬೇಕು. ಅನುಷ್ಠಾನಕ್ಕೆ ತ್ವರಿತ ಪ್ರಯತ್ನ ನಡೆಸಬೇಕು ಎಂದು ಅಭಿಪ್ರಾಯಿಸಿದರು. ಶಾಸಕ ಎಲ್.ನಾಗೇಂದ್ರ ಮಾತನಾಡುವಾಗಲೂ ಬೃಹತ್ ಮೈಸೂರು ರಚನೆಗೆ 10 ವರ್ಷಗಳ ಹಿಂದೆಯೇ ಪ್ರಸ್ತಾವನೆ ಸಿದ್ಧವಾಗಿತ್ತು. ನಾನು ಆಗ ಮುಡಾ ಅಧ್ಯಕ್ಷನಾಗಿದ್ದೆ. ಸಿಡಿಪಿಯಲ್ಲೂ ಈ ವಿಚಾರ ಪ್ರಸ್ತಾಪವಾಗಿತ್ತು. ಆ ಸಂದರ್ಭ ದಲ್ಲಿ ದಿವಂಗತ ಅನಂತ್‌ಕುಮಾರ್ ಹಾಗೂ ಸುರೇಶ್‌ಕುಮಾರ್ ಅವರ ಸಮ್ಮುಖದಲ್ಲಿ 'ಆಟೋ ನಗರ' ಚಿಂತನೆಯೊಂದಿಗೆ ಕಾರ್ಯಕ್ರಮವನ್ನೂ ಮಾಡಿದ್ದೆವು ಎಂದು ಸ್ಮರಿಸಿಕೊಂಡರು.

ಪಾಕಿಸ್ತಾನದ ನೂತನ ಪ್ರಧಾನಿ

ಅಧಿವೇಶನ ಆರಂಭವಾಗುವ ಕೆಲ ನಿಮಿಷಗಳ ಮೊದಲು ಮಾಜಿ ಮಾಹಿತಿ ಸಚಿವ ಫವಾದ್ ಚೌಧರಿ, ಎಲ್ಲಾ ಪಿಟಿಐ ಶಾಸಕರು ರಾಷ್ಟ್ರೀಯ ಅಸೆಂಬ್ಲಿಗೆ ರಾಜೀನಾಮೆ ನೀಡುತ್ತಾರೆ ಮತ್ತು ವಿದೇಶಿ ಕಾರ್ಯಸೂಚಿ ಅಡಿಯಲ್ಲಿ ರಚನೆಯಾಗುತ್ತಿರುವ ಯಾವುದೇ ಸರ್ಕಾರದ ಭಾಗವಾಗುವುದಿಲ್ಲ ಎಂದು ಹೇಳಿದರು. ಪ್ರಧಾನಿ ಚುನಾವಣೆಗೆ ಮುನ್ನ ನಡೆದ ಪಕ್ಷದ ಶಾಸಕರ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಚೌಧರಿ ಹೇಳಿದ್ದಾರೆ. ಇಮ್ರಾನ್ ಖಾನ್ ಪದಚ್ಯುತಿಗೂ ಮುನ್ನ ತಮ್ಮನ್ನು ಅಧಿಕಾರದಿಂದ ಕೆಳಗಿಳಿಸುವ ಷಡ್ಯಂತ್ರದ ಹಿಂದೆ ಅಮೆರಿಕಾ ಕೈವಾಡವಿದೆ ಎಂದು ನೇರವಾಗಿ ಆರೋಪಿಸಿದ್ದರು. ನೂತನ ಪ್ರಧಾನಿ ಶಹಬಾಜ್ ಷರೀಫ್ ಮತ್ತು ಅವರ ಮಗ ಹಮ್ಜಾ ಶೆಹಬಾಜ್ ಮತ್ತು ಸುಲೇಮಾನ್ ಶೆಹಬಾಜ್ ಅವರ ಹೆಸರುಗಳು ನವೆಂಬರ್ 2020ರಲ್ಲಿ ಹೈ–ಪ್ರೊಫೈಲ್ ಮನಿ ಲಾಂಡರಿಂಗ್ ಪ್ರಕರಣದಲ್ಲಿ ಕೇಳಿಬಂದಿದೆ. ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್–ಎ–ಇನ್ಸಾಫ್ (ಪಿಟಿಐ) ಸರ್ಕಾರದ ವಿರುದ್ಧ ಶನಿವಾರ ತಡರಾತ್ರಿ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಅವಿಶ್ವಾಸ ಮತ ನಡೆಯಿತು. ಅವಿಶ್ವಾಸ ಮತದಿಂದ ಪದಚ್ಯುತಗೊಂಡ ಮೊದಲ ಪ್ರಧಾನಿ ಎಂಬ ಇತಿಹಾಸ ಸೃಷ್ಟಿಸಿರುವ ಇಮ್ರಾನ್ ಖಾನ್ ಅವರನ್ನು ಪದಚ್ಯುತಗೊಳಿಸಲು ಪ್ರತಿಪಕ್ಷಗಳು 174 ಮತ ಚಲಾಯಿಸಿದ್ದವು.

ಪಾಕ್ ವಾಪಸಾತಿಗೆ ಮುಹೂರ್ತ: ಲಂಡನ್‌ನಲ್ಲಿ ನೆಲೆಸಿರುವ ಪದಚ್ಯುತ ಪಾಕ್ ಪ್ರಧಾನಿ ನವಾಜ್ ಶರೀಫ್ ಸ್ವದೇಶಕ್ಕೆ ವಾಪಸ್ಸಾಗಲು ಮುಹೂರ್ತ ಫಿಕ್ಸ್ ಆಗಿದೆ. ಇಮ್ರಾನ್ ಖಾನ್ ಪ್ರಧಾನಿ ಪದವಿ ಕಳೆದುಕೊಳ್ಳುತ್ತಿದ್ದಂತೆಯೇ ಈ ಹೊಸ ಬೆಳವಣಿಗೆ ಪಾಕ್ ರಾಜಕಾರಣದಲ್ಲಿ ಸಂಚಲನ ಸೃಷ್ಟಿಸಿದೆ. ಈದ್ ಮಿಲಾದ್ ಬಳಿಕ ನವಾಜ್ ಶರೀಫ್ ಪಾಕಿಸ್ತಾನಕ್ಕೆ ಮರಳಲಿದ್ದಾರೆ ಎಂದು PML-N ನಾಯಕರು ತಿಳಿಸಿದ್ದಾರೆ. ಬಹುಮತ ಸಾಬೀತುಪಡಿಸಲು ವಿಫಲವಾಗಿ ಅಧಿಕಾರ ಕಳೆದುಕೊಂಡ ಮೊದಲ ಪ್ರಧಾನಿ ಎನ್ನುವ ಕುಖ್ಯಾತಿಗೆ ಇಮ್ರಾನ್ ಖಾನ್ ಭಾನುವಾರ ಒಳಗಾಗಿದ್ದರು. ಮಾಜಿ ಪ್ರಧಾನಿ ನವಾಜ್ ಶರೀಫ್ ವಿರುದ್ಧ ಹಲವಾರು ಭ್ರಷ್ಟಾಚಾರ ಪ್ರಕರಣಗಳು ದಾಖಲಾಗಿದ್ದವು. ಸುಪ್ರೀಂ ಕೋರ್ಟ್‌ನಲ್ಲಿ ಅವುಗಳ ವಿಚಾರಣೆ ನಡೆಯುತ್ತಿತ್ತು. ಅದರ ನಡುವೆಯೇ ಚಿಕಿತ್ಸೆಗೆಂದು ಅನುಮತಿ ಕೋರಿ ಶರೀಫ್ ಲಂಡನ್ ಗೆ ತೆರಳಿದ್ದರು. ನಂತರ ವಿಚಾರಣೆಗೆ ಹಾಜರಾಗಲು ನ್ಯಾಯಾಲಯ ಆದೇಶಿಸಿದರೂ ಶರೀಫ್ ಆದೇಶ ಪಾಲಿಸಿರಲಿಲ್ಲ.

ಇಂದು ವಿಶೇಷ ಪೂಜೆ

ಮಾಜಿ ಶಾಸಕ ಚಿಕ್ಕಣ್ಣ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಮೂರ್ತಿ, ನಗರಾಧ್ಯಕ್ಷ ಚಲುವೇಗೌಡ, ಕೊಡಗು ಜಿಲ್ಲಾಧ್ಯಕ್ಷ ಗಣೇಶ್, ಮಾಜಿ ಮೇಯರ್ ರವಿಕುಮಾರ್, ಮುಖಂಡರಾದ ಸಾ.ರಾ.ನಂದೀಶ್, ಮಾವಿನಹಳ್ಳಿ ಸಿದ್ದೇಗೌಡ, ಬೀರೀಹುಂಡಿ ಬಸವಣ್ಣ, ಮಾದೇಗೌಡ, ಬೆಳವಾಡಿ ಶಿವಮೂರ್ತಿ ಪಕ್ಷದ ವಿವಿಧ ಹಂತದ ಜನಪ್ರತಿನಿಧಿಗಳು ಸೇರಿದಂತೆ ಹಲವರು ಭಾಗವಹಿಸಿ, ನಾಳಿನ ಕಾರ್ಯಕ್ರಮದ ಬಗ್ಗೆ ಚರ್ಚಿಸಿದರು.

ನಾಳೆ ಚಾಮುಂಡಿಬೆಟ್ಟದಲ್ಲಿ ಪೂಜೆ ಸಲ್ಲಿಸಿ, ರಾಮನಗರದಿಂದ 15 ಜಲಧಾರೆ ರಥಗಳನ್ನು ವಿವಿಧ ಜಿಲ್ಲೆಗಳಿಗೆ ರವಾನಿಸಿದ ನಂತರ ಏ.16ರಂದು ಏಕಕಾಲಕ್ಕೆ 15 ರಥಗಳಿಗೆ ಚಾಲನೆ ನೀಡಲಾಗುತ್ತದೆ. ಕೆಆರ್‌ಎಸ್‌ನಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಕಾವೇರಿ ಉಗಮ ಸ್ಥಾನ ತಲಕಾವೇರಿಯಲ್ಲಿ ಶಾಸಕ ಸಾ.ರಾ.ಮಹೇಶ್, ಕಬಿನಿ ಜಲಾಶಯದಲ್ಲಿ ಶಾಸಕರಾದ ಅಶ್ವಿನ್‌ಕುಮಾರ್, ಸಿ.ಎನ್.ಮಂಜೇಗೌಡ ಮತ್ತು ಮಾಜಿ ಶಾಸಕ ಚಿಕ್ಕಣ್ಣ ಜಲಧಾರೆ ರಥಗಳಿಗೆ ಚಾಲನೆ ನೀಡಲಿದ್ದಾರೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರುಗಳು ಬೇರೆ ಬೇರೆ ಸ್ಥಳಗಳಲ್ಲಿ ಜಲಧಾರೆ ರಥಗಳಿಗೆ ಚಾಲನೆ ನೀಡಲಿದ್ದಾರೆ ಎಂದು ಶಾಸಕ ಸಾ.ರಾ.ಮಹೇಶ್ 'ಮೈಸೂರು ಮಿತ್ರ' ನಿಗೆ ತಿಳಿಸಿದರು.

ಡೀಸೆಲ್, ಎಫ್‌ಸಿ ದರ ಇಳಿಸುವುದೂ ಸೇರಿ ನಾನಾ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ

ಮೈಸೂರಲ್ಲಿ ಲಾರಿ ಮಾಲೀಕರ ಪ್ರತಿಭಟನೆ

ಮೈಸೂರು,ಏ.11(ಪಿಎಂ)–ವಾಹನಗಳ ಎಫ್‌ಸಿ ಶುಲ್ಕ ಹೆಚ್ಚಳ ಕೈಬಿಡಬೇಕು, ಡೀಸೆಲ್ ದರ ಇಳಿಸಬೇಕು ಹಾಗೂ ಬಾರ್ಡರ್ ಚೆಕ್‌ಪೋಸ್ಟ್ ರದ್ದುಗೊಳಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಮೈಸೂರು ಜಿಲ್ಲಾ ಲಾರಿ ಮಾಲೀಕರ ಒಕ್ಕೂಟದ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕೇಂದ್ರ ಸರ್ಕಾರ 15 ವರ್ಷ ಮೇಲ್ಪಟ್ಟ ಹಳೇ ವಾಹನಗಳ ಸಂಚಾರಕ್ಕೆ ಸಂಬಂಧಿಸಿದಂತೆ ವಾಹನಗಳ ಗುಜರಿ ನೀತಿ ಜಾರಿಗೊಳಿಸಿದೆ. ಅದರಂತೆ ಇಂತಹ ವಾಹನಗಳ ಸಂಬಂಧ ವರ್ಷಕ್ಕೊಮ್ಮೆ ವಾಹನ ಸದೃಢತೆ ಪ್ರಮಾಣ ಪತ್ರ (ಎಫ್‌ಸಿ) ಮಾಡಿಸಬೇಕಿದೆ. ಆದರೆ ಭಾರೀ ಪ್ರಮಾಣದಲ್ಲಿ ಎಫ್‌ಸಿ ಶುಲ್ಕ ಹೆಚ್ಚಳ ಮಾಡಿದ್ದು, ಇದು ಸರಿಯಲ್ಲ. ಜೊತೆಗೆ ವಾಹನಗಳ ಮರು ನೋಂದಣಿ ಶುಲ್ಕವನ್ನೂ ಹೆಚ್ಚಿಸಿರುವುದು ಮಾಲೀಕರಿಗೆ ಹೊರೆಯಾಗಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಒಂದೇ ಲಾರಿ ಹೊಂದಿರುವ ಆರ್ಥಿಕವಾಗಿ ಹಿಂದುಳಿದ ಮಾಲೀಕರ ಹೊಟ್ಟೆ ಮೇಲೆ ಹೊಡೆಯಲು ಸರ್ಕಾರ ಮುಂದಾಗಿದೆ. ವಾಹನಗಳ ದೃಢೀಕರಣ ಪತ್ರಕ್ಕಾಗಿ ಆಟೋಮೇಟೆಡ್ ಸೆಂಟರ್‌ಗಳಿಗೆ ಹೋಗಬೇಕೆಂದು ಸರ್ಕಾರ ಹೇಳುತ್ತಿದ್ದು, ಇದರಿಂದ 50 ಸಾವಿರ ರೂ. ವೆಚ್ಚ ಬರಲಿದೆ. ಇದು ಭಾರೀ ದುಬಾರಿಯಾಗಲಿದೆ. ಕಳೆದ 15 ದಿನಗಳಿಂದ ಇಂಧನ ದರ ಭಾರೀ ಪ್ರಮಾಣದಲ್ಲಿ ಏರಿಕೆಯಾಗುತ್ತಲೇ ಸಾಗುತ್ತಿದೆ. ಇದು ಹೀಗೆಯೇ ಮುಂದುವರೆದರೆ ಸರಕು–ಸಾಗಣೆದಾರರು ಜೀವನ ಸಾಗಿಸುವುದು ಕಷ್ಟಸಾಧ್ಯ ಎಂದು ಕಿಡಿಕಾರಿದರು.

ಸಾಗಣೆ ದರ ಮಾತ್ರ ನಿಂತ ನೀರಾಗಿದ್ದು, ಏರಿಕೆ ಕಾಣದಾಗಿದೆ. ಸಾಗಣೆ ಮಾಡಿಯೂ ಲಾರಿ ಮಾಲೀಕರಿಗೆ ಏನೂ ಉಳಿಯದ ದುಸ್ಥಿತಿ ನಿರ್ಮಾಣವಾಗಿದೆ. ಅಧಿಕ ಮುಖ ಬೆಲೆಯ ನೋಟು ಅಪಮೌಲೀಕರಣ, ಜಿಎಸ್‌ಟಿ ಜಾರಿ ಮತ್ತು ಕೋವಿಡ್ ಸೋಂಕಿನ ಪರಿಣಾಮ ಸಾಗಣೆ ಉದ್ಯಮಕ್ಕೆ ಭಾರೀ ಹಾನಿಯಾಗಿದೆ. ಡೀಸೆಲ್ ದರ ಇಳಿಸಲು ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

ಸಾರಿಗೆ ಇಲಾಖೆಯ ಮಹತ್ವದ ಹೆಜ್ಜೆ ಎಂಬ ಶೀರ್ಷಿಕೆಯಡಿ 30ಕ್ಕೂ ಹೆಚ್ಚು ಆನ್‌ಲೈನ್ ಸೇವೆಗಳನ್ನು ಜಾರಿಗೊಳಿಸಲಾಗಿದೆ ಎಂದು ಮಾಧ್ಯಮದಲ್ಲಿ ಪ್ರಸಾರವಾಗುತ್ತಿರುವ ಜಾಹೀರಾತಿನಲ್ಲಿ ಸರ್ಕಾರ ಹೇಳಿಕೊಳ್ಳುತ್ತಿದೆ. ಆನ್‌ಲೈನ್ ವ್ಯವಸ್ಥೆ ಜಾರಿಗೊಳಿಸಿದ ಮೇಲೆ ಬಾರ್ಡರ್ ಚೆಕ್‌ಪೋಸ್ಟ್ ವ್ಯವಸ್ಥೆ ಅನಗತ್ಯವಾಗಿದ್ದು, ಬಾರ್ಡರ್ ಚೆಕ್‌ಪೋಸ್ಟ್ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಬಾರ್ಡರ್ ಚೆಕ್‌ಪೋಸ್ಟ್ ರದ್ದು ಮಾಡಿದರೆ ಭ್ರಷ್ಟಾಚಾರ ನಿಯಂತ್ರಣಕ್ಕೆ ಬರಲಿದ್ದು, ಜೊತೆಗೆ ಸಾಗಣೆದಾರರಿಗೆ ಎದುರಾಗುತ್ತಿರುವ ಕಿರಿಕಿರಿಯೂ ತಪ್ಪುತ್ತದೆ. ದೇಶದೆಲ್ಲೆಡೆ ಜಿಎಸ್‌ಟಿ ಜಾರಿ ಬಳಿಕ ಸೇಲ್ಸ್ ಟ್ಯಾಕ್ಸ್ ಚೆಕ್‌ಪೋಸ್ಟ್‌ಗಳನ್ನು ರದ್ದು ಮಾಡಲಾಗಿದೆ. ಅದೇ ಮಾದರಿಯಲ್ಲಿ ಸಾರಿಗೆ ಇಲಾಖೆಯು ಎಲ್ಲಾ ಬಾರ್ಡರ್ ಚೆಕ್‌ಪೋಸ್ಟ್‌ಗಳನ್ನು ಕೂಡಲೇ ರದ್ದುಗೊಳಿಸಬೇಕು. ಬಿಜೆಪಿ ಅಧಿಕಾರದಲ್ಲಿರುವ 8 ರಾಜ್ಯಗಳಲ್ಲಿ ಬಾರ್ಡರ್ ಚೆಕ್‌ಪೋಸ್ಟ್‌ಗಳನ್ನು ಈಗಾಗಲೇ ರದ್ದುಗೊಳಿಸಲಾಗಿದೆ. ಅದೇ ರೀತಿ ರಾಜ್ಯದಲ್ಲೂ ಇದನ್ನು ರದ್ದುಪಡಿಸಲು ರಾಜ್ಯ ಬಿಜೆಪಿ ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

ರಾಜ್ಯ ಹೆದ್ದಾರಿಯಲ್ಲಿ ಚಿತ್ರದುರ್ಗ ಹಾಗೂ ವಿಜಯ ಪುರ (ಬಿಜಾಪುರ), ಕೊಪ್ಪಳ, ಹಾವೇರಿ ಜಿಲ್ಲೆಗಳಿಗೆ ಪ್ರವೇಶ ಪಡೆಯುವಾಗ ತಪಾಸಣೆ ನೆಪದಲ್ಲಿ ವಾಹನ ಗಳನ್ನು ತಡೆದು ಗಡಿಭಾಗದಲ್ಲಿ ಅಧಿಕಾರಿಗಳು ತೀವ್ರ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಮೈಸೂರು ಜಿಲ್ಲೆಯಲ್ಲಿ ಇನ್ನು ಮರಳು ಸಾಗಣೆ ನಿಯಮಗಳು ಜಾರಿಯಾಗಿಲ್ಲ. ಇದೇ ಕೆಲಸ ನಂಬಿಕೊಂಡು ಜಿಲ್ಲೆಯಲ್ಲಿ 1,500 ಲಾರಿಗಳು ಇವೆ. ಮರಳು ಸಾಗಣೆಗೆ ಸರ್ಕಾರ ಕೂಡಲೇ ಅನುಮತಿ ನೀಡಬೇಕು. ಸಾಗಣೆ ಉದ್ಯಮದ ಹಿತಕ್ಕಾಗಿ ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ನಮ್ಮ ಸಂಘಟನೆಯ ಪ್ರತಿನಿಧಿಗಳನ್ನು ಒಳಗೊಂಡಂತೆ ಸಾರಿಗೆ ಸಮಿತಿಯೊಂದನ್ನು ರಚನೆ ಮಾಡಬೇಕು ಎಂದು ಆಗ್ರಹಿಸಿದರು. ಒಕ್ಕೂಟದ ಅಧ್ಯಕ್ಷ ಬಿ.ಕೋದಂಡರಾಮ, ಉಪಾಧ್ಯಕ್ಷ ಎಲ್.ಶಂಕರ್, ಕಾರ್ಯದರ್ಶಿ ಪ್ರಕಾಶ್ ಎಫ್.ಫರೇರ, ಮೈಸೂರು ಸಿಟಿ ಗೂಡ್ಸ್ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಅಜ್ಗರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



30 ದಿನಗಳಲ್ಲಿ ಬೇಡಿಕೆ ಈಡೇರದಿದ್ದರೆ ಲಾರಿ ಮುಷ್ಕರ

ಇನ್ನು 30 ದಿನಗಳ ಒಳಗಾಗಿ ನಮ್ಮ ಬೇಡಿಕೆ ಈಡೇರಿಸದಿದ್ದರೆ, ಲಾರಿ ಮುಷ್ಕರ ನಡೆಸಲಾಗುವುದು. ಜೊತೆಗೆ ವಾಣಿಜ್ಯ ವಾಹನಗಳ ಮುಷ್ಕರಕ್ಕೂ ಕರೆ ನೀಡಲಾಗುವುದು. ಇತ್ತೀಚಿಗೆ ಚೆನ್ನೈನಲ್ಲಿ ಸೌತ್ ಇಂಡಿಯಾ ಮೋಟಾರ್ ಟ್ರಾನ್ಸ್‌ಪೋರ್ಟ್ ಅಸೋಸಿಯೇಷನ್ (ಸಿಮ್ಟಾ) ವತಿಯಿಂದ ಸಭೆ ನಡೆಸಿ, ಆಯಾಯ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿ, ತಿಂಗಳ ಒಳಗೆ ಬೇಡಿಕೆ ಈಡೇರಿಸದಿದ್ದರೆ, ಮುಷ್ಕರ ನಡೆಸಲು ತೀರ್ಮಾನಿಸಲಾಗಿದೆ.

-ಬಿ.ಕೋದಂಡರಾಮ, ಒಕ್ಕೂಟದ ಅಧ್ಯಕ್ಷ

ಇಂದಿನಿಂದ ಮೈಸೂರಲ್ಲಿ ವಿಭಾಗ ಮಟ್ಟದ ಬಿಜೆಪಿ ಪ್ರಮುಖ ಮುಖಂಡರು, ಕೋರ್ ಕಮಿಟಿ ಸಭೆ

● ಮಾಜಿ ಸಿಎಂ ಶೆಟ್ಟರ್ ನೇತೃತ್ವದ ತಂಡ ಎರಡು ದಿನ ಮೈಸೂರಲ್ಲಿ ಠಿಕಾಣಿ ● ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮಾಜಿ ಸಚಿವರಾದ ಕೆ.ಎಸ್.ಈಶ್ವರಪ್ಪ, ವಿ.ಸೋಮಣ್ಣ ಇತರರು ಭಾಗಿ

ಮೈಸೂರು, ಏ.11 (ಆರ್‌ಕೆಬಿ)– ಮೈಸೂರು ವಿಭಾಗ ಮಟ್ಟದ ಬಿಜೆಪಿ ಪ್ರಮುಖರು ಮತ್ತು ಕೋರ್ ಕಮಿಟಿ ಸಭೆ ಏ.12ರಂದು ಮೈಸೂರಿನ ಲಲಿತ ಮಹಲ್ ಅರಮನೆಯಲ್ಲಿ ನಡೆಯಲಿದೆ. ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಸಚಿವರಾದ ಕೆ.ಎಸ್.ಈಶ್ವರಪ್ಪ, ವಿ.ಸೋಮಣ್ಣ, ಸಂಸದ ಪ್ರತಾಪ್‌ಸಿಂಹ, ರಾಜ್ಯ ಉಪಾಧ್ಯಕ್ಷರಾದ ತೇಜಸ್ವಿನಿ ಅನಂತ್‌ಕುಮಾರ್, ಎಂ.ರಾಜೇಂದ್ರ ನೇತೃತ್ವದ ತಂಡ ಪ್ರವಾಸ ಕೈಗೊಳ್ಳಲಿದೆ.

ಬಿಜೆಪಿ ನಗರ ವಕ್ತಾರ ಎಂ.ಎ. ಮೋಹನ್ ಸೋಮವಾರ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಮೈಸೂರು ವಿಭಾಗದ ಮೈಸೂರು ನಗರ






ಮತ್ತು ಜಿಲ್ಲೆ, ಹಾಸನ, ಚಾಮರಾಜನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಜಿಲ್ಲಾ ಮಟ್ಟದ ಕಾರ್ಯಕರ್ತರ ಸಭೆ, ಪ್ರಮುಖರ ಸಭೆ ಮತ್ತು ಕೋಟ್ ಕಮಿಟಿ ಸಭೆಯಲ್ಲಿ ಕೆಲವು ಮಹತ್ವದ ವಿಚಾರಗಳು ಚರ್ಚೆಯಾಗಲಿವೆ ಎಂದು ತಿಳಿಸಿದರು.

ಏ.13ರಂದು ಮಧ್ಯಾಹ್ನ 3 ಗಂಟೆಗೆ ದೊಡ್ಡಕೆರೆ ಮೈದಾನದ ವಸ್ತು ಪ್ರದರ್ಶನ ಆವರಣದಲ್ಲಿ ಪಕ್ಷದ ಕಾರ್ಯಕರ್ತರ ಸಭೆ ನಡೆಯಲಿದೆ ಎಂದು ಹೇಳಿದರು.

ರಾಜ್ಯಾದ್ಯಂತ ಏ.12ರಿಂದ 24ರವರೆಗೆ ಬಿಜೆಪಿ ನಾಯಕರ ಐದು ತಂಡ, ಐದು ವಿಭಾಗಗಳಲ್ಲಿ ಪ್ರವಾಸ ಕೈಗೊಳ್ಳಲಿದೆ. ಈ ಪೈಕಿ ಮೈಸೂರು ವಿಭಾಗದ ಪ್ರವಾಸ ಇದಾಗಿದೆ ಎಂದು ತಿಳಿಸಿದರು.

ಏ.11ರಂದು ಜ್ಯೋತಿಬಾ ಫುಲೆ ಅವರ ಜಯಂತಿ ಆಚರಿಸಲಾಗುತ್ತಿದ್ದು, 19ನೇ ಶತಮಾನದಲ್ಲಿ ಸಾಮಾಜಿಕ ಕ್ರಾಂತಿಯ ಮೂಲಕ ಸಮಾನತೆಯ ಹರಿಕಾರರಾಗಿ ದೀನ ದಲಿತರ, ಹಿಂದುಳಿದ ವರ್ಗಗಳ ಏಳಿಗೆಗೆ ಶ್ರಮಿಸಿದವರು. ಮೇಲು ಜಾತಿಯವರಿಗೆ ಮಾತ್ರ ಶಿಕ್ಷಣ ಲಭಿಸುತ್ತಿದ್ದ ದಿನಗಳಲ್ಲೇ ದೀನ ದಲಿತರು, ಬಡವರು ಹಾಗೂ ಶೋಷಿತರ ಪರ ದನಿ ಎತ್ತಿ, ಶಿಕ್ಷಣಕ್ಕೆ ಆದ್ಯತೆ ನೀಡಿದವರು. .ಬ್ರಿಟಿಷರ ಕಾಲದ ಕಾಂಗ್ರೆಸ್ ಪ್ರಾಯೋಜಿತ ಸುಳ್ಳು ಶಿಕ್ಷಣವನ್ನು ಬದಿಗಿರಿಸಿ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸುತ್ತಿರುವುದು ಜನರಿಗೆ ಅತ್ಯಂತ ಉಪಯುಕ್ತವಾಗಲಿದೆ. ಇದರಿಂದ ಉದ್ಯೋಗಾಧಾರಿತ ಮತ್ತು ಮೌಲ್ಯಾಧಾರಿತ ಶಿಕ್ಷಣ ದೊರೆಯಲಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸಹ ವಕ್ತಾರರಾದ ಮಹೇಶ್ ರಾಜ್ ಅರಸ್, ಪ್ರದೀಪ್‌ಕುಮಾರ್ ಉಪಸ್ಥಿತರಿದ್ದರು.

ಪಾರ್ಶ್ವವಾಯು ಆಘಾತ: ಸ್ಥಳದಲ್ಲೇ ವ್ಯಕ್ತಿ ಸಾವು

ಮೈಸೂರು, ಏ.11(ಆರ್‌ಕೆ)– ಪ್ರಜ್ಞೆ ತಪ್ಪಿ ಬಿದ್ದು ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ಮೈಸೂರಿನ ಗೋಕುಲಂ 3ನೇ ಹಂತದಲ್ಲಿ ಭಾನುವಾರ ತಡರಾತ್ರಿ ಸಂಭವಿಸಿದೆ.

ಮೈಸೂರಿನ ಹೆಬ್ಬಾಳು ನಿವಾಸಿ ನಂಜುಂಡೇಗೌಡರ ಮಗ ರಘು(45) ಸಾವನ್ನಪ್ಪಿದವರು. ಭಾನುವಾರ ರಾತ್ರಿ 10.30 ಗಂಟೆ ವೇಳೆ ಗೋಕುಲಂ 3ನೇ ಹಂತದ ಡಾಕ್ಟರ್ಸ್ ಕಾರ್ನರ್ ಸಮೀಪದ ಆಯುರ್ವೇದ ಪಾರ್ಕ್ ಬಳಿ ಪಾರ್ಶ್ವ ವಾಯು ಆಘಾತದಿಂದಾಗಿ ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ. ಆ ವೇಳೆ ಯಾರೂ ಸಹಾಯಕ್ಕೆ ಬಾರದ ಕಾರಣ ಅವರು ಸ್ಥಳದಲ್ಲೇ ಮೃತಪಟ್ಟಿದ್ದರು.

ಇಂದು ಬೆಳಗ್ಗೆ ವಾಯುವಿಹಾರಿಗಳು ನೀಡಿದ ಮಾಹಿತಿ ಆಧರಿಸಿ ಸ್ಥಳಕ್ಕೆ ತೆರಳಿದ ವಿವಿಪುರಂ ಠಾಣೆ ಸಬ್ ಇನ್ಸ್‌ಪೆಕ್ಟರ್ ಲೇಪಾಕ್ಷ ಹಾಗೂ ಸಿಬ್ಬಂದಿ ಮಹಜರು ನಡೆಸಿ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು.

ಮೂಲತಃ ಹಾಸನ ಜಿಲ್ಲೆ ಆಲುಮತ್ತಿಘಟ್ಟ ಗ್ರಾಮದವರಾದ ರಘು ಫೋಟೋಗ್ರಫಿ ವೃತ್ತಿ ಮಾಡಿಕೊಂಡಿದ್ದರು ಎಂದು ಹೇಳಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ವಿವಿಪುರಂ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

'ಸಂವಿಧಾನದ ಹಕ್ಕುಗಳಲ್ಲಿನ ಕಾನೂನು ಪ್ರವೃತ್ತಿಗಳನ್ನು ಬದಲಾಯಿಸುವುದು' ಕುರಿತು ಎರಡು ದಿನಗಳ ಕಾರ್ಯಾಗಾರಕ್ಕೆ ಚಾಲನೆ

ಕಾನೂನು ವಿದ್ಯಾರ್ಥಿಗೆ ನಿತ್ಯಕಲಿಕೆಯ ಅಗತ್ಯ: ಡಾ.ರಮೇಶ್ ಅಭಿಮತ



ಮೈಸೂರು, ಏ.11(ಆರ್‌ಕೆಬಿ)– ಎಬಿವಿಪಿ ಮೈಸೂರು ಘಟಕವು ಆಯೋಜಿಸಿದ್ದ 'ಸಂವಿಧಾನದ ಹಕ್ಕುಗಳಲ್ಲಿ ಕಾನೂನು ಪ್ರವೃತ್ತಿಗಳನ್ನು ಬದಲಾಯಿಸುವುದು' ವಿಷಯ ಕುರಿತ ಎರಡು ದಿನಗಳ ಕಾರ್ಯಾಗಾರಕ್ಕೆ ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಚೇರಿಯಲ್ಲಿ ಸೋಮವಾರ ಚಾಲನೆ ನೀಡಲಾಯಿತು. ಕಾರ್ಯಾಗಾರದಲ್ಲಿ ಮೈಸೂರಿನ ವಿವಿಧ ಕಾನೂನು ಕಾಲೇಜುಗಳ 60ಕ್ಕೂ ಹೆಚ್ಚು ಮಂದಿ ಕಾನೂನು ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದರು.

ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಕಾನೂನು ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಡೀನ್ ಡಾ. ರಮೇಶ್, ಹಿಂದೆ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ನಿಗದಿತ ಪುಸ್ತಕಗಳನ್ನು ಮಾತ್ರ ಓದುತ್ತಿದ್ದರು. ಆದರೆ ಇತ್ತೀಚಿನ ಬದಲಾದ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಪ್ರಗತಿಯೊಂದಿಗೆ ಜನರು ತಮ್ಮ ಬೆರಳ ತುದಿಯಲ್ಲಿ ತಮಗೆ ಬೇಕಾದ ಮಾಹಿತಿಯನ್ನು ಪಡೆಯುವಂತಾಗಿದೆ ಎಂದು ಹೇಳಿದರು.

ಕಾನೂನು ವಿದ್ಯಾರ್ಥಿಯು ತನ್ನಂತೆ ದಿನನಿತ್ಯದ ಕಲಿಯುವವನಾಗಿರಬೇಕು ಎಂದ ಅವರು, ವಿದ್ಯಾರ್ಥಿಗಳು ಹೆಚ್ಚು ಅಧ್ಯಯನ ಮಾಡಬೇಕು. ನ್ಯಾಯಾಲಯಗಳು ಮತ್ತು ಸುಪ್ರೀಂ ಕೋರ್ಟ್‌ನ ಮಹತ್ವದ ತೀರ್ಪುಗಳನ್ನು ಒಳಗೊಂಡ ಪುಸ್ತಕಗಳನ್ನು ಓದಿ ಮನನ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಕೇಳುವ ಯಾವುದೇ ರೀತಿಯ ಪ್ರಶ್ನೆಗಳನ್ನು ಎದುರಿಸಲು ಶಿಕ್ಷಕರು ಸಿದ್ಧರಾಗಿರಬೇಕು. ವಿದ್ಯಾರ್ಥಿಗಳು ಸಹ ವಿಷಯದ ಬಗ್ಗೆ ತಿಳುವಳಿಕೆಯನ್ನು ಹೊಂದಲು ಮತ್ತು ಅವರ ಜ್ಞಾನವನ್ನು ಹೆಚ್ಚಿಸುವ ಸಂಬಂಧಿತ ಪ್ರಶ್ನೆಗಳನ್ನು ಕೇಳಲು ಸಾಕಷ್ಟು ಬುದ್ಧಿವಂತರಾಗಿರಬೇಕು ಎಂದು ಹೇಳಿದರು.

ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎಸ್.ಉಮೇಶ್, ಎಬಿವಿಪಿ ವಿಭಾಗೀಯ ಸಂಚಾಲಕ ಶ್ರೀರಾಮ್, ನಗರ ಕಾರ್ಯದರ್ಶಿ ಎಂ.ಶಿವು ಉಪಸ್ಥಿತರಿದ್ದರು.

ಸಚಿವ ವಿ.ಸೋಮಣ್ಣ ವಿರುದ್ಧ ಆರೋಪಕ್ಕೆ ಖಂಡನೆ

ಮೈಸೂರು,ಏ.11(ಎಂಟಿವೈ)– ಕೊಳ್ಳೇಗಾಲದಲ್ಲಿ ಇತ್ತೀಚೆಗೆ ನಡೆದ ಲಿಂಗಾಯತ ಸಮಾಜದ ಯುವ ಘಟಕ ಉದ್ಘಾಟನೆ ವೇಳೆ ಸಮಾಜದ ಹಿರಿಯ ನಾಯಕರೂ ಆದ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿರುವುದು ಖಂಡನೀಯ ಎಂದು ಮಲೆ ಮಹದೇಶ್ವರ ಬೆಟ್ಟ ಪ್ರಾಧಿಕಾರದ ಮಾಜಿ ಅಧ್ಯಕ್ಷ ಆಲನಹಳ್ಳಿ ಮಹದೇವಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಳ್ಳೇಗಾಲದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಪರಮಶಿವಯ್ಯ, ಕಳೆದ ಚುನಾವಣೆಯಲ್ಲಿ ಗುಂಡ್ಲುಪೇಟೆಯಲ್ಲಿ ಸಿ.ಎಸ್.ನಿರಂಜನ್, ಹನೂರಿನ ನಾಗಪ್ಪ ಅವರ ಪುತ್ರ ಪ್ರೀತಮ್, ಚಾಮರಾಜನಗರದಲ್ಲಿ ಪ್ರೊ. ಮಲ್ಲಿಕಾರ್ಜುನಪ್ಪ ಅವರನ್ನು ಸೋಲಿಸಲು ಸೋಮಣ್ಣ ಯತ್ನಿಸಿದರೆಂದು ಆರೋಪಿಸಿರುವುದು ಸರಿಯಲ್ಲ. ಅಲ್ಲದೆ ತಾವು ಎಂಎಲ್‌ಸಿಯಾಗುವುದನ್ನು ಸೋಮಣ್ಣ ತಪ್ಪಿಸಿದರೆಂದು ಯಾವುದೇ ಆಧಾರವಿಲ್ಲದೆ ಪರಮಶಿವಯ್ಯ ಆರೋಪಿಸಿರುವುದು ಖಂಡನೀಯ ಎಂದರು.

ಸುಳ್ಳು ಆರೋಪಗಳಿಂದಾಗಿ ಸಚಿವ ವಿ.ಸೋಮಣ್ಣ ಅವರನ್ನು ಮೂಲೆಗುಂಪಾಗಿಸುವ ಯತ್ನಗಳು ನಿರಂತರವಾಗಿ ಸಾಗುತ್ತಿದೆ. ಅದಕ್ಕೆ ಆಸ್ಪದ ನೀಡುವುದಿಲ್ಲ. ಸಚಿವರ ವಿರುದ್ಧವೇ ಸುಳ್ಳು ಆರೋಪ ಮಾಡಿರುವುದರಿಂದ ಪರಮಶಿವಯ್ಯ ಅವರನ್ನು ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ವಿ.ಸೋಮಣ್ಣ ಅಭಿಮಾನಿಗಳ ಬಳಗದ ಮುಖಂಡರಾದ ಎಸ್.ಎಂ. ಶಿವಪ್ರಕಾಶ್, ಕಂಡೇಶ್, ಮಹದೇವಸ್ವಾಮಿ ಹಾಗೂ ಅಶೋಕ್ ಇದ್ದರು.

ಗಾನಭಾರತೀ ಸಂಗೀತ ನೃತ್ಯ ಶಾಲೆಯಲ್ಲಿ ಮಕ್ಕಳ ಬೇಸಿಗೆ ಶಿಬಿರ

ಮೈಸೂರು, ಏ. 11– ಮೈಸೂರಿನ ಗಾನಭಾರತೀ ಸಂಗೀತ ನೃತ್ಯ ಶಾಲೆಯಲ್ಲಿ ಏ. 18 ರಿಂದ 27ರ ತನಕ ಪ್ರತಿ ದಿನ ಬೆಳಗ್ಗೆ 10 ರಿಂದ ಸಾಯಂಕಾಲ 5 ರವರೆಗೆ 6 ವರ್ಷದಿಂದ 16 ವರ್ಷದ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಏರ್ಪಡಿಸಲಾಗಿದೆ.

ಮಕ್ಕಳ ಪ್ರತಿಭೆ, ವ್ಯಕ್ತಿತ್ವ ವಿಕಸನ ಹಾಗೂ ಪಠ್ಯೇತರ ವಿಷಯದಲ್ಲಿ ಮುಕ್ತವಾಗಿ ಕಲಿಯಲು, ರಜೆ ಅರ್ಥಪೂರ್ಣವಾಗಿ ಬಳಸಿಕೊಳ್ಳಲಿ ಎಂಬ ಆಶಯದಿಂದ ಪರಿಣಿತರಿಂದ ಭಾವಗೀತೆ, ಭಕ್ತಿಗೀತೆ, ವಚನಗಳು, ರಂಗಗೀತೆ, ಜನಪದಗೀತೆ, ದೇವರ ನಾಮ, ದೇಶಭಕ್ತಿ ಗೀತೆ, ನೃತ್ಯ, ಲಘು ನೃತ್ಯ, ಜನಪದ ನೃತ್ಯ, ಅಭಿನಯ ಗೀತೆ ಮುಂತಾದವುಗಳ ಕುರಿತ ತರಬೇತಿ ನೀಡಲಾಗುವುದು. ಹೆಚ್ಚಿನ ವಿವರಗಳಿಗೆ ಮೊಬೈಲ್: 7019879167, 0821–2560313 ರಲ್ಲಿ ಸಂಜೆ 5 ರಿಂದ 7ರ ತನಕ ಸಂಪರ್ಕಿಸಬಹುದು.

ಮೈಸೂರಲ್ಲಿರುವ ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ನೀಡಲು ಕೇಂದ್ರ, ರಾಜ್ಯ ಸರ್ಕಾರಗಳ ನಿರ್ಲಕ್ಷ್ಯ

● ಶಾಸ್ತ್ರೀಯ ಕನ್ನಡ ಸ್ವಾಯತ್ತ ಕ್ರಿಯಾ ಸಮಿತಿ ಆರೋಪ ● ಕನ್ನಡ ಅತ್ಯುನ್ನತ ಸಂಸ್ಥೆಗೆ ಶಾಶ್ವತ ಕಾಯಕಲ್ಪಕ್ಕೆ ಆಗ್ರಹ

ಮೈಸೂರು, ಏ.11(ಆರ್‌ಕೆಬಿ)– ಮೈಸೂರಿನಲ್ಲಿರುವ ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರವನ್ನು ಒಂದು ಸ್ವಾಯತ್ತ ಸಂಸ್ಥೆಯನ್ನಾಗಿ ಮಾಡುವ ಕನ್ನಡಿಗರ ಆಗ್ರಹವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸದೆ ನಿರ್ಲಕ್ಷ್ಯ ವಹಿಸಿವೆ ಎಂದು ಶಾಸ್ತ್ರೀಯ ಕನ್ನಡ ಸ್ವಾಯತ್ತ ಕ್ರಿಯಾ ಸಮಿತಿ ಆರೋಪಿಸಿದೆ.


ಸಮಿತಿಯ ಪ.ಮಲ್ಲೇಶ್, ನಾ.ದಿವಾಕರ, ಸ.ರ.ಸುದರ್ಶನ್, ಕಾಳೇಗೌಡ ನಾಗವಾರ ಅವರು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿ, ಸರ್ಕಾರದ ನಿರ್ಲಕ್ಷ್ಯವನ್ನು ಖಂಡಿಸಿದ್ದಾರೆ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಮಾನ್ಯತೆ ದೊರೆತು 14 ವರ್ಷಗಳೇ ಸಂದಿವೆ. ಮೈಸೂರಿನ ಮತ್ತು ರಾಜ್ಯದ ಹಲವು ಸಾಹಿತಿ, ಕಲಾವಿದರು, ಬುದ್ಧಿಜೀವಿಗಳು ಮತ್ತು ಕನ್ನಡಪರ ಸಂಘಟನೆಗಳು ಮೈಸೂರಿನಲ್ಲಿ ಸ್ಥಾಪಿಸಲಾಗಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ನೀಡಬೇಕು ಎಂದು ಆಗ್ರಹಿಸಿ ಹೋರಾಟ ನಡೆಸುತ್ತಲೇ ಬಂದಿವೆ. 2008ರಲ್ಲಿ ಮೈಸೂರಿನಲ್ಲೇ ಇರುವ ಕೇಂದ್ರೀಯ ಭಾರತೀಯ ಭಾಷಾ ಸಂಸ್ಥೆಯ (ಸಿಐಐಎಲ್) ಸುಪರ್ದಿಯಲ್ಲಿ ಸ್ಥಾಪಿಸಲಾದ ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರವನ್ನು ಬೆಂಗಳೂರಿಗೆ ವರ್ಗಾಯಿಸುವ ಪ್ರಯತ್ನಗಳು ನಡೆದಿದ್ದರೂ, ಕನ್ನಡ ಹೋರಾಟಗಾರರ ಒತ್ತಡಕ್ಕೆ ಮಣಿದು ಈ ಸಂಸ್ಥೆಯನ್ನು ಮೈಸೂರಿನಲ್ಲೇ ಉಳಿಸಿಕೊಳ್ಳಲಾಗಿದೆ. ಆದರೆ ಅದಕ್ಕೆ ಸ್ವಾಯತ್ತತೆ ನೀಡಲು ಸರ್ಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ ಎಂದು ಟೀಕಿಸಿದ್ದಾರೆ.

ತಮಿಳು ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರವು ಹಲವು ವರ್ಷಗಳ ಹಿಂದೆಯೇ ಸಿಐಐಎಲ್ ಸಂಸ್ಥೆಯಿದ ಬೇರ್ಪಟ್ಟು ತನ್ನದೇ ಆದ ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸಿದ್ದು, ಇತ್ತೀಚೆಗೆ ಸ್ವಂತ ಕಟ್ಟಡವನ್ನೂ ನಿರ್ಮಿಸಿಕೊಂಡಿದೆ. ತಮಿಳು ಭಾಷೆಗೆ ಸ್ವಾಯತ್ತೆ ನೀಡಿರುವ ಒಕ್ಕೂಟ ಸರ್ಕಾರ ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ನೀಡಲು ಮೀನಾಮೇಷ ಎಣಿಸುತ್ತಿದೆ ಮೈಸೂರಿನಲ್ಲಿರುವ ಶಾಸ್ತ್ರೀಯ ಅಧ್ಯಯನ ಕೇಂದ್ರಕ್ಕೆ ಸ್ವಂತ ಕಟ್ಟಡ ನಿರ್ಮಿಸಲು ಮೈಸೂರು ವಿಶ್ವ ವಿದ್ಯಾನಿಲಯದ ವತಿಯಿಂದ 4.2 ಎಕರೆ ಭೂಮಿಯನ್ನು ನೀಡಲಾಗಿದೆ. ಈವರೆಗೂ ಇದನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಯತ್ನಗಳು ನಡೆದಿಲ್ಲ. ಈಗ ಈ ಪ್ರಯತ್ನಗಳು ಚುರುಕಾಗಿದ್ದು, ಅಧ್ಯಯನ ಕೇಂದ್ರದ ಕಚೇರಿಯನ್ನು ಜಯಲಕ್ಷ್ಮೀವಿಲಾಸ ಅರಮನೆಯ ಕಟ್ಟಡಕ್ಕೆ ರವಾನಿಸುತ್ತದೆ ಎಂದು ಹೇಳಲಾಗುತ್ತಿದೆ. ಇದು ಕೇವಲ ಆಡಳಿತಾತ್ಮಕ ಪ್ರಕ್ರಿಯೆಯಾಗಿದ್ದು, ಇದರಿಂದ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರದ ಸ್ವಾಯತ್ತತೆ ದೊರೆತಂತಾಗುವುದಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯ ಸರ್ಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಕೂಡಲೇ ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರವನ್ನು ಸಿಐಐಎಲ್ ಸಂಸ್ಥೆಯಿಂದ ಬೇರ್ಪಡಿಸಿ, ಸ್ವಾಯತ್ತತೆ ಪಡೆಯುವ ನಿಟ್ಟಿನಲ್ಲಿ ಕ್ಷಿಪ್ರವಾಗಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಇದು ಮೈಸೂರಿನ ಮತ್ತು ರಾಜ್ಯದ ಕನ್ನಡ ಪರ ಸಂಘಟನೆಗಳ, ಸಾಹಿತಿಗಳ ಮತ್ತು ಕಲಾವಿದರ ಬಹುಕಾಲದ ಒತ್ತಾಯವಾಗಿದೆ ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರವು ಸಿಐಐಎಲ್ ಸುಪರ್ದಿನಿಂದ ಮುಕ್ತಿ ಪಡೆದು ಸ್ವಾಯತ್ತತೆಯನ್ನು ಪಡೆಯುವುದು ರಾಜ್ಯ ಸರ್ಕಾರದ ಆದ್ಯತೆಯಾಗಬೇಕಿದೆ. ಆಡಳಿತ ನಿರ್ವಹಣೆಯ ಕಚೇರಿಯನ್ನು ಜಯಲಕ್ಷ್ಮೀ ವಿಲಾಸ ಅರಮನೆಗೆ ವರ್ಗಾಯಿಸುವ ಪ್ರಕ್ರಿಯೆ ಕೇವಲ ಅಲಂಕಾರಿಕವಾಗಿ ಉಳಿಯದೇ, ಮೈಸೂರು ವಿವಿ ನೀಡಿರುವ ಜಾಗದಲ್ಲಿ ಸ್ವಂತ ಕಟ್ಟಡ ನಿರ್ಮಿಸುವುದು, ಅಲ್ಲದೆ ಪೂರ್ಣ ಸ್ವಾಯತ್ತತೆಗಾಗಿ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದ್ದಾರೆ.

ಜಾರ್ಖಂಡ್‌ನಲ್ಲಿ ರೋಪ್ ವೇ ದುರಂತ: ಮೂವರ ಸಾವು

● 32 ಮಂದಿ ರಕ್ಷಣೆ; 15 ಮಂದಿ ರಕ್ಷಿಸಲು ಮುಂದುವರಿದ ಕಾರ್ಯಾಚರಣೆ ● ಜಾರ್ಖಂಡ್‌ನ ದಿಯೋಘರ್ ಜಿಲ್ಲೆಯ ಬಾಬಾ ಬೈದ್ಯನಾಥ ದೇವಸ್ಥಾನದ ಬಳಿ ದುರಂತ ● ತ್ರಿಕೂಟ ಬೆಟ್ಟಗಳ ರೋಪ್‌ವೇಯಲ್ಲಿ ಕೆಲವು ಕೇಬಲ್ ಕಾರುಗಳು ಪರಸ್ಪರ ಡಿಕ್ಕಿ ● ಕನಿಷ್ಠ 10 ಪ್ರವಾಸಿಗರು ಗಾಯಗೊಂಡಿದ್ದು, ಇಬ್ಬರು ಮಹಿಳಾ ಪ್ರವಾಸಿಗರು ಸಾವು





ದಿಯೋಘರ್, ಏ. 11– ಭಾನುವಾರ ಜಾರ್ಖಂಡ್‌ನ ದಿಯೋಘರ್ ಜಿಲ್ಲೆಯ ಬಾಬಾ ಬೈದ್ಯನಾಥ ದೇವಸ್ಥಾನದ ಬಳಿಯ ತ್ರಿಕೂಟ ಬೆಟ್ಟಗಳ ರೋಪ್‌ವೇಯಲ್ಲಿನ ತಾಂತ್ರಿಕ ದೋಷದಿಂದ ಕೆಲವು ಕೇಬಲ್ ಕಾರುಗಳು ಪರಸ್ಪರ ಡಿಕ್ಕಿ ಹೊಡೆದು ಇಬ್ಬರು ಮಹಿಳಾ ಪ್ರವಾಸಿಗರು ಸೇರಿ ಮೂವರು ಮೃತಪಟ್ಟಿದ್ದಾರೆ. ರೋಪ್‌ವೇಯಲ್ಲಿನ 12 ಕ್ಯಾಬಿನ್‌ಗಳಲ್ಲಿ 50 ಮಂದಿ ಇದ್ದರೆಂದು ಹೇಳಲಾಗಿದ್ದು, ಇಂದು ರಾತ್ರಿ ವೇಳೆಗೆ 32 ಮಂದಿಯನ್ನು ರಕ್ಷಿಸಿದ್ದು, ಇನ್ನುಳಿದ 15 ಮಂದಿ ರಕ್ಷಣೆಗಾಗಿ ಕಾರ್ಯಾಚರಣೆ ಮುಂದುವರೆದಿದೆ.

ಕೇಬಲ್ ಕಾರ್‌ಗಳು ಡಿಕ್ಕಿ ಹೊಡೆದಾಗ ಇಬ್ಬರು ಮಹಿಳೆಯರು ಕೆಳಗೆ ಬಿದ್ದು ಸಾವನ್ನಪ್ಪಿದರೆ, ರಕ್ಷಣಾ ಕಾರ್ಯಾಚರಣೆ ವೇಳೆ ಹೆಲಿಕಾಪ್ಟರ್‌ನಿಂದ ಜಾರಿ ಬಿದ್ದು ವ್ಯಕ್ತಿಯೋರ್ವ ಮೃತಪಟ್ಟಿದ್ದಾನೆ.

ಕೇಬಲ್ ಕಾರುಗಳಲ್ಲಿ ಸಿಲುಕಿಕೊಂಡಿರುವವರ ರಕ್ಷಣಾ ಕಾರ್ಯಾಚರಣೆಗೆ ಎರಡು ಎಂಐ–17 ಹೆಲಿಕಾಪ್ಟರ್‌ಗಳನ್ನು ಬಳಸಲಾಯಿತು ಎಂದು ಭಾರತೀಯ ವಾಯುಪಡೆ (ಐಎಎಫ್) ಅಧಿಕಾರಿಗಳು ತಿಳಿಸಿದ್ದಾರೆ. ಅಲ್ಲದೆ, ITBP ಮತ್ತು NDRF ತಂಡಗಳು ಕೂಡ ಸ್ಥಳಕ್ಕೆ ಧಾವಿಸಿ, ರಕ್ಷಣಾ ಕಾರ್ಯದಲ್ಲಿ ತೊಡಗಿತು.

ಗಾಯಗೊಂಡವರು: ಗೋವಿಂದ ಭೋಕ್ತಾ, ಗಿರಿದಿಹ್, ಭೂಪೇಂದ್ರ ಬರ್ಮನ್, ಕೊಕ್ರಾಜಾರ್ (ಅಸ್ಸಾಂ), ದೀಪಿಕಾ ಬರ್ಮನ್, ಕೊಕ್ರಾಜಾರ್ (ಅಸ್ಸಾಂ), ಅಪರಿಚಿತ ಒಂದು ವರ್ಷದ ಬಾಲಕಿ, ರೂಪಾ ಕುಮಾರಿ (9), ಕರ್ಮತಾಂಡ್, ಜಮ್ತಾರಾ, ಸೋನಿ ದೇವಿ, ತಿರನಗರ, ರಮಣ್ ಕುಮಾರ್ ಶ್ರೀವಾಸ್ತವ, ದರ್ಭಾಂಗ, ಸುಧಾ ರಾಣಿ, W/o ರಮಣ್‌ಕುಮಾರ್ ಶ್ರೀವಾಸ್ತವ, ದರ್ಭಾಂಗ, ಖುಷ್ಬು ರಾಣಿ, D/o ರಮಣ್ ಕುಮಾರ್ ಶ್ರೀವಾಸ್ತವ, ದರ್ಭಾಂಗ.

ಕಾರಣ ಇನ್ನೂ ತಿಳಿದು ಬಂದಿಲ್ಲ: ತಾಂತ್ರಿಕ ದೋಷದಿಂದ ಈ ಘಟನೆ ಸಂಭವಿಸಿದ್ದು, ಕೇಬಲ್ ಕಾರುಗಳು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆದರೆ, ಅಪಘಾತಕ್ಕೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಘಟನೆಯ ನಂತರ ಕೇಬಲ್ ಕಾರಿನಿಂದ ಜಿಗಿಯಲು ಯತ್ನಿಸಿದ ದಂಪತಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೇಬಲ್ ಕಾರ್‌ಗಳಲ್ಲಿ ಸಿಕ್ಕಿಬಿದ್ದಿದ್ದವರ ರಕ್ಷಣೆ: ರಕ್ಷಣಾ ಕಾರ್ಯಾಚರಣೆಗಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ತಂಡವನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ ಎಂದು ದಿಯೋಘರ್ ಜಿಲ್ಲಾಧಿಕಾರಿ ಮಂಜುನಾಥ ಭಜಂತ್ರಿ ಇಂದು ಮಧ್ಯಾಹ್ನ ತಿಳಿಸಿದ್ದರು. ಸ್ಥಳೀಯ ಜನರು ಸಹ ರಕ್ಷಣಾ ಕಾರ್ಯಾಚರಣೆಯಲ್ಲಿ ಎನ್‌ಡಿ ಆರ್‌ಎಫ್‌ಗೆ ಸಹಾಯ ಮಾಡುತ್ತಿದ್ದಾರೆ ಎಂದು ಅವರು ಹೇಳಿದ್ದರು. ಸಂಜೆ ವೇಳೆಗೆ ಕೇಬಲ್ ಕಾರುಗಳಲ್ಲಿ ಸಿಲುಕಿದ್ದ 32 ಮಂದಿಯನ್ನು ರಕ್ಷಿಸಿ, ಅಸ್ವಸ್ಥಗೊಂಡವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.





ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮ ಜಯಂತಿ(ಏ.14) ಪ್ರಯುಕ್ತ ಬಿಜೆಪಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಎಸ್‌ಟಿ ಮೋರ್ಚಾ ವತಿಯಿಂದ 30ನೇ ವಾರ್ಡ್ ಕ್ಯಾತಮಾರನಹಳ್ಳಿಯಲ್ಲಿ ಸೋಮವಾರ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಸಂದೇಶ್ ಸ್ವಾಮಿ ಆರೋಗ್ಯ ಪರೀಕ್ಷೆ ಮಾಡಿಸಿಕೊಂಡರು. ಪಾಲಿಕೆ ಸದಸ್ಯೆ ಉಷಾ ನಾರಾಯಣ್, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಗಿರಿಧರ್, ಎಸ್‌ಟಿ ಮೋರ್ಚಾ ಅಧ್ಯಕ್ಷ ಲಕ್ಷ್ಮಣ್, ಮುಖಂಡರಾದ ಕೃಷ್ಣನಾಯಕ್, ಮಹೇಶ್, ಸ್ವಾಮಿಗೌಡ, ನಾರಾಯಣ್ ಲೋಲಪ್ಪ, ಬಸವರಾಜ್ ಜೋಗಿ, ಮಮತಾ ಚಂದ್ರಶೇಖರ್, ಶಶಿ, ಹೇಮಂತ್, ಪದ್ಮನಾಭ, ಸಂತೋಷ್ ಶೆಟ್ಟಿ, ಸ್ವಾಮಿ, ವಿನೋದ್ ಮತ್ತಿತರರು ಉಪಸ್ಥಿತರಿದ್ದರು.

'ಶಿವಸಂಚಾರ ನಾಟಕೋತ್ಸವ'ಕ್ಕೆ ಚಾಲನೆ




ಮೈಸೂರು, ಏ.11(ಎಂಕೆ)– ನಗರದ ಶ್ರೀ ಹೊಸಮಠ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿರುವ ನಟರಾಜ ಕಲಾಮಂಟಪದಲ್ಲಿ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಮತ್ತು ನಗರ ಘಟಕ, ಕದಳಿ ಮಹಿಳಾ ವೇದಿಕೆ, ಕನ್ನಡ ಸಾಹಿತ್ಯ ಕಲಾಕೂಟ, ವೀರಶೈವ ಲಿಂಗಾಯತ ಮಹಾಸಭಾ, ಬಸವ ಬಳಗಗಳ ಒಕ್ಕೂಟ, ಜಾಗತಿಕ ಲಿಂಗಾಯತ ಮಹಾಸಭಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ 'ಶಿವಸಂಚಾರ ನಾಟಕೋತ್ಸವ'ಕ್ಕೆ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್ ಸೋಮವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ನಾಟಕಗಳು ಪೂರ್ಣ ಪ್ರಮಾಣದಲ್ಲಿ ಸಮಾಜವನ್ನು ತಿದ್ದಿತೀಡುವ ಕೆಲಸವನ್ನು ಮಾಡುತ್ತವೆ. ಸಾಮಾಜಿಕ ಬದಲಾವಣೆಯನ್ನು ತರುವ ಉದ್ದೇಶ ಹಾಗೂ ಧಾರ್ಮಿಕ ಪ್ರಜ್ಞೆ ಮೂಡಿಸಲು ನಾಟಕಗಳು ಸಹಾಯಕವಾಗಿವೆ. ಒಂದು ವರ್ಷ ತರಬೇತಿ ಪಡೆದು ನಾಟಕ ಪ್ರದರ್ಶನ ನೀಡುತ್ತಿರುವುದನ್ನು ನೋಡಿದರೆ ನಾಟಕಾಭ್ಯಾಸದಲ್ಲೂ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಂಡಂತೆ ಕಾಣಿಸುತ್ತದೆ ಎಂದರು.

ಹಿರಿಯ ರಂಗಕರ್ಮಿ ಪಿ.ಗಂಗಾಧರ ಸ್ವಾಮಿ ಮಾತನಾಡಿ, ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾ ಸಂಘದ ಕಲಾವಿದರು ನಡೆಸಿಕೊಡುವ 'ಶಿವಸಂಚಾರ ನಾಟಕೋತ್ಸವ' ಅಗತ್ಯ ಪೂರ್ವ ತಯಾರಿಯೊಂದಿಗೆ ಅಯೋಜನೆಯಾಗಿದ್ದು, ಮೂರು ದಿನಗಳು ಶಿವಶರಣರ ಕುರಿತಾ ಕತೆಯನ್ನು ಜನಮಾನಸಕ್ಕೆ ಕೊಂಡೊಯ್ಯಲಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಳಿಕ ಚಂದ್ರಶೇಖರ ತಾಳ್ಯ ರಚನೆ ಹಾಗೂ ಛಾಯಾ ಭಾರ್ಗವಿ ನಿರ್ದೇಶನದ 'ಒಕ್ಕಲಿಗ ಮುದ್ದಣ್ಣ' ನಾಟಕವನ್ನು ಪ್ರದರ್ಶಿಸಲಾಯಿತು. ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಕನ್ನಡ ಸಾಹಿತ್ಯ ಕಲಾಕೂಟದ ಎಂ. ಚಂದ್ರಶೇಖರ್, ಮಗು ಸದಾನಂದಯ್ಯ ಮತ್ತಿತರರು ಉಪಸ್ಥಿತರಿದ್ದರು.

'ಬಯಲುತಾಯಿ', 'ಆರದಿರಲಿ ಬದುಕು–ಬೆಳಕು', 'ಬಿಡಿ ಹೂಗಳು' ಕೃತಿ ಬಿಡುಗಡೆ



ಮೈಸೂರು, ಏ.11(ಎಂಕೆ)– ಮೈಸೂರು ವಿವಿ ಸಂಜೆ ಕಾಲೇಜಿನಲ್ಲಿ ಲೇಖಕಿ ಡಾ.ಕೆ ಸೌಭಾಗ್ಯವತಿ ಅವರ 'ಬಯಲುತಾಯಿ' ಹಾಗೂ 'ಆರದಿರಲಿ ಬದುಕು–ಬೆಳಕು' ಹಾಗೂ ಡಾ.ಕೆ.ಅಕ್ಕಮಹಾದೇವಿ ಅವರ 'ಬಿಡಿ ಹೂಗಳು' ಕೃತಿಗಳನ್ನು ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ಎಂ.ಜಿ.ಮಂಜುನಾಥ ಸೋಮವಾರ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಹೊಟ್ಟೆಕಿಚ್ಚು ಪಡುವ ಕಾಲಘಟ್ಟದಲ್ಲಿ ಸಹೋದ್ಯೋಗಿಗಳ ಕೃತಿಗಳನ್ನು ಎಲ್ಲರೂ ಸೇರಿ ಬಿಡುಗಡೆ ಮಾಡುತ್ತಿರುವುದು ಮಾದರಿಯಾಗಿದೆ. ಡಾ.ಕೆ.ಅಕ್ಕಮಹಾದೇವಿ ಅವರು ಮಲ್ಲಿಗೆ, ಸಂಪಿಗೆ ಸೇರಿಸಿ ಬಿಡಿ ಹೂಗಳನ್ನು ಕಟ್ಟಿಕೊಟ್ಟಿದ್ದಾರೆ. ಶಾಸನ ಸಾಹಿತ್ಯದ ಬಗ್ಗೆ ಅವರಿಗಿರುವ ಪ್ರೀತಿ, ಕಾಳಜಿ ಕೃತಿಯಲ್ಲಿ ಎದ್ದು ಕಾಣುತ್ತದೆ. ಹಲ್ಮಿಡಿ ಶಾಸನದಿಂದ ಹಿಡಿದು ಕುವೆಂಪು ಅವರ ಮೇಲೆ ರಾಮಕೃಷ್ಣ ಆಶ್ರಮ ಬೀರಿದ ಪ್ರಭಾವವನ್ನೂ ವಿವರಿಸಿದ್ದಾರೆ ಎಂದರು.

ಡಾ.ಕೆ. ಸೌಭಾಗ್ಯವತಿ ಅವರ ಸೃಜನಶೀಲತೆಗೆ 'ಬಯಲುತಾಯಿ' ಹಾಗೂ 'ಆರದಿರಲಿ ಬದುಕು–ಬೆಳಕು' ಕೃತಿಗಳು ಸಾಕ್ಷಿಯಾಗಿವೆ. ಪ್ರಖರ ಸ್ತ್ರೀವಾದಿ ಚಿಂತನೆ ಅವರ ಲೇಖನಗಳಲ್ಲಿ ಎದ್ದು ಕಾಣುತ್ತದೆ. ಸ್ತ್ರೀಯರ ಮೇಲಿನ ದೌರ್ಜನ್ಯ, ಕೆಲ ವರ್ಷಗಳ ಹಿಂದೆ ಸದ್ದು ಮಾಡಿದ್ದ 'ಮೀ ಟೂ' ಬಗ್ಗೆಯೂ ಬರೆದಿದ್ದಾರೆ. ಬಹುಶಿಸ್ತೀಯ ಅಧ್ಯಯನಕ್ಕೆ ಈ ಕೃತಿಗಳು ಮಾದರಿಯಾಗಿದ್ದು, ಮುಂದೆಯೂ ಒಳ್ಳೆಯ ಸಾಹಿತ್ಯ ನೀಡುವ ಭರವಸೆ ಅವರ ಕೃತಿಗಳಲ್ಲಿ ಕಂಡು ಬಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ವಿವಿ ಸಂಜೆ ಕಾಲೇಜು ಪ್ರಾಂಶುಪಾಲ ಪ್ರೊ.ಹೆಚ್.ಸಿ.ದೇವರಾಜೇಗೌಡ, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಲೇಖಕಿ ಡಾ.ಕೆ. ಸೌಭಾಗ್ಯವತಿ, ಡಾ.ಕೆ.ಅಕ್ಕಮಹಾದೇವಿ, ಕೆಂಡಗಣ್ಣಸ್ವಾಮಿ, ಸಹ ಪ್ರಾಧ್ಯಾಪಕಿ ಡಾ.ಕೋಕಿಲಾ ಮತ್ತಿತರರಿದ್ದರು.

ಯುಗಾದಿ ಮುಂಗಾರು ಕವಿಗೋಷ್ಠಿಯಲ್ಲಿ ಕವಿತೆ ಸಿಂಚನ



ಮೈಸೂರು, ಏ.11(ಎಂಕೆ)– ಕಾವ್ಯ ಎಂಬುದು ಕವಿ ಮನಸ್ಸಿನ ಭಾವನೆಗಳನ್ನು ಹೊರಹೊಮ್ಮಿಸುವ ಮಾರ್ಗವಾಗಿದೆ. ಅವುಗಳು ಕವಿಯ ಉಸಿರಿನಲ್ಲಿ ಬೆರೆತಾಗ ಸುಂದರ ಕವನಗಳಾಗುತ್ತವೆ ಎಂದು ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಹೇಳಿದರು. ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕಸಾಪ ಸಭಾಂಗಣದಲ್ಲಿ ಸ್ನೇಹ ಸಿಂಚನ ಟ್ರಸ್ಟಿನ ಸಹಯೋಗದೊಂದಿಗೆ ಆಯೋಜಿಸಿದ್ದ 'ಯುಗಾದಿ ಮುಂಗಾರು ಕವಿ ಗೋಷ್ಠಿ'ಯನ್ನು ಕುವೆಂಪು ಅವರ 'ಮುಂಗಾರು' ಎಂಬ ಕವನ ವಾಚಿಸುವ ಮೂಲಕ ಉದ್ಘಾಟಿಸಿದ ಅವರು, ಕವಿಗಳ ಕಾವ್ಯವು ಹೇಗಿರಬೇಕು ಎಂಬುದನ್ನು ಕುವೆಂಪು ಅವರ ಮುಂಗಾರಿನ ಕಾವ್ಯದ ಮೂಲಕ ತಿಳಿಯಬಹುದು ಎಂದರು.

ಬಳಿಕ ನಡೆದ ಕವಿಗೋಷ್ಠಿಯಲ್ಲಿ ಸಾಹಿತಿ ಕೆರೋಡಿ ಎಂ.ಲೋಲಾಕ್ಷಿ, ಎಂ.ಬಿ.ಸಂತೋಷ್, ಕೆ.ವಿ.ವಾಸು, ಸೌಗಂಧಿಕ ಜೋಯಿಸ್, ಸತೀಸ್ ಜವರೇಗೌಡ, ವರಲಕ್ಷ್ಮೀ ಮಂಜುನಾಥ್, ಆದಿಲ್ ಪಾಷ, ಎನ್.ಆರ್.ರೂಪಶ್ರೀ, ನಾರಾಯಣ ರಾವ್, ಎಚ್.ಎಸ್.ಮಧುರಾಣಿ, ಮಂಜುವಾಣಿ ಮೈಸೂರು, ಸುಭೇಂದ್ರ ಕುಮಾರ್, ಕುಮುದ, ಎಂ.ಕೆ.ರಮೇಶ್, ರಮೇಶ್ ಆಕಾಶವಾಣಿ, ಜಯಂತಿ, ನರಸಿಂಗರಾವ್, ವಾಣಿ.ಸಿ.ರಾಘವೇಂದ್ರ, ಇಂದಿರಾ ಎಚ್.ಪಾಟೀಲ್, ತುಳಸಿ ಸಿ.ವಿಜಯಕುಮಾರಿ, ಮುತ್ತುಸ್ವಾಮಿ, ಯಶೋಧ ರಾಮಕೃಷ್ಣ, ದಿವ್ಯಾ ಚೇತನ್, ಡಾ. ಅವರೇಕಾಡು ವಿಜಯಕುಮಾರ್, ಸಹನಗೌಡ, ವಡ್ಡರಹಳ್ಳಿ ನವೀನ್ ಕುಮಾರ್, ಟಿ.ತ್ಯಾಗರಾಜ್, ಮಹದೇವಸ್ವಾಮಿ, ಸುಹಾಸ್, ಮೀನಾಕ್ಷಿ, ನೇತ್ರಾವತಿ ಮತ್ತಿತರರು ತಮ್ಮ ಕವನ ವಾಚಿಸಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ನೇಹ ಸಿಂಚನ ಟ್ರಸ್ಟ್ ಅಧ್ಯಕ್ಷೆ ಮ.ನ.ಲತಾ ಮೋಹನ್, ಸಿರಿಗನ್ನಡ ವೇದಿಕೆ ರಾಜ್ಯ ಅಧ್ಯಕ್ಷೆ ಹೇಮ ಗಂಗಾ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು, ಏ. 11– ನಿರ್ವಹಣೆ ಕಾರ್ಯನಿಮಿತ್ತ ಏ. 13ರಂದು ಮೈಸೂರಿನ ವಾರ್ಡ್ ನಂ. 1ರಿಂದ 7, 20, 23, 38, 42ರಿಂದ 45, ವಾರ್ಡ್ ನಂ. 47 ಇದಕ್ಕೆ ಸಂಬಂಧಪಟ್ಟ ಹೆಬ್ಬಾಳ, ಕುಂಬಾರ ಕೊಪ್ಪಲು, ಮಂಚೇಗೌಡನಕೊಪ್ಪಲು, ಕೆಜಿ ಕೊಪ್ಪಲ್, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕನಗರ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿ ನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ, ಎಬಿಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ಎನ್.ಆರ್. ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್ ಮೊಹಲ್ಲಾ ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ವಾಣಿವಿಲಾಸ ನೀರು ಸರಬರಾಜು ವಿಭಾಗದ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.



ಚಾಮುಂಡಿಬೆಟ್ಟದ ಅಧಿದೇವತೆ ಚಾಮುಂಡೇಶ್ವರಿ ತಾಯಿಗೆ ಪೂಜೆ ಸಲ್ಲಿಸಿ, ಜೆಡಿಎಸ್‌ನ ಮಹತ್ವದ 'ಜನತಾ ಜಲಧಾರೆ' ಕಾರ್ಯಕ್ರಮಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನಾಳೆ(ಏ.12) ಸಾಂಕೇತಿಕವಾಗಿ ಚಾಲನೆ ನೀಡುವ ಹಿನ್ನೆಲೆ ಶಾಸಕ ಸಾ.ರಾ.ಮಹೇಶ್ ನೇತೃತ್ವದಲ್ಲಿ ಪೂರ್ವಸಿದ್ಧತೆ ಕುರಿತು ಸಭೆ ನಡೆಸಲಾಯಿತು. ಶಾಸಕರಾದ ಅಶ್ವಿನ್ ಕುಮಾರ್, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಚಿಕ್ಕಣ್ಣ, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ ಇನ್ನಿತರರಿದ್ದರು.

ದಕ್ಷಿಣ ಕಾಶ್ಮೀರದಲ್ಲಿ ಪಾಕ್‌ನ ಉಗ್ರ ಸೇರಿ ಇಬ್ಬರ ಹತ್ಯೆ

ಶ್ರೀನಗರ, ಏ.11– ದಕ್ಷಿಣ ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಸೋಮವಾರ ಭದ್ರತಾ ಪಡೆಗಳು ನಡೆಸಿದ ಎನ್ ಕೌಂಟರ್‌ನಲ್ಲಿ ಪಾಕಿಸ್ತಾನದ ಭಯೋತ್ಪಾದಕ ಸೇರಿ ಇಬ್ಬರು ಉಗ್ರರು ಹತ್ಯೆಯಾಗಿದ್ದು, ಪೊಲೀಸರಿಬ್ಬರು ಗಾಯಗೊಂಡಿದ್ದಾರೆ.

ಕುಲ್ಗಾಂನಲ್ಲಿ ಸ್ಥಳೀಯ ಪೊಲೀಸ್ ಹಾಗೂ ಸೇನೆ ನಡೆಸಿದ ಎನ್ ಕೌಂಟರ್‌ನಲ್ಲಿ ಒಬ್ಬ ಪಾಕ್ ಹಾಗೂ ಸ್ಥಳೀಯ ಹೈಬ್ರಿಡ್ ಉಗ್ರ ಹತ್ಯೆಯಾಗಿದ್ದು, ಇಬ್ಬರು ಪೊಲೀಸರು ಗಾಯಗೊಂಡಿದ್ದಾರೆ ಎಂದು ಕಾಶ್ಮೀರ ವಲಯ ಪೊಲೀಸರು ಟ್ವೀಟ್ ಮಾಡಿದ್ದಾರೆ.

ಹತ್ಯೆಯಾದ ಉಗ್ರರ ಪೈಕಿ ಒಬ್ಬ ಕುಲ್ಗಾಂನ ಚಾಕಿಸಮದ್ ಪ್ರದೇಶದಲ್ಲಿ ಕಳೆದ ವಾರ ನಡೆದ ಎನ್ ಕೌಂಟರ್ ಸಂದರ್ಭದಲ್ಲಿ ಭದ್ರತಾ ಪಡೆಗಳ ಕಣ್ತಪ್ಪಿಸಿ ಪರಾರಿಯಾಗಿದ್ದ ಎಂದು ಕಾಶ್ಮೀರ ವಲಯ ಐಜಿಪಿ ವಿಜಯಕುಮಾರ್ ತಿಳಿಸಿದರು.

ಸುಜೀವ್ ಸಂಸ್ಥೆ ರಿಯಾಲಿಟಿ ಶೋಗೆ ರಾಖಿ ಸಾವಂತ್ ಜಡ್ಜ್



ಮೈಸೂರು, ಏ.11(ಎಂಕೆ)– ಬಡ ಪ್ರತಿಭಾನ್ವಿತ ಕಲಾವಿದರಿಗಾಗಿ ಸುಜೀವ್ ಸಂಸ್ಥೆ ವತಿಯಿಂದ ಹಮ್ಮಿಕೊಂಡಿರುವ 'ರಿಯಾಲಿಟಿ ಶೋ'ಗೆ ಬಾಲಿವುಡ್ ನಟಿ ರಾಖಿ ಸಾವಂತ್ ಮೊದಲ ಜಡ್ಜ್ ಆಗಿದ್ದಾರೆ ಎಂದು ಸಂಸ್ಥೆ ಮುಖ್ಯಸ್ಥ ರಾಜಾರಾಂ ತಿಳಿಸಿದರು.

ತಮ್ಮ ನಿವಾಸದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, ಬಡ ಕಲಾವಿದರಿಗೆ ನೆರವಾಗುವ ನಿಟ್ಟಿನಲ್ಲಿ ಸುಜೀವ್ ಸಂಸ್ಥೆ ಹೊಸ ಹೆಜ್ಜೆ ಇಟ್ಟಿದ್ದು, ಕಲೆಯ ಎಲ್ಲಾ ವಿಭಾಗದಲ್ಲಿ ವೇದಿಕೆ ಕಲ್ಪಿಸಿದೆ. ಮೊದಲ ಬಾರಿಗೆ ಮುಂಬೈನಲ್ಲಿ 'ರಿಯಾಲಿಟಿ ಶೋ' ನಡೆಯಲಿದ್ದು, ವಯಸ್ಸಿನ ಮಿತಿಯಿಲ್ಲದೆ ಇದರಲ್ಲಿ ಭಾಗವಹಿಸಬಹುದಾಗಿದೆ ಎಂದರು.

ಎಸ್ ಅಂಡ್ ರಾಜ್ ಹೋಮ್ ಬ್ಯಾನರ್ ಅಡಿಯಲ್ಲಿ ಇದೇ ಮೊದಲ ಬಾರಿಗೆ ಓಟಿಟಿಯಲ್ಲಿ 'ರಿಯಾಲಿಟಿ ಶೋ' ಮೂಡಿಬರಲಿದ್ದು, ಈಗಾಗಲೇ ಸಾಕಷ್ಟು ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ. ಶೋನಲ್ಲಿ ವಿಜೇತ ಕಲಾವಿದರಿಗೆ ನಗದು ಬಹುಮಾನದ ಜೊತೆಗೆ ಅವರ ಕಲೆಯನ್ನು ಗುರ್ತಿಸುವ ಸಲುವಾಗಿ ಅವರಿಗೆ ಬೇಕಾದ ಸೂಕ್ತ ತರಬೇತಿಯನ್ನು ನಟಿ ರಾಖಿ ಸಾವಂತ್ ಅವರ ಅಕಾಡೆಮಿಯಲ್ಲಿ ನೀಡಲು ಮುಂದಾಗಿದ್ದೇವೆ. ದೇಶದ ಯಾವ ಮೂಲೆಯಲ್ಲಿ ಕಲಾವಿದರಿದ್ದರು ಅವರಿಗೆ ಈ ರಿಯಾಲಿಟಿ ಶೋನಲ್ಲಿ ಅವಕಾಶ ಕಲ್ಪಿಸಲಾಗುವುದು. ಮುಂಬೈನಲ್ಲಿ ಮೊದಲ ರಿಯಾಲಿಟಿ ಶೋ ನಡೆಯಲಿದ್ದು, ಮುಂದಿನ ದಿನದಲ್ಲಿ ಎಲ್ಲಾ ರಾಜ್ಯದ ಆಯಾ ಭಾಷೆಯಲ್ಲಿ ನಡೆಸಲು ಸಿದ್ದತೆ ಮಾಡಿದ್ದೇವೆ. ಸದ್ಯಕ್ಕೆ ರಾಖಿ ಸಾವಂತ್ ಅವರು ಮಾತ್ರ ಜಡ್ಜ್ ಆಯ್ಕೆಯಾಗಿದ್ದು ಇನ್ನುಳಿದ ತೀರ್ಪುಗಾರರು ಆಯ್ಕೆಯಾದ ಬಳಿಕ ರಿಯಾಲಿಟಿ ಶೋ ಕುರಿತು ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

ಬಾಲಿವುಡ್ ರಾಖಿ ಸಾವಂತ್ ಮಾತನಾಡಿ, ನಾನು ಕಡು ಬಡ ಕುಟುಂಬದಿಂದ ಮೇಲೆ ಬಂದಿದ್ದೇನೆ. ನಮ್ಮ ತಂದೆ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿದವರು. ಇದೀಗ ನಾನು ಸಿನಿಮಾ ರಂಗದಲ್ಲಿ ಇದ್ದೇನೆ. ರಿಯಾಲಿಟಿ ಶೋ ಹೊಸ ಕಲಾವಿದರಿಗೆ ಉತ್ತಮ ವೇದಿಕೆಯಾಗಿದೆ. ನಾನು ಇದರಲ್ಲಿ ಭಾಗವಹಿಸುತ್ತಿರುವುದಕ್ಕೆ ಖುಷಿಯಾಗಿದೆ ಎಂದರು.

ನೆರೆ ರಾಜ್ಯಗಳಲ್ಲಿ ಹೊಸ ತಳಿ XE ಪತ್ತೆ ಹಿನ್ನೆಲೆ
ಮಾಸ್ಕ್ ಹಾಕದೇ ಹೊರಗೆ ಹೋಗಬೇಡಿ

● ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಖಡಕ್ ಎಚ್ಚರಿಕೆ
● ಜೂನ್ ಇಲ್ಲವೇ ಜುಲೈನಲ್ಲಿ 4ನೇ ಅಲೆ ಅಪ್ಪಳಿಸುವ ಸಾಧ್ಯತೆ



ಬೆಂಗಳೂರು, ಏ.11– ನೆರೆ ರಾಜ್ಯಗಳಲ್ಲಿ ಹೊಸ ತಳಿ XE ಪತ್ತೆ ಹಿನ್ನೆಲೆ ಕರ್ನಾಟಕ ಕೂಡ ಅಲರ್ಟ್ ಆಗಿದೆ. ತಾಂತ್ರಿಕ ಸಲಹಾ ಸಮಿತಿ ಸಭೆ ಬಳಿಕ ಮಾತಾಡಿದ ಆರೋಗ್ಯ ಸಚಿವ ಸುಧಾಕರ್, 8 ದೇಶಗಳಲ್ಲಿ ನಾಲ್ಕನೇ ಅಲೆ ಹೆಚ್ಚಾಗಿದೆ, ಹೊಸ ರೂಪಾಂತರಿ XE ಇಂದ ಹೆಚ್ಚಾಗಿದೆ. ಅಲ್ಲದೇ ನಮ್ಮ ದೇಶದಲ್ಲಿ ಹರಿಯಾಣ, ದೆಹಲಿಯಲ್ಲಿ ಸೋಂಕು ಹೆಚ್ಚಾಗಿದೆ. ಇತ್ತೀಚಿಗೆ ಜನರು ಮಾಸ್ಕ್ ಹಾಕೋದನ್ನೇ ಮರೆತಿದ್ದಾರೆ. ಮುಂದೆ ಎಲ್ಲರೂ ಕಡ್ಡಾಯವಾಗಿ ಮಾಸ್ಕ್ ಧರಿಸಿ. ಕೊರೊನಾ ಹರಡದಂತೆ ತಡೆಯಲು ಮಾಸ್ಕ್ ಧರಿಸಲೇಬೇಕು ಎಂದು ಸುಧಾಕರ್ ಹೇಳಿದ್ದಾರೆ. ಬೂಸ್ಟರ್ ಡೋಸ್‌ಗಳನ್ನು ಕಡ್ಡಾಯವಾಗಿ ಹಾಕಿಸಿ ಕೊಳ್ಳುವಂತೆ ಸಚಿವ ಡಾ.ಸುಧಾಕರ್ ಮನವಿ ಮಾಡಿದ್ದಾರೆ.

ವಿದೇಶದಿಂದ ಬಂದವರ ಮೇಲೆ ನಿಗಾ: ವಿದೇಶಗಳಲ್ಲಿ ಕೊರೊನಾ 4ನೇ ಅಬ್ಬರ ಜೋರಾಗಿದೆ. ಹೀಗಾಗಿ ಸಭೆಯಲ್ಲಿ ಸೋಂಕು ಹೆಚ್ಚಿರುವ ದೇಶಗಳಿಂದ ಬರುವವರ ಮೇಲೆ ನಿಗಾ ವಹಿಸಲು ಅಭಿಪ್ರಾಯ ವ್ಯಕ್ತವಾಗಿದೆ. ಏರ್‌ಪೋರ್ಟ್‌ಗೆ ಬಂದ ಬಳಿಕ ಅವರನ್ನು ಟೆಸ್ಟ್ ಮಾಡಿ, ಮನೆಗೆ ಹೋದ ಬಳಿಕ ಟೆಲಿ ಮಾನಿಟರಿಂಗ್ ಮಾಡಲು ತೀರ್ಮಾನ ಮಾಡಲಾಗಿದೆ. ದಕ್ಷಿಣ ಕೋರಿಯಾ, ಹಾಂಕಾಂಗ್, ಯುಕೆ, ಕೋರಿಯಾ, ಜರ್ಮನಿ, ಚೀನಾ ಸೇರಿದಂತೆ 8 ದೇಶಗಳಿಂದ ಬರುವವರಿಗೆ ಮಾರ್ಗ ಸೂಚಿ ಹೊರಡಿಸುತ್ತೇವೆ. ಸೋಂಕು ಹರಡದಂತೆ ಎಲ್ಲಾ ಮುನ್ನೆಚ್ಚರಿಕೆ ತೆಗೆದು ಕೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಜೂನ್ ಅಥವಾ ಜುಲೈನಲ್ಲಿ 4ನೇ ಅಲೆ: IIT ರಿಪೋರ್ಟ್ ಪ್ರಕಾರ ಜೂನ್, ಜುಲೈನಲ್ಲಿ ನಾಲ್ಕನೇ ಅಲೆ ಬರುತ್ತದೆ ಎಂದು ಹೇಳಲಾಗಿದೆ. ಹೀಗಾಗಿ ಸೋಕು ಹರಡದಂತೆ ಮುನ್ನೆಚ್ಚರಿಕೆವಹಿಸಲು ಜನರು ಸಹ ಸರ್ಕಾರದ ಜೊತೆ ಕೈ ಜೋಡಿಸಬೇಕು ಎಂದು ಸಚಿವ ಸುಧಾಕರ್ ಹೇಳಿದ್ದಾರೆ. ಇತ್ತೀಚಿಗೆ ಜನ ಮಾಸ್ಕ್ ಹಾಕೋದನ್ನು ಮರೆತಿದ್ದಾರೆ, ಸೋಂಕು ಹೆಚ್ಚಾಗದಂತೆ ತಡೆಯಲು ಮಾಸ್ಕ್ ಬಳಕೆ ಮಾಡೋದನ್ನು ಮುಂದುವರೆಸಿ.

60 ವರ್ಷ ಮೇಲ್ಪಟ್ಟ ಜನರು ಮೂರನೇ ಡೋಸ್ ಹಾಕಿಸಿಕೊಂಡಿಲ್ಲ, ನಾಲ್ಕನೇ ಅಲೆ ಬರುವ ಸೂಚನೆ ಇದೆ. ಬೂಸ್ಟರ್ ಡೋಸ್ ಹಾಕಿಸಿಕೊಳ್ಳಲು ಜನರು ನಿರ್ಲಕ್ಷ ವಹಿಸುತ್ತಿದ್ದಾರೆ. ನಾಲ್ಕನೇ ಅಲೆಯನ್ನು ತಡೆಯಲು ಜನರು ಕೈ ಜೋಡಿಸಬೇಕು. ಯಾರು ಉದಾಸೀನ ವರ್ತನೆ ಮಾಡುವುದು ಬೇಡ ಎರಡನೇ ಡೋಸ್ ಹಾಗೂ 3ನೇ ಡೋಸ್ ತೆಗೆದುಕೊಳ್ಳುವವರು ಬಾಕಿ ಇದ್ದವರು ಕೂಡಲೇ ತೆಗೆದುಕೊಳ್ಳಿ. ಸೋಂಕು ಹೆಚ್ಚಳವಾದ ಬಳಿಕ ವ್ಯಾಕ್ಸಿನೇಷನ್‌ಗೆ ಮುಗಿಬೀಳಬೇಡಿ. ನಿಮ್ಮ ಅವಧಿ ಬಂದಾಗ ಬೂಸ್ಟರ್ ಡೋಸ್ ಪಡೆಯಿರಿ ಎಂದು ಸಚಿವ ಸುಧಾಕರ್ ಮನವಿ ಮಾಡಿದರು.

ರಾಜ್ಯದಲ್ಲಿ ಮಾಸ್ಕ್ ಕಡ್ಡಾಯ ನಿಯಮ: ದೆಹಲಿ, ಮುಂಬೈ ನಲ್ಲಿ ಕಡ್ಡಾಯ ಮಾಸ್ಕ್ ನಿಯಮ ತೆರವಿನ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು ಸದ್ಯಕ್ಕೆ ರಾಜ್ಯದಲ್ಲಿ ಮಾಸ್ಕ್ ಕಡ್ಡಾಯ ನಿಯಮ ತೆರವು ಮಾಡಲ್ಲ ಎಂದರು. ಹೊಸ ಪ್ರಭೇಧ ಪತ್ತೆಯಾಗಿರುವ ಹಿನ್ನೆಲೆ ಮಾಸ್ಕ್ ಕಡ್ಡಾಯ ನಿಯಮ ತೆರವಿಲ್ಲ. ರಾಜ್ಯದಲ್ಲಿ ಮಾಸ್ಕ್ ಹಾಕದಿದ್ದರೆ ದಂಡ ಹಾಕುತ್ತಿಲ್ಲ, ದಂಡ ಹಾಕರಬಾರದು ಎಂದು ಹೇಳಿದ್ದೇವೆ. ಇನ್ಮುಂದೆ ಸೋಂಕು ಹೆಚ್ಚಾದರೆ ಕಡ್ಡಾಯ ಮಾಸ್ಕ್ ಜಾರಿಗೊಳಿಸಲಾಗುತ್ತದೆ ಎಂದು ಹೇಳಿದರು.

ಸಿಟಿ ಸ್ಕ್ಯಾನ್, MRIಗೆ ಶೀಘ್ರವೇ ಬೆಲೆ ನಿಗದಿ: ಜನರು ವ್ಯಾಕ್ಸಿನ್ ಬಗ್ಗೆ ನಿರ್ಲಕ್ಷ ವಹಿಸಬೇಡಿ ಪ್ರತಿಯೊಬ್ಬರು ವ್ಯಾಕ್ಸಿನ್ ಪಡೆಯಿರಿ, ಖಾಸಗಿ ಆಸ್ಪತ್ರೆಗಳಲ್ಲಿ ಮನಸೋ ಇಚ್ಛೆ ದರ ವಸೂಲಿ ವಿಚಾರಕ್ಕೆ ಪ್ರತಿಕ್ರಿಯಿಸಿದ ಸುಧಾಕರ್, ಖಾಸಗಿ ಆಸ್ಪತ್ರೆಗಳಲ್ಲಿ ಅತಿಯಾದ ಬಿಲ್ಲಿಂಗ್ ಮಾಡೋದು ಗಮನಕ್ಕೆ ಬಂದಿದೆ, ಹೀಗಾಗಿ ಸಿಟಿ ಸ್ಕ್ಯಾನ್, ಎಂಆರ್‌ಐಗೆ 2 ದಿನಗಳಲ್ಲಿ ದರ ನಿಗದಿ ಮಾಡಲಾಗುತ್ತದೆ ಎಂದರು. ರೋಗಿಗಳಿಂದ ಹಣ ಹೆಚ್ಚು ಸುಲಿಗೆ ಮಾಡಿದರೆ ಲೈಸೆನ್ಸ್ ರದ್ದು, ಹೊಸ ದರ ನಿಗದಿಗೆ ಆರೋಗ್ಯ ಆಯುಕ್ತರಿಗೆ ಸೂಚನೆ ನೀಡಲಾಗಿದ್ದು, ಬಿಪಿಎಲ್ ಕಾರ್ಡ್‌ದಾರರಿಗೆ ಒಂದು ದರ ಎಪಿಎಲ್ ಕಾರ್ಡ್‌ದಾರರಿಗೆ ಒಂದು ದರ ನಿಗದಿ ಮಾಡುವುದಾಗಿ ಸಚಿವ ಸುಧಾಕರ್ ತಿಳಿಸಿದ್ದಾರೆ.

ಬೆಂಗಳೂರು ಬಿಷಪ್ ಕಾಟನ್ ಶಾಲೆಗೆ ಮತ್ತೊಂದು ಬಾಂಬ್ ಬೆದರಿಕೆ ಇ–ಮೇಲ್

ಬೆಂಗಳೂರು: ಬೆಂಗಳೂರಿನ ಬಿಷಪ್ ಕಾಟನ್ ಬಾಲಕಿಯರ ಶಾಲೆಗೆ ಶುಕ್ರವಾರ ಮತ್ತೊಂದು ಬಾಂಬ್ ಬೆದರಿಕೆ ಇ–ಮೇಲ್ ಬಂದಿದ್ದು, ಶಾಲೆಯ ಆಡಳಿತ ಮಂಡಳಿ ಕಬ್ಬನ್ ಪಾರ್ಕ್ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಏ.8ರಂದು 14 ಶಾಲೆಗಳಿಗೆ ಬಾಂಬ್ ಇಟ್ಟಿರುವುದಾಗಿ ಅನಾಮಿಕ ಬೆದರಿಕೆ ಇ–ಮೇಲ್ ಬಂದಿತ್ತು. ಇದೀಗ ಮತ್ತೊಂದು ಬೆದರಿಕೆ ಮೇಲ್ ಬಂದಿದ್ದು, ಆತಂಕಕ್ಕೆ ಕಾರಣವಾಗಿದೆ.

ಪೊಲೀಸರಿಂದ ಪರಿಶೀಲನೆ

ಶುಕ್ರವಾರವೇ ಶಾಲೆಗೆ ಬೆದರಿಕೆ ಇ–ಮೇಲ್ ಬಂದಿದೆ. ಆದರೆ ಇಂದು ಮಧ್ಯಾಹ್ನ 1.20ರ ಸುಮಾರಿಗೆ ಇ–ಮೇಲ್ ಚೆಕ್ ಮಾಡಿದಾಗ ವಿಷಯ ತಿಳಿದಿದೆ. ತಕ್ಷಣ ಶಾಲೆಯವರು 1.30ರ ಸುಮಾರಿಗೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಅಂದು ಮ್ಯಾನೇಜ್‌ಮೆಂಟ್ ತರಗತಿಗಳನ್ನು ನಡೆಸಿತ್ತು. ಸೋಮವಾರ ಮಧ್ಯಾಹ್ನ ಬಾಂಬ್ ನಿಷ್ಕ್ರಿಯ ದಳದೊಂದಿಗೆ ಪೊಲೀಸರ ತಂಡ ಶಾಲೆಗೆ ಧಾವಿಸಿ ಪರಿಶೀಲನೆ ನಡೆಸಿದಾಗ ಅದು ಹುಸಿ ಬಾಂಬ್ ಬೆದರಿಕೆ ಎಂದು ತಿಳಿದುಬಂದಿದೆ. ಸೋಮವಾರ ಮಧ್ಯಾಹ್ನ ಶಾಲೆಯ ಪ್ರಾಂಶುಪಾಲರು ಮೇಲ್ ಪರಿಶೀಲಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸುರಕ್ಷತಾ ಕ್ರಮಗಳ ಪ್ರಕಾರ ಬಾಂಬ್ ಸ್ಕ್ವಾಡ್ ಶಾಲೆಯ ಆವರಣವನ್ನು ಎರಡು ಗಂಟೆಗಳಿಗೂ ಹೆಚ್ಚು ಕಾಲ ಪರಿಶೀಲಿಸಿತು ಮತ್ತು ಏಪ್ರಿಲ್ 8 ರಂದು ಶಾಲೆಗಳಿಗೆ ಕಳುಹಿಸಲಾದ 15ನೇ ಮೇಲ್ ಇದಾಗಿದೆ. "ಶಾಲೆಯಲ್ಲಿ ಮಕ್ಕಳಿದ್ದರು ಮತ್ತು ತರಗತಿಗಳು ಶುಕ್ರವಾರ ಮತ್ತು ಸೋಮವಾರ ನಡೆಯುತ್ತಿದ್ದವು ಎಂದು ಪೊಲೀಸರು ತಿಳಿಸಿದ್ದಾರೆ. ದೂರಿನ ಆಧಾರದ ಮೇಲೆ ದುಷ್ಕರ್ಮಿಗಳ ವಿರುದ್ಧ ಸೋಮವಾರ ಸಂಜೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಮಾರುತಿ ಅವರು ಹೇಳಿದ್ದಾರೆ.

ಒಂದನೇ ಪುಟದಿಂದ

ಮುಸುಕುಧಾರಿಗಳ ದಾಳಿ

ಕಡಕೊಳ ಸಮೀಪ ಈ ಕೃತ್ಯ ನಡೆದಿದೆ ಎಂಬುದು ತಿಳಿಯುತ್ತದೆ. ಆದರೆ, ಯಾವ ದಿನ, ಯಾವ ಸಮಯದಲ್ಲಿ ಸಂಭವಿಸಿದೆ ಎಂಬ ನಿಖರ ಮಾಹಿತಿ ಸಿಗದ ಕಾರಣ ಪೊಲೀಸರಿಗೆ ತಲೆ ನೋವಾಗಿ ಪರಿಣಮಿಸಿದೆ. ದಾಳಿಗೊಳಗಾದವರಾಗಲೀ, ಅದನ್ನು ನೋಡಿದವರಾಗಲೀ ಅಥವಾ ಮೊಬೈಲ್‌ನಲ್ಲಿ ವಿಡಿಯೋ ಮಾಡಿದವರಾಗಲೀ ಪೊಲೀಸರಿಗೆ ಮಾಹಿತಿ ನೀಡಿಲ್ಲ. ಕೇರಳದಿಂದ ಬರುತ್ತಿದ್ದ ಕಾರನ್ನು ಬೆನ್ನತ್ತಿ ಬಂದು ಸಿನಿಮೀಯ ಶೈಲಿಯಲ್ಲಿ ದಾಳಿ ಮಾಡಲಾಗಿದೆ ಎಂದು ಹೇಳಲಾಗಿದೆ. ಆದರೆ ಘಟನೆ ಬಗ್ಗೆ ಒಂದೇ ಒಂದು ಸುಳಿವೂ ಸಿಗುತ್ತಿಲ್ಲ ಎಂದು ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಸರ್ಕಲ್ ಇನ್ಸ್‌ಪೆಕ್ಟರ್ ಶಶಿ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಯಾರೂ ಸಹ ಈವರೆಗೂ ತಮಗೆ ಮಾಹಿತಿ ನೀಡಿಲ್ಲ, ನೊಂದವರು ಕೂಡ ಬಂದು ದೂರು ನೀಡದ

ಕಾರಣ ಪ್ರಕರಣದ ಬಗ್ಗೆ ಯಾವ ಸುಳಿವೂ ಸಿಕ್ಕಿಲ್ಲ. ಘಟನೆ ಯಾವ ದಿನ ಯಾವ ಸಮಯದಲ್ಲಿ ನಡೆಯಿತು ಎಂಬುದು ಗೊತ್ತಾದರೆ, ನಾವು ಆ ಮಾರ್ಗದ ಸಿಸಿ ಕ್ಯಾಮರಾಗಳ ಫುಟೇಜಸ್ ಚೆಕ್ ಮಾಡಬಹುದು. ಅದು ಹಳೇ ವಿಡಿಯೋ ಇರ ಬಹುದು ಎಂಬ ಅನುಮಾನವೂ ಇದೆ ಎಂದು ಶಶಿಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಜಿಲ್ಲಾ ಎಸ್ಪಿ ಚೇತನ್, ವೈರಲ್ ಆಗಿರುವ ವೀಡಿಯೋ ಬಗ್ಗೆ ಗಮನ ಹರಿಸಿದ್ದೇವೆ. ಈ ಸಂಬಂಧ ಯಾರೂ ದೂರು ದಾಖಲಿಸದಿದ್ದರೂ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಕಾರಿನ ನೋಂದಣಿ ಸಂಖ್ಯೆ ದೊರೆತಿದ್ದು, ಅದರ ಮಾಲೀಕನನ್ನು ಪತ್ತೆ ಹಚ್ಚಿ ತನಿಖೆ ನಡೆಸಲಾಗುವುದು ಎಂದರು. ಆದರೆ, ವೈರಲ್ ಆಗಿರುವ ವಿಡಿಯೋ ದೃಶ್ಯವು ಜನರನ್ನು ಬೆಚ್ಚಿ ಬೀಳಿಸಿದೆ. ಕಾರನ್ನು ಬೆನ್ನತ್ತಿ ಬಂದು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಹಾಡಹಗಲೇ ದಾಳಿ ಮಾಡಿ, ಅದೇ ಕಾರಿನೊಂದಿಗೆ ಮುಸುಕುಧಾರಿಗಳು ಪರಾರಿಯಾಗಿರುವುದು ಭಯ ಹುಟ್ಟಿಸುವಂತಿದೆ.

ದಂಧೆಕೋರರ ಅಟ್ಟಹಾಸ...

ಹೆದ್ದಾರಿಯಲ್ಲಿ ಇದೇ ರೀತಿ ಕೇರಳ ಮೂಲದವರು ಪ್ರಯಾಣಿಸುತ್ತಿದ್ದ ಕಾರುಗಳನ್ನು ಅಡ್ಡಗಟ್ಟಿ, ಅವರಿಂದ ಹಣ ದರೋಡೆ ಮಾಡುವುದು ಅಥವಾ ಕಾರನ್ನೇ ಅಪಹರಿಸಿ ಅದರಲ್ಲಿದ್ದ ಹಣ ದೋಚಿ ಯಾವುದೋ ಸ್ಥಳದಲ್ಲಿ ಕಾರನ್ನು ಬಿಟ್ಟು ಹೋದಂತಹ ಪ್ರಕರಣಗಳು ಈಗಾಗಲೇ ವರದಿಯಾಗಿವೆ. ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಕೆಲ ಪ್ರಕರಣಗಳು ದಾಖಲಾಗಿವೆ. ಇಂತಹ ಕೃತ್ಯಗಳು ನಡೆದಾಗ ಬೆಂಗಳೂರಿನಿಂದ ಚಿನ್ನ ಖರೀದಿಸಿ ತರುವಾಗ ಅಥವಾ ಬೆಂಗಳೂರಲ್ಲಿ ಚಿನ್ನ ಮಾರಾಟ ಮಾಡಿ ಹಣ ಕೊಂಡೊಯ್ಯುತ್ತಿದ್ದಾಗ ದರೋಡೆ ನಡೆದಿದೆ ಎಂದು ಪೊಲೀಸ್ ಠಾಣೆಗಳಲ್ಲಿ ಸಾಮಾನ್ಯವಾಗಿ ದೂರು ದಾಖಲಾಗುತ್ತದೆ. ಆದರೆ, ನಿಜಕ್ಕೂ ಚಿನ್ನ ಮಾರಾಟ ಮಾಡಿದ ಹಣ ದರೋಡೆಯೇ? ಅಥವಾ ಹವಾಲಾ ಹಣವನ್ನು ಮತ್ತೊಂದು ತಂಡದವರು ದೋಚಿದಾಗ ಈ ರೀತಿ ದೂರು ದಾಖಲಿಸಲಾಗುತ್ತಿದೆಯೇ? ಎಂಬ ಪ್ರಶ್ನೆಗಳು ಉದ್ಭವಿಸಿವೆ.

ರಾಜ್ಯದ ಕಾನೂನು ಸುವ್ಯವಸ್ಥೆ ಹಾಳು ಮಾಡುವ ಮೂಲಕ ಜನರಲ್ಲಿ ಭಯಭೀತ ವಾತಾವರಣ ಉಂಟು ಮಾಡುವ ಕೃತ್ಯಕ್ಕೆ ಕೆಲ ದುಷ್ಕರ್ಮಿಗಳು ಕೈಹಾಕಿದಂತಿದೆ. ಸ್ಥಳೀಯ ಪೊಲೀಸರು ಈ ಬಗ್ಗೆ ಎಚ್ಚೆತ್ತುಕೊಳ್ಳದಿದ್ದಲ್ಲಿ, ಗಡಿ ಜಿಲ್ಲೆಗಳಲ್ಲಿ ಕಾನೂನು ಸುವ್ಯವಸ್ಥೆ ನಿಯಂತ್ರಣಕ್ಕೆ ಬಾರದಷ್ಟು ಹದಗೆಡುವ ಅಪಾಯವಿದೆ.

ಲಂಕೆಯಲ್ಲಿ ಅಂಬೇಡ್ಕರ್ ಪುತ್ಥಳಿ ಅನಾವರಣ

ಅಂಬೇಡ್ಕರ್ ಜಯಂತಿಯಂದೇ 3 ರಸ್ತೆ ಅಭಿವೃದ್ಧಿ ಕಾಮಗಾರಿ ಘೋಷಣೆ: ಎಸ್‌ಟಿಎಸ್

ಸರಗೂರು, ಏ.11(ನಾಗೇಶ್)– ಲಂಕೆ ಗ್ರಾಮಸ್ಥರ ಬೇಡಿಕೆಯಂತೆ ಪ್ರಮುಖ 3 ರಸ್ತೆಗಳಿಗೆ ಅನುದಾನ ನೀಡಿ, ಏ.14ರ ಅಂಬೇಡ್ಕರ್ ಜಯಂತಿಯಂದೇ ಕಾಮಗಾರಿ ಘೋಷಿಸಲಾಗುವುದು ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಭರವಸೆ ನೀಡಿದರು.

ತಾಲೂಕಿನ ಲಂಕೆ ಗ್ರಾಮದಲ್ಲಿ ಡಾ.ಬಿ. ಆರ್.ಅಂಬೇಡ್ಕರ್ ಪುತ್ಥಳಿ ಅನಾವರಣ ಗೊಳಿಸಿ ಮಾತನಾಡಿದ ಅವರು, ಗ್ರಾಮಕ್ಕೆ ಬರುವಾಗ ಈ ಭಾಗದ ರಸ್ತೆಗಳನ್ನು ಗಮನಿಸಿದೆ ಸಾಕಷ್ಟು ಹದಗೆಟ್ಟಿದೆ. ಹೀಗಾಗಿ ಅಂಬೇಡ್ಕರ್ ಜಯಂತಿಯಂದು ರಸ್ತೆಗಳ ಅಭಿವೃದ್ಧಿ ಕಾಮಗಾರಿ ಘೋಷಣೆ ಮಾಡುತ್ತೇವೆ. ಅಲ್ಲದೇ ಗ್ರಾಮಸ್ಥರು ಸಲ್ಲಿಸಿರುವ ವಿವಿಧ ಬೇಡಿಕೆಗಳನ್ನು ಸಹ ಸಂಬಂಧಪಟ್ಟ ಮಂತ್ರಿಗಳೊಡನೆ ಚರ್ಚಿಸಿ ಸಮಸ್ಯೆ ಬಗೆಹರಿಸತ್ತೇನೆ ಎಂದು ಭರವಸೆ ನೀಡಿದರು.

ಹೆಚ್.ಡಿ.ಕೋಟೆ ಮತ್ತು ಸರಗೂರು ಶೇ.60ರಷ್ಟು ಅರಣ್ಯ ಪ್ರದೇಶ ಹೊಂದಿದ್ದು, ಈ ಭಾಗಕ್ಕೆ ಸಾಕಷ್ಟು ನೀರಾವರಿ ಸೌಲಭ್ಯ ಕಲ್ಪಿಸಬೇಕು. ರೈತರ ಮನವಿಯಂತೆ ಜಮೀನಿನ ದುರಸ್ತಿ ಮಾಡಬೇಕು, ಮೂಲ ಸೌಕರ್ಯಗಳ ಕಲ್ಪಿಸುವ ನಿಟ್ಟಿನಲ್ಲಿ ಸಿಎಸ್‌ಆರ್ ನಿಧಿಯನ್ನು ಈ ಭಾಗಕ್ಕೆ ಬಳಕೆ ಮಾಡುವ ಉದ್ದೇಶ ಹೊಂದಿದ್ದೇವೆ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಸಹ ಉತ್ತಮ ಕೆಲಸ ಮಾಡುತ್ತಿದ್ದಾರೆ. ಕಾಡಾನೆಗಳ ಹಾವಳಿ ತಡೆಗಟ್ಟುವುದು, ಕುಡಿಯುವ ನೀರಿನ ವ್ಯವಸ್ಥೆ, ಕೆರೆ ತುಂಬಿಸುವ ಯೋಜನೆಗಳಿಗಾಗಿ ಸರ್ಕಾರದ ಗಮನ ಸೆಳೆಯುವಲ್ಲಿ ಶ್ರಮಿಸಿದ್ದಾರೆ ಎಂದರು.

ಉರಿಲಿಂಗಪೆದ್ದಿ ಶಾಖಾ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿ, ದೇಶದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ರಂತಹ ಮಹಾನ್ ವ್ಯಕ್ತಿಗಳ ಆದರ್ಶಗಳು ವಿಜೃಂಭಿಸಬೇಕಿತ್ತು. ಆದರೆ ಇಂದು ಆಯುಧಗಳು ವಿಜೃಂಭಿಸುವಂತಾಗಿದೆ ಅಂಬೇಡ್ಕರ್ ಕನಸ್ಸಿನಂತೆ ಶಿಕ್ಷಣಕ್ಕೆ ಹೆಚ್ಚು ಹೊತ್ತು ನೀಡಿ ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಪುಸ್ತಕಗಳನ್ನು ನೀಡಬೇಕು. ಅಂಬೇಡ್ಕರ್ ಅವರನ್ನು ನಾವು ಮೆರವಣಿಗೆಯಲ್ಲಿ ಕಾಣಲು ಸಾಧ್ಯವಿಲ್ಲ ಬದಲಿಗೆ ಬರವಣಿಗೆಯಲ್ಲಿ ಕಾಣಬೇಕು. ನಮ್ಮದು ಪೆನ್ನುಗಳ ಭಾರತವಾಗಬೇಕು. ಅದಕ್ಕಾಗಿ ನಾವು ಮೊದಲು ಆದರ್ಶ ಕಲಿಸಿದ ಬುದ್ಧ, ಬಸವ, ಅಂಬೇಡ್ಕರ್, ವಾಲ್ಮೀಕಿ, ಕನಕದಾಸರಂತಹ ಮಹನೀಯರನ್ನು ಜಾತಿಯ ಕಣ್ಣಿನಲ್ಲಿ ನೋಡದೆ ಅವರ ಆದರ್ಶಗಳನ್ನು ಎಲ್ಲರು ಅಳವಡಿಸಿಕೊಳ್ಳಬೇಕು ಎಂದರು.

ಶಾಸಕ ಎನ್.ಮಹೇಶ್ ಮಾತನಾಡಿ, ಅಂಬೇಡ್ಕರ ಅವರ ಆದರ್ಶಗಳಾದ ಶಿಕ್ಷಣ, ಸಂಘಟನೆ, ಹೋರಾಟ ಕುರಿತು ಸಂಪೂರ್ಣ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಎಸ್‌ಪಿ ಸೇರಿದಂತೆ ಎಲ್ಲಾ ಪಕ್ಷಗಳ ಮುಖಂಡರು ಭಾಗಿಯಾಗಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷ ಎಂ.ಅಪ್ಪಣ್ಣ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜೆಡಿಎಸ್ ಯುವ ಮುಖಂಡ ಜಯಪ್ರಕಾಶ್, ಬಿಜೆಪಿ ಮುಖಂಡ ಶಂಕರೇಗೌಡ, ಮೊತ್ತ ಬಸವರಾಜು, ಗುರುಸ್ವಾಮಿ, ಮನುಗನಹಳ್ಳಿ ಗ್ರಾಪಂ ಅಧ್ಯಕ್ಷೆ ಶೀಲಾ, ಉಪಾಧ್ಯಕ್ಷ ನಟರಾಜು, ಸದಸ್ಯರಾದ ನಂದಕುಮಾರ್, ರಮೇಶ್, ಮಹೇಶ್, ಜೇತವನ ಬುದ್ಧ ವಿಹಾರದ ಸುಗತಪಾಲ ಬಂತೇಜಿ, ದೇವನಹಳ್ಳಿ ಬುದ್ಧ ವಿಹಾರದ ಜ್ಞಾನಲೋಕ ಬಂತೇಜಿ, ವಿನಯವನ ಬುದ್ಧ ವಿಹಾರದ ಧಮ್ಮವೀರ ಬಂತೇಜಿ, ಸಾರನಾಥ ಬುದ್ಧ ವಿಹಾರದ ಗೌತಮಿ ಬಂತೇಜಿ, ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ.ನರಸಿಂಹ ಮೂರ್ತಿ, ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ, ರಾಜಣ್ಣ, ಜಿ.ಗೋಪಾಲಸ್ವಾಮಿ, ಪಪಂ ಅಧ್ಯಕ್ಷೆ ರಾಧಿಕ, ಸದಸ್ಯ ಎಸ್.ಎಲ್. ರಾಜಣ್ಣ, ಜಿಪಂ ಮಾಜಿ ಸದಸ್ಯರಾದ ಲಕ್ಷ್ಮಣ್, ಪಿ.ರವಿ, ವೆಂಕಟಸ್ವಾಮಿ, ಬಿಎಸ್‌ಪಿ ಜಿಲ್ಲಾ ಉಸ್ತುವಾರಿ ಶಿವರಾಜು ಹಾಗೂ ದೇವದತ್, ಮುಖಂಡರಾದ ಲಂಕೆ ಶ್ರೀನಿವಾಸ್, ಸೋಮಶೇಖರ್, ರಮೇಶ್, ಮರಿಲಿಂಗಯ್ಯ, ಅಕ್ಕ ಪಕ್ಕದ ಗ್ರಾಮದ ಮುಖಂಡರು ಇತರರಿದ್ದರು.



ಸರಗೂರು ತಾಲೂಕಿನ ಲಂಕೆ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಅನಾವರಣ ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿದರು.

> ಡಾ.ಬಿ.ಆರ್.ಅಂಬೇಡ್ಕರ್ ನೀಡಿದ ಮೀಸಲಾತಿಯಿಂದಾಗಿ ನಾವು ಈ ಸ್ಥಾನದಲ್ಲಿ ಕುಳಿತಿದ್ದೇವೆ. ಅಂತಹ ಮಹನೀಯರ ಒಂದು ಬೃಹತ್ ಪ್ರತಿಮೆ ನಮ್ಮ ದೇಶದಲ್ಲಿ ನಿರ್ಮಾಣವಾಗಬೇಕು. ನಮ್ಮ ರಾಜ್ಯದಲ್ಲಿ ಪ.ಜಾತಿ ಮತ್ತು ಪ.ಪಂಗಡ ಜನಸಂಖ್ಯೆಯಲ್ಲಿ ಏರಿಕೆ ಕಂಡಿದೆ. ಆದ್ದರಿಂದ ಸರ್ಕಾರ ಮೀಸಲಾತಿ ಹೆಚ್ಚಿಸಬೇಕು.
> –ಅನಿಲ್ ಚಿಕ್ಕಮಾದು, ಶಾಸಕ.

ಬೈಕ್‌ಗೆ ಲಾರಿ ಡಿಕ್ಕಿ: ಸವಾರ ಸಾವು



ತಿ.ನರಸೀಪುರ, ಏ.11 (ಎಸ್‌ಕೆ)– ಬೈಕ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಸೋಸಲೆ ಗ್ರಾಮದ ಬಳಿ ಸೋಮವಾರ ಸಂಜೆ ನಡೆದಿದೆ. ತಾಲೂಕಿನ ಹಸುವಟ್ಟಿ ಗ್ರಾಮದ ಲೇ. ಮಹದೇವ ಎಂಬುವರ ಪುತ್ರ ಮನು (25) ಸಾವನ್ನಪ್ಪಿದವರು. ಈತ ಕಾರ್ಯ ನಿಮಿತ್ತ ತಿ.ನರಸೀಪುರಕ್ಕೆ ಆಗಮಿಸಿ ಸ್ವಗ್ರಾಮಕ್ಕೆ ಬೈಕ್‌ನಲ್ಲಿ ಹೋಗುತ್ತಿದ್ದ ವೇಳೆ ಸೋಸಲೆ ಗ್ರಾಮದ ಬಳಿ ಎದುರಿನಿಂದ ಬಂದ ಲಾರಿ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡ ಮನು ಸ್ಥಳದಲ್ಲೇ ಮೃತಪಟ್ಟಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬನ್ನೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು, ಶವವನ್ನು ತಿ.ನರಸೀಪುರ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿದರು.



ವಿಶ್ವ ಆರೋಗ್ಯ ದಿನದ ಪ್ರಯುಕ್ತ ಬೈಲಕುಪ್ಪೆಯ ಟಿಬೆಟಿಯನ್ ಚಿಲ್ಡ್ರನ್ ವಿಲೇಜ್ ಶಾಲಾ ವಿದ್ಯಾರ್ಥಿಗಳಿಂದ ಸ್ವಚ್ಛತಾ ಅಭಿಯಾನ ನಡೆಸಲಾಯಿತು. 300 ವಿದ್ಯಾರ್ಥಿಗಳು, 15 ಶಿಕ್ಷಕರು ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ಬೈಲಕುಪ್ಪೆ ಕ್ಯಾಂಪ್‌ನ ಪ್ರಮುಖ ರಸ್ತೆ ಬದಿಗಳಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು ತೆರವುಗೊಳಿಸಿ, ಚರಂಡಿಗಳಲ್ಲಿದ್ದ ತ್ಯಾಜ್ಯ ತೆರವುಗೊಳಿಸಿದರು.

ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಭೂಮಿಪೂಜೆ



ಕೆ.ಆರ್.ನಗರ, ಏ. 11 (ಕೆಟಿಆರ್)– ಪಟ್ಟಣದ ತೋಪಮ್ಮನವರ ದೇವಾಲಯದ ಆವರಣದಲ್ಲಿ ಶುದ್ದ ಕುಡಿಯುವ ನೀರು ಘಟಕ ನಿರ್ಮಾಣಕ್ಕೆ ದೇವಾಲಯದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸಿ.ಎ. ರಾಜು, ಕಾರ್ಯ ದರ್ಶಿ ಕೆ.ಎಂ.ಮಹದೇವ್ ಹಾಗೂ ಸಮಿತಿ ಸದಸ್ಯರು ಭೂಮಿ ಪೂಜೆ ನೆರವೇರಿಸಿದರು.

ದೇವಸ್ಥಾನದ ಜೀರ್ಣೋದ್ಧಾರ ಸಮಿತಿಗೆ ದೇವಾಲಯದ ಆವರಣದಲ್ಲಿರುವ ವಾಣಿಜ್ಯ ಮಳಿಗೆ ಹಾಗೂ ಸಮುದಾಯ ಭವನದಿಂದ ಬರುವ ಆದಾಯದಲ್ಲಿ ದೇವ ಸ್ಥಾನವನ್ನು ಸಾಕಷ್ಟು ಅಭಿವೃದ್ಧಿಪಡಿಸಲಾಗಿದ್ದು, ಭಕ್ತರಿಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಒದಗಿಸಲಾಗಿದೆ ಎಂದು ಮಾಹಿತಿ ನೀಡಿದ ಅಧ್ಯಕ್ಷ ಸಿ.ಎ.ರಾಜು, ದೇವಸ್ಥಾನದ ಸುತ್ತಮುತ್ತಲ ಬಡಾವಣೆಗಳ ಜನತೆಗೆ ಶುದ್ಧ ಕುಡಿಯುವ ನೀರು ನೀಡುವ ಉದ್ದೇಶದಿಂದ ಕೇವಲ 2 ರೂ.ಗಳಿಗೆ 20 ಲೀಟರ್ ಶುದ್ಧ ನೀರು ಪೂರೈಸುವ ಸುಸಜ್ಜಿತವಾದ ಘಟಕವನ್ನು ಆರಂಭಿಸಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭ ದೊಡ್ಡೇಕೊಪ್ಪಲು ಗ್ರಾಮ ಪಂಚಾಯಿತಿ ಸದಸ್ಯರಾದ ಕೆ.ಪಿ. ಜಗದೀಶ್, ನಂಜುಂಡ, ಮಾಜಿ ಸದಸ್ಯರಾದ ಮಾಟೇಗೌಡ, ಕೆ.ಎನ್.ರವಿ, ಜೀರ್ಣೋದ್ಧಾರ ಸಮಿತಿ ಸದಸ್ಯರಾದ ಲಾಲನಹಳ್ಳಿಯೋಗೀಶ್, ಗೀತಾಮಹೇಶ್, ಅಶೋಕ್, ಹೆಚ್.ಆರ್.ಮಧುಚಂದ್ರ, ಜಯರಾಮು, ಚನ್ನಪ್ಪ, ರಾಜೇಂದ್ರ ಮತ್ತಿತರರು ಹಾಜರಿದ್ದರು.

ಟೈರ್ ಸ್ಫೋಟಗೊಂಡು ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ: ಬಾಲಕಿ ಸಾವು

ತಿ.ನರಸೀಪುರ, ಏ.11(ಎಸ್‌ಕೆ)– ಟೈರ್ ಸ್ಫೋಟಗೊಂಡು ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಬಾಲಕಿ ಮೃತಪಟ್ಟು, ನಾಲ್ವರು ಗಾಯಗೊಂಡಿರುವ ಘಟನೆ ತಾಲೂಕಿನ ಮೂಗೂರು ಗ್ರಾಮದ ಬಳಿ ಭಾನುವಾರ ನಡೆದಿದೆ.



ನಂಜನಗೂಡು ತಾಲೂಕಿನ ಮುಸಗೆ ಗ್ರಾಮದ ನಿವಾಸಿ ಶಂಕರಲಿಂಗು ಎಂಬುವರ ಪುತ್ರಿ ರುದಿಕ್ಷಾ(7) ಮೃತಪಟ್ಟ ಬಾಲಕಿ. ಕಾರಿನಲ್ಲಿದ್ದ ಶಂಕರಲಿಂಗು, ಅವರ ಸಂಬಂಧಿಕರಾದ ಮಾದಪ್ಪ, ಅಮೃತ ಹಾಗೂ ನಾಗಮಣಿ ಎಂಬುವರು ಗಾಯಗೊಂಡು ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಶಂಕರಲಿಂಗು ಅವರು ಮಾರುತಿ ಕಾರಿ(ಕೆಎ.10, ಓ.5500)ನಲ್ಲಿ ತನ್ನ ಅಕ್ಕನ ಗಂಡ ಮಾದಪ್ಪ, ಮಗಳು ರುದಿಕ್ಷಾ, ಸಂಬಂಧಿಕರಾದ ಅಮೃತ, ನಾಗಮಣಿ ಹಾಗೂ ಶಿವಕುಮಾರ್ ಅವರೊಂದಿಗೆ ಮಹದೇಶ್ವರ ಬೆಟ್ಟಕ್ಕೆ ತೆರಳಿ ಪೂಜೆ ಮುಗಿಸಿಕೊಂಡು ರಾತ್ರಿ 9 ಗಂಟೆ ವಾಪಸ್ಸಾಗುತ್ತಿದ್ದ ವೇಳೆ ರಾತ್ರಿ 11.30ರಲ್ಲಿ ಮೂಗೂರು ಬಳಿ ಕಾರಿನ ಹಿಂಭಾಗದ ಬಲ ಬದಿಯ ಟೈರ್ ಸ್ಫೋಟಗೊಂಡಿದೆ. ಈ ವೇಳೆ ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ಕಾರಿನ ಹಿಂಬದಿ ಕುಳಿತಿದ್ದ ಶಂಕರಲಿಂಗು, ಅವರ ಮಗಳು ರುದಿಕ್ಷಾಳ ಮುಖ ಸೇರಿದಂತೆ ಇತರೆ ಭಾಗಗಳಿಗೆ ತೀವ್ರ ಪೆಟ್ಟಾಗಿದೆ. ಅಲ್ಲದೇ ಕಾರಿನಲ್ಲಿದ್ದ ಅಮೃತ, ನಾಗಮಣಿ ಅಪಘಾತದಲ್ಲಿ ಗಾಯಗೊಂಡರೆ ಕಾರು ಚಾಲಕ ಮಾದಪ್ಪರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ.

ಗಾಯಗೊಂಡವರನ್ನು ಸ್ಥಳೀಯರ ಸಹಕಾರದೊಂದಿಗೆ ತಿ.ನರಸೀಪುರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಬಾಲಕಿ ರುದೀಕ್ಷಾ ಸಾವನ್ನಪ್ಪಿದ್ದು, ಉಳಿದವರಿಗೆ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತಕ್ಕೆ ಕಾರು ಚಾಲನೆ ಮಾಡುತ್ತಿದ್ದ ಮಾದಪ್ಪರ ಅತಿವೇಗ ಹಾಗೂ ನಿರ್ಲಕ್ಷ್ಯವೇ ಕಾರಣ. ಹೀಗಾಗಿ ಆತನ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಶಂಕರಲಿಂಗು ಪಟ್ಟಣ ಪೊಲೀಸರಿಗೆ ದೂರು ನೀಡಿದ್ದು, ಕೇಸು ದಾಖಲಿಸಿಕೊಂಡಿರುವ ಮುಖ್ಯಪೇದೆ ಮಹೇಶ್ ಮುಂದಿನ ಕ್ರಮ ಕೈಗೊಂಡಿದ್ದಾರೆ. ಸಿಪಿಐ ಕೃಷ್ಣಪ್ಪ, ಎಸ್‌ಐ ತಿರುಮಲ್ಲೇಶ್ ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದರು.

ಕಾಡಾನೆ ದಾಳಿಗೆ ತೆಂಗು ಬೆಳೆ ನಾಶ

ಮಲ್ಲುಂಡಿ, ಏ.11(ಚನ್ನಪ್ಪ)– ಕಾಡಾನೆ ದಾಳಿಗೆ ತೆಂಗು ಬೆಳೆ ನಾಶವಾಗಿರುವ ಘಟನೆ ನಂಜನಗೂಡು ತಾಲೂಕಿನ ಬಳ್ಳೂರು ಹುಂಡಿ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದಿದೆ. ಗ್ರಾಮದ ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್ ಎಂಬುವರಿಗೆ ಸೇರಿದ ತೆಂಗಿನ ಬೆಳೆ ನಾಶವಾಗಿ ರುವುದು.



ಭಾನುವಾರ ರಾತ್ರಿ ಜಮೀನಿಗೆ ನುಗ್ಗಿರುವ ಕಾಡಾನೆ ಸುಮಾರು 60ಕ್ಕೂ ಹೆಚ್ಚು ತೆಂಗಿನ ಗಿಡಗಳನ್ನು ನಾಶಪಡಿಸಿ ಪರಾರಿಯಾಗಿದೆ. ಕಷ್ಟಪಟ್ಟು ಬೆಳೆದ ಫಸಲು ಈ ರೀತಿ ಕಾಡು ಪ್ರಾಣಿಗಳ ಪಾಲಾದರೇ ಮಾಡಿರುವ ಸಾಲ ತೀರಿಸುವುದಾದರೂ ಹೇಗೆ? ಅರಣ್ಯ ಇಲಾಖೆ ನಿರ್ಲಕ್ಷ್ಯದಿಂದ ರೈತರು ಬೆಳೆದ ಫಸಲು ಕೈಗೆ ಸಿಗದೆ ಕಾಡು ಪ್ರಾಣಿಗಳ ಪಾಲಾಗುತ್ತಿವೆ. ಹೀಗಾಗಿ ಕೂಡಲೇ ಅರಣ್ಯ ಇಲಾಖೆ ಕಾಡು ಪ್ರಾಣಿಗಳ ಹಾವಳಿ ತಡೆಗಟ್ಟಲು ಅಗತ್ಯ ಕ್ರಮ ಕೈಗೊಂಡು, ಬೆಳೆ ನಾಶವಾಗಿರುವುದಕ್ಕೆ ಸೂಕ್ತ ಪರಿಹಾರ ದೊರಕಿಸಿಕೊಡಬೇಕು ಎಂದು ನಾಗೇಶ್‌ರಾಜ್ ಒತ್ತಾಯಿಸಿದ್ದಾರೆ.

ನಂಜನಗೂಡು ತಾಲೂಕು ಪಂಚಾಯಿತಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ

ಚೆಸ್ಕಾಂ ಅಧಿಕಾರಿಗಳ ಮೇಲೆ ಶಾಸಕ ಹರ್ಷವರ್ಧನ್ ಗರಂ

ನಂಜನಗೂಡು, ಏ.11– ಗ್ರಾಮಗಳಲ್ಲಿ ಭಾಗ್ಯ ಜ್ಯೋತಿ ವಿದ್ಯುತ್ ಸಂಪರ್ಕವನ್ನು ಮಾರ್ಚ್ ತಿಂಗಳಿನಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗಾಗಿ ತಯಾರಿ ನಡೆಸುವ ಸಂದರ್ಭ ಕಡಿತಗೊಳಿಸಿದ್ದೀರಿ, ವಿದ್ಯುತ್ ಮೀಟರ್ ಸಹಿತ ಕಿತ್ತುಕೊಂಡು ಹೋಗಿದ್ದೀರಿ. ಅಧಿಕಾರಿಗಳಿಗೆ ಕನಿಷ್ಠ ಮಾನವೀಯತೆ ಇರಬೇಕು ಎಂದು ಶಾಸಕ ಬಿ.ಹರ್ಷ ವರ್ಧನ್ ಚೆಸ್ಕಾಂ ಅಧಿಕಾರಿಗಳ ಮೇಲೆ ಹರಿಹಾಯ್ದರು.



ನಗರದ ತಾಪಂ ಕಚೇರಿಯಲ್ಲಿ ಸೋಮವಾರ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು.

ಚೆಸ್ಕಾಂ ಎಇಇ ದೇವರಾಜ್ ಮಾತನಾಡಿ, ತಾಲೂಕಿನಲ್ಲಿ ಭಾಗ್ಯಜ್ಯೋತಿ ಯೋಜನೆ ಸಂಪರ್ಕ ಪಡೆದವರು ಉಚಿತ 40 ಯೂನಿಟ್‌ಗಿಂತ ಹೆಚ್ಚಿಗೆ ವಿದ್ಯುತ್ ಬಳಸಿದ್ದರ ಶುಲ್ಕ 21 ಕೋಟಿಗೆ ಹೆಚ್ಚು ಹಣ ವಸೂಲಿ ಮಾಡಬೇಕಾಗಿದೆ. 45 ಗ್ರಾಪಂಗಳು ಒಟ್ಟು 36 ಕೋಟಿ ವಿದ್ಯುತ್ ಶುಲ್ಕ ಬಾಕಿ ಉಳಿಸಿಕೊಂಡಿವೆ. ಮಾರ್ಚ್ ತಿಂಗಳಲ್ಲಿ ಇಲಾಖೆ ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದರಿಂದ ಸಂಪರ್ಕ ಕಡಿತಗೊಳಿಸಬೇಕಾಯಿತು ಎಂದು ಸಮಜಾಯಿಷಿ ನೀಡಿದರು.

ಶಾಸಕ ಹರ್ಷವರ್ಧನ್ ಬಾಕಿ ಹಣದಲ್ಲಿ 500 ರಿಂದ 1 ಸಾವಿರ ಹಣ ಕಟ್ಟುವ ಫಲಾನುಭವಿಗಳಿಗೆ ಮತ್ತೆ ಸಂಪರ್ಕ ಕಲ್ಪಿಸಿ, ಒಟ್ಟಿಗೆ ಹಣ ಕಟ್ಟಲು ಸಾಧ್ಯವಾಗುವುದಿಲ್ಲ ಎಂದು ಸೂಚನೆ ನೀಡಿದರು.

ಶಾಸಕ ಡಾ.ಯತೀಂದ್ರ ಮಾತನಾಡಿ, ಭಾಗ್ಯಜ್ಯೋತಿ ಯೋಜನೆ ಸಂಪರ್ಕ ಪಡೆದವರು 40 ಯೂನಿಟ್‌ಗಿಂತ ಹೆಚ್ಚಿಗೆ ಬಳಸದಂತೆ ತಂತ್ರಜ್ಞಾನ ಬಳಸಿ ತಿಳುವಳಿಕೆ ನೀಡಬೇಕು. ಗ್ರಾಪಂಗಳಿಗೆ ಹೆಚ್ಚಿನ ವರಮಾನ ವಿಲ್ಲ. ಶುಲ್ಕದ ಮೇಲಿನ ಬಡ್ಡಿ ವಜಾ ಮಾಡಿ, ಬಿಲ್ ಕಟ್ಟಿಸಿಕೊಳ್ಳಬೇಕು. ಈ ಬಗ್ಗೆ ಸರ್ಕಾರದೊಂದಿಗೆ ಮಾತನಾಡಿ, ಬಡವರಿಗಾಗಿ ಜಾರಿಗೆ ತಂದ ಭಾಗ್ಯಜ್ಯೋತಿ ಯೋಜನೆ ಉಚಿತವಾಗಿ ನೀಡುವ 40 ಯೂನಿಟ್ ಸೇರಿ ಬಿಲ್ ಹಾಕುತ್ತಿರುವುದಾಗಿ ದೂರು ಬಂದಿದೆ ಎಂದು ತರಾಟೆಗೆ ತೆಗೆದುಕೊಂಡರು.

ಪಡಿತರ ಚೀಟಿಗೆ ನೀಡುವ ಆಹಾರ ಧಾನ್ಯಗಳು ಕೇರಳ ರಾಜ್ಯಕ್ಕೆ ರವಾನೆಯಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರು ಕೇಳಿ ಬರುತ್ತಿದ್ದು, ಈ ಬಗ್ಗೆ ಏನು ಕ್ರಮವಹಿಸಿದ್ದೀರಿ ಎಂದು ಆಹಾರ ಇಲಾಖೆ ಶಿರಸ್ತೇದಾರ್ ಅರವಿಂದ್ ಅವರನ್ನು ಶಾಸಕ ಬಿ.ಹರ್ಷವರ್ಧನ್ ತರಾಟೆಗೆ ತೆಗೆದುಕೊಂಡರು. ಮುಂಬರುವ ದಿನಗಳಲ್ಲಿ ಸಾರ್ವಜನಿಕರಿಂದ ದೂರುಬಾರದಂತೆ ಎಚ್ಚರ ವಹಿಸಿ ಜೊತೆಗೆ ಆಹಾರ ಧಾನ್ಯಗಳನ್ನು ಮಾರಿಕೊಳ್ಳುವ ಕುಟುಂಬಗಳ ಪಡಿತರ ಚೀಟಿಯನ್ನು ರದ್ದುಗೊಳಿಸಿ ಎಂದು ಆದೇಶಿಸಿದರು.

ನಗರದ ಹಳೇ ಬಸ್ ಸ್ಟ್ಯಾಂಡ್‌ನಲ್ಲಿ ಶೌಚಾಲಯ ಸಮಸ್ಯೆ ಉಂಟಾಗಿ ಪ್ರಯಾಣಿಕರಿಗೆ ತೊಂದರೆಯಾಗಿದೆ. ಶೌಚಾಲಯಕ್ಕೆ ಹೆಚ್ಚಿನ ಫಿಟ್ ತೆಗೆಸಿ, ನಾಳೆಯಿಂದಲೇ ಕೆಲಸ ಆರಂಭಿಸಿ ವರದಿ ನೀಡಬೇಕು ಎಂದು ನಗರಸಭೆ ಆಯುಕ್ತ ರಾಜಣ್ಣ ಹಾಗೂ ಸಾರಿಗೆ ಇಲಾಖೆ ಡಿಪೋ ವ್ಯವಸ್ಥಾಪಕ ಶಂಕರ್ ಅವರುಗಳಿಗೆ ಶಾಸಕ ಹರ್ಷವರ್ಧನ್ ತಾಕೀತು ಮಾಡಿದರು. ಕಾಮಗಾರಿಗೆ ಯಾರಾದರೂ ಅಡ್ಡಿಪಡಿಸಿದರೆ ಪೊಲೀಸ್ ನೆರವಿನೊಂದಿಗೆ ಕಾಮಗಾರಿ ನಡೆಸಿ ಎಂದರು.

ಮುದ್ದಹಳ್ಳಿಯ 425 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಬಡಾವಣೆ ಸ್ಥಾಪಿಸಲು ರೈತರಿಂದ ಭೂಮಿ ಪಡೆಯುವ ಕಾರ್ಯ ಕುಟುಂತ್ತಾ ಸಾಗಿದೆ. ಶೀಘ್ರ ಕ್ರಮ ವಹಿಸಬೇಕು. ಕೈಗಾರಿಕೆಗಳಿಗೆ ಭೂಮಿ ನೀಡುವ ರೈತರ ಕುಟುಂಬಗಳಿಗೆ ಕಾರ್ಖಾನೆಗಳಲ್ಲಿ ಖಾಯಂ ಕೆಲಸ ಸಿಗುತ್ತದೆ ಭೂಮಿ ಪಡೆಯುವ ಬಗ್ಗೆ ಮಧ್ಯವರ್ತಿಗಳನ್ನು ಬಿಟ್ಟು ನೇರವಾಗಿ ರೈತರೊಂದಿಗೆ ಸಭೆ ನಡೆಸಿ ಎಂದರು.

ನಗರದ ಪ್ರವಾಸಿ ಮಂದಿರದಲ್ಲಿ ಸಸ್ಯಕಾಶಿ ನಿರ್ಮಾಣ ಕಾಮಗಾರಿಯಲ್ಲಿ 1 ಕೋಟಿ ವೆಚ್ಚದಲ್ಲಿ ವಿಶೇಷ ಸಸ್ಯಗಳನ್ನು ಬೆಳೆಸಲಾಗಿತ್ತು. ಬೇಸಿಗೆಯಲ್ಲಿ ಗಿಡಗಳಿಗೆ ನೀರು ಹಾಕದೆ ಅಮುಲ್ಯ ಗಿಡಗಳು ಒಣಗುತ್ತಿವೆ. ಹೆಚ್ಚಿನ ಕೆಲಸಗಾರರನ್ನು ನೇಮಿಸಿ ಗಿಡಗಳ ಹಾರೈಕೆ ಮಾಡಬೇಕು ಎಂದು ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಚಂದ್ರು ಅವರಿಗೆ ತಾಕೀತು ಮಾಡಿದರು.

ಸಭೆಗೆ ಗೈರು ಹಾಜರಾದ ದೇವರಾಜ ಅರಸು ನಿಗಮಗಳ ಅಧಿಕಾರಿಗಳಿಗೆ ನೋಟೀಸ್ ನೀಡುವಂತೆ ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಎಚ್.ಎಸ್.ಮಹದೇವಸ್ವಾಮಿ, ತಾಪಂ ಇಓ ಶ್ರೀನಿವಾಸ್, ತಹಸೀಲ್ದಾರ್ ಶಿವಮೂರ್ತಿ, ಟಿಎಪಿಸಿಎಂಎಸ್ ಅಧ್ಯಕ್ಷ ಮಹೇಶ್, ಮಲ್ಲಿಕಾರ್ಜುನ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ದೀಪಕ್, ವಾಲ್ಮೀಕಿ ನಿಗಮದ ಭೀಮರಾವ್, ತೋಟಗಾರಿಕಾ ಅಧಿಕಾರಿ ಚಂದ್ರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆ ಕೊನೆ ದಿನವಾದ ಸೋಮವಾರ ಹೆಚ್.ಡಿ.ಕೋಟೆಯ ಸಮರ್ಥ ಫೌಂಡೇಶನ್ ಟ್ರಸ್ಟ್‌ನಿಂದ ಪರೀಕ್ಷೆ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸುತ್ತಿದ್ದ 50ಕ್ಕೂ ಅಧಿಕ ಶಿಕ್ಷಕರನ್ನು ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಅಭಿನಂದಿಸಲಾಯಿತು. ಈ ವೇಳೆ ಪ್ರಾಂಶುಪಾಲ ರಾಜು, ಶಿಕ್ಷಕರಾದ ಆನಂದ್, ಕಾಳೇಗೌಡ, ಸಂಸ್ಥೆ ಸಂಸ್ಥಾಪಕ ಕೆ.ಸಿ.ಪ್ರಕಾಶ್, ಅಧ್ಯಕ್ಷ ಸಿದ್ದಾಚಾರಿ, ಖಜಾಂಚಿ ಸುರೇಶ್, ನಿರ್ದೇಶಕರಾದ ಜಯಶಂಕರ್, ಮಂಜುನಾಥ್, ಕೃಷ್ಣಸ್ವಾಮಿ, ಪ್ರತಿಭಾ, ವಿನುತ, ಉಷಾ, ಮಹೇಶ್, ಸಂದೀಪ್ ಇದ್ದರು.

ಗುಜರಾತ್ ಗೆಲುವಿನ ಓಟಕ್ಕೆ ಎಸ್‌ಆರ್‌ಹೆಚ್ ಬ್ರೇಕ್

ಮುಂಬೈ, ಏ.11– ನಾಯಕನಿಗೆ ತಕ್ಕ ಆಟವಾಡಿದ ಕೇನ್ ವಿಲಿಯಮ್ಸನ್ ಅವರ ಆಕರ್ಷಕ ಅರ್ಧಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ಗುಜರಾತ್ ಟೈಟನ್ಸ್ ವಿರುದ್ಧ 8 ವಿಕೆಟ್‌ಗಳ ಜಯ ಸಾಧಿಸಿದೆ. ಈ ಮೂಲಕ ಗುಜರಾತ್ ಗೆಲುವಿನ ಓಟಕ್ಕೆ ಬ್ರೇಕ್ ಹಾಕಿದೆ.



ಇಲ್ಲಿನ ಡಿ.ವೈ.ಪಾಟೀಲ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟನ್ಸ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿತು. ಗುಜರಾತ್ ಪರ ಶುಭ್‌ಮನ್ ಗಿಲ್ 7, ಸಾಯಿ ಸುದರ್ಶನ್ 11, ಮ್ಯಾಥ್ಯೂ ವೇಡ್ 19 ಹಾಗೂ ಡೇವಿಡ್ ಮಿಲ್ಲರ್ 12 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ನಾಯಕ ಹಾರ್ದಿಕ್ ಪಾಂಡ್ಯ 1 ಸಿಕ್ಸರ್, 4 ಬೌಂಡರಿ ಒಳಗೊಂಡ 50 ರನ್ ಗಳಿಸಿ ಔಟಾದರು. ಅಲ್ಲದೇ ಅಭಿನವ್ ಮನೋಹರ್ ಕೂಡ 35 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಹೈದರಾಬಾದ್ ಪರ ಭುವನೇಶ್ವರ್ ಕುಮಾರ್ ಹಾಗೂ ಟಿ.ನಟರಾಜನ್ ತಲಾ 2, ಉಮ್ರಾನ್ ಮಲ್ಲಿಕ್, ಮಾರ್ಕೋ ಜಾನ್ಸನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಬಳಿಕ ಗುರಿ ಬೆನ್ನತ್ತಿದ ಸನ್‌ರೈಸರ್ಸ್ ಹೈದರಾಬಾದ್, ವಿಲಿಯಮ್ಸನ್ ಕಲಾತ್ಮಕ ಬ್ಯಾಟಿಂಗ್ ನೆರವಿನಿಂದ ಇನ್ನೂ ಐದು ಎಸೆತ ಬಾಕಿ ಉಳಿದಿರುವಂತೆಯೇ 19.1 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 168 ರನ್ ಗಳಿಸಿ ಗುರಿ ತಲುಪಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಅಭಿಷೇಕ್ ಶರ್ಮಾ ಹಾಗೂ ನಾಯಕ ನಾಯಕ ಕೇನ್ ವಿಲಿಯಮ್ಸನ್ ಉತ್ತಮ ಆರಂಭವೊದಗಿಸಿದರು. ಇವರಿಬ್ಬರು ಮೊದಲ ವಿಕೆಟ್‌ಗೆ 64 ರನ್ ಒಟ್ಟುಗೂಡಿಸಿದರು. ಆದರೆ ಉತ್ತಮವಾಗಿ ಆಡುತ್ತಿದ್ದ ಅಭಿಷೇಕ್ ಶರ್ಮಾ 32 ಎಸೆತ, 6 ಬೌಂಡರಿ ಒಳಗೊಂಡ 42 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅತ್ತ ಆಕರ್ಷಕ ಇನ್ನಿಂಗ್ಸ್ ಕಟ್ಟಿದ ವಿಲಿಯಮ್ಸನ್ 42 ಎಸೆತಗಳಲ್ಲಿ ಅರ್ಧಶತಕ ಸಾಧನೆ ಮಾಡಿದರು. ಆದರೆ ಅರ್ಧಶಕದ ಬೆನ್ನಲ್ಲೇ 46 ಎಸೆತಗಳಲ್ಲಿ 2 ಬೌಂಡರಿ, 4 ಸಿಕ್ಸರ್ ಒಳಗೊಂಡ 57 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಕೊನೆಯ ಹಂತದಲ್ಲಿ ನಿಕೋಲಸ್ ಪೂರನ್ (34) ಉತ್ತಮ ಬ್ಯಾಟಿಂಗ್ ಪ್ರದರ್ಶಿಸುವ ಮೂಲಕ ಸನ್‌ರೈಸರ್ಸ್‌ಗೆ ಅರ್ಹ ಗೆಲುವು ಒದಗಿಸಿಕೊಡುವಲ್ಲಿ ನೆರವಾದರು. ಉಳಿದಂತೆ ರಾಹುಲ್ ತ್ರಿಪಾಠಿ 17, ಏಡನ್ ಮಾಕ್ರಂ 12 ರನ್ ಗಳಿಸಿದರು. ಗುಜರಾತ್ ಪರ ಹಾರ್ದಿಕ್ ಪಾಂಡ್ಯ, ರಶೀದ್ ಖಾನ್ ತಲಾ ಒಂದೊಂದು ವಿಕೆಟ್ ಪಡೆದರು. ಕೇನ್ ವಿಲಿಯಮ್ಸನ್ ಪಂದ್ಯಶ್ರೇಷ್ಠ ಪಡೆದರು.

ಶ್ರೀನಿವಾಸ್ ನಿಧನ



ಭೇರ್ಯ, ಏ.11– ತಾಲೂಕಿನ ಮಳಲಿ ಗ್ರಾಮದ ನಿವೃತ್ತ ಶಿಕ್ಷಕ ಶ್ರೀನಿವಾಸ್(75) ಸೋಮವಾರ ನಿಧನರಾದರು. ಮೃತರು ಪತ್ನಿ ಹಾಗೂ ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ 10.30ಕ್ಕೆ ಸ್ವಗ್ರಾಮದಲ್ಲಿ ನಡೆಯಲಿದೆ. ಮೃತರ ನಿಧನಕ್ಕೆ ವಿಧಾನ ಪರಿಷತ್ ಮಾಜಿ ಸದಸ್ಯ ಟಿ.ಕೆ.ಚಿನ್ನಸ್ವಾಮಿ, ಕೆ.ಆರ್.ನಗರ ತಾಲೂಕು ಬಲಿಜ (ಬಣಜಿಗ) ಸಂಘದ ಅಧ್ಯಕ್ಷ ದಯಾನಂದ್, ಉಪಾಧ್ಯಕ್ಷ ರಘುನಾಥ್, ಪ್ರಧಾನ ಕಾರ್ಯದರ್ಶಿ ರಾಘು, ಪತ್ರಕರ್ತ ಭೇರ್ಯ ಮಹೇಶ್ ಸಂತಾಪ ಸೂಚಿಸಿದ್ದಾರೆ.

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ, ಮೈಸೂರು ಜಿಲ್ಲೆ–571107
ದೂರವಾಣಿ ಸಂಖ್ಯೆ: 08223–273036, ಈ–ಮೇಲ್: itstaff_ulb_periyapatna@yahoo.com.

ಸಂ:ಪಿಪುಸ/ತಾಂತ್ರಿಕ/ಜೆಇ.2/ಟೆಂಡರ್–02/2022–23 ದಿನಾಂಕ: 06.04.2022

ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಕಟಿಸುವುದೇನೆಂದರೆ ಪಿರಿಯಾಪಟ್ಟಣ ಪುರಸಭೆಯ "ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ Proposed land use map, Proposed Circulation Pattern Map & Draft master plan report ಒಳಗೊಂಡ ವಿಸ್ತೃತ ಯೋಜನಾ ವರದಿ (ಡಿಪಿಆರ್)" ಯನ್ನು ತಯಾರಿಸಲು ಪುರಸಭಾ ನಿಧಿ ಅನುದಾನದಲ್ಲಿ ಅಂದಾಜು ಮೊತ್ತ 4,90,000/– ರೂ.ಗಳಿಗೆ ಅರ್ಹ ಸಂಸ್ಥೆಯಿಂದ ನೋಂದಾಯಿಸಲ್ಪಟ್ಟಿರುವ ಏಜೆನ್ಸಿದಾರರಿಂದ ಕನಿಷ್ಠ ದರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಏಜೆನ್ಸಿದಾರರು ನಿಗದಿತ ಇ.ಎಂ.ಡಿ.ಯನ್ನು (ಮುಖ್ಯಾಧಿಕಾರಿಗಳ ಹೆಸರಿಗೆ ಡಿ.ಡಿ) ಯನ್ನು ಲಕೋಟೆಯಲ್ಲಿಟ್ಟು ಸೀಲ್ ಮಾಡಿ ಸೂಚಿತ ದಿನಾಂಕದೊಳಗೆ ಮುಖ್ಯಾಧಿಕಾರಿಗಳು, ಪುರಸಭೆ, ಪಿರಿಯಾಪಟ್ಟಣ ಇವರಿಗೆ ತಲುಪಿಸತಕ್ಕದ್ದು. ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಸರಬರಾಜಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು. **ಟೆಂಡರ್ ಸಲ್ಲಿಸುವ ವಿವರ :** (1) ಟೆಂಡರ್ ಫಾರಂಗಳಿಗೆ ಕೋರಿಕೆ ಅರ್ಜಿ ಸಲ್ಲಿಸಲು ಮತ್ತು ಟೆಂಡರ್ ಫಾರಂ ಪಡೆಯಲು ಕೊನೆಯ **ದಿನಾಂಕ: 26.04.2022 ರ ಸಾಯಂಕಾಲ 03.30 ಗಂಟೆವರೆಗೆ** (2) ಭರ್ತಿ ಮಾಡಿದ ಸೀಲ್ಡ್ ಟೆಂಡರ್‌ಗಳನ್ನು ಕಛೇರಿಗೆ ಸಲ್ಲಿಸುವ ಕೊನೆಯ **ದಿನಾಂಕ: 28.04.2022 ರ ಸಾಯಂಕಾಲ 04.00 ಗಂಟೆವರೆಗೆ** (3) ಟೆಂಡರ್ ತೆರೆಯುವ **ದಿನಾಂಕ: 28.04.2022 ರ ಸಾಯಂಕಾಲ 05.00 ಗಂಟೆ** ಅಥವಾ ಸೂಚಿಸಿದ ದಿನದಂದು. 4) ಕೆಲಸ ಮುಗಿಸಬೇಕಾದ ಅವಧಿ : **90 ದಿನಗಳು.** 5) ಟೆಂಡರ್ ಫಾರಂ ಬೆಲೆ: **500(+ ಜಿಎಸ್‌ಟಿ)** 6) ಇ.ಎಂ.ಡಿ. ಮೊತ್ತ: **12,250/– ರೂ.**

ಸಹಿ/–
(ಶ್ರೀಮತಿ.ನಾಗರತ್ನ ಉಮೇಶ್)
ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ

ವಾಸಾಸಂಇ/ಮೈಸೂರು/ಶಿರಡಿ ಸಾಯಿ/17/2022–23

ಸಹಿ/–
(ಶ್ರೀ.ಪ್ರಸನ್ನ.ಎ.ಟಿ) ಮುಖ್ಯಾಧಿಕಾರಿ,
ಪುರಸಭೆ, ಪಿರಿಯಾಪಟ್ಟಣ